# ಭಾರತ ಅರಣ್ಯ ಅಧಿನಿಯಮ, 1927

**30.03.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 32ನೇ ಸಂಪುಟದ 1ನೇ ಸಂಚಿಕೆಯಲ್ಲಿ 36 ರಿಂದ 59ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ – I

### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಅರ್ಥ ವಿವರಣೆ ಖಂಡ

### ಅಧ್ಯಾಯ – II

### ಮೀಸಲಿಟ್ಟ ಅರಣ್ಯಗಳ ಬಗ್ಗೆ

3. ಅರಣ್ಯಗಳನ್ನು ಮೀಸಲಿಡುವ ಅಧಿಕಾರ
4. ರಾಜ್ಯ ಸರ್ಕಾರದಿಂದ ಅಧಿಸೂಚನೆ
5. ಅರಣ್ಯ ಹಕ್ಕುಗಳು ಕೂಡಿಬರುವ ಬಗ್ಗೆ ಪ್ರತಿಷೇಧ
6. ಅರಣ್ಯ ಇತ್ಯರ್ಥಾಧಿಕಾರಿಯಿಂದ ಉದ್ಘೋಷಣೆ
7. ಅರಣ್ಯ ಇತ್ಯರ್ಥಾಧಿಕಾರಿಯಿಂದ ವಿಚಾರಣೆ
8. ಅರಣ್ಯ ಇತ್ಯರ್ಥಾಧಿಕಾರಿಯ ಅಧಿಕಾರಗಳು
9. ಹಕ್ಕುಗಳು ಅಳಿದುಹೋಗುವುದು
10. ಸರದಿ ಸಾಗುವಳಿ ಪದ್ಧತಿಗೆ ಸಂಬಂಧಪಟ್ಟ ಕ್ಲೇಮುಗಳ ಪರಿಗಣನೆ
11. ಹಕ್ಕುಗಳನ್ನು ಕ್ಲೇಮು ಮಾಡಲಾಗಿರುವ ಭೂಮಿಯನ್ನು ಆರ್ಜಿಸುವ ಅಧಿಕಾರ
12. ಮೇಯಿಸುವ ಅಥವಾ ಅರಣ್ಯೋತ್ಪನ್ನದ ಹಕ್ಕುಗಳ ಕುರಿತಾದ ಕ್ಲೇಮುಗಳ ಬಗ್ಗೆ ಆದೇಶ
13. ಅರಣ್ಯ ಇತ್ಯರ್ಥಾಧಿಕಾರಿಯು ಮಾಡಬೇಕಾದ ದಾಖಲು
14. ಕ್ಲೇಮನ್ನು ಅಂಗೀಕರಿಸುವಲ್ಲಿ ಅವನು ಮಾಡಬೇಕಾದ ದಾಖಲು
15. ಅಂಗೀಕರಿಸಲಾದ ಹಕ್ಕುಗಳನ್ನು ಚಲಾಯಿಸುವುದು
16. ಹಕ್ಕುಗಳ ಪರಿವರ್ತನೆ
17. 11ನೇ ಪ್ರಕರಣ, 12ನೇ ಪ್ರಕರಣ, 15ನೇ ಪ್ರಕರಣ ಅಥವಾ 16ನೇ ಪ್ರಕರಣಗಳ ಮೇರೆಗೆ ಮಾಡಿದ ಆದೇಶಗಳ ಮೇಲೆ ಅಪೀಲು
18. 17ನೇ ಪ್ರಕರಣದ ಮೇರೆಗೆ ಅಪೀಲು
19. ಪ್ಲೀಡರುಗಳು
20. ಮೀಸಲಿಟ್ಟ ಅರಣ್ಯವೆಂದು ಘೋಷಿಸುವ ಅಧಿಸೂಚನೆ
21. ಅರಣ್ಯದ ಆಸುಪಾಸಿನಲ್ಲಿ ಅಂಥ ಅಧಿಸೂಚನೆಯ ಭಾಷಾಂತರದ ಪ್ರಕಟಣೆ
22. 15ನೇ ಪ್ರಕರಣ ಅಥವಾ 18ನೇ ಪ್ರಕರಣದ ಮೇರೆಗೆ ಮಾಡಿದ ವ್ಯವಸ್ಥೆಗಳನ್ನು ಪರಿಷ್ಕರಿಸುವ ಅಧಿಕಾರ
23. ಇಲ್ಲಿ ಉಪಬಂಧಿಸಿರುವಂತಲ್ಲದೆ ಮೀಸಲಿಟ್ಟ ಅರಣ್ಯದ ಮೇಲೆ ಯಾವುದೇ ಹಕ್ಕನ್ನು ಆರ್ಜಿಸಲಾಗದು
24. ಮಂಜೂರಾತಿ ಇಲ್ಲದೆ ಹಕ್ಕುಗಳನ್ನು ಪರಭಾರೆ ಮಾಡಲಾಗದು
25. ಮೀಸಲಿಟ್ಟ ಅರಣ್ಯಗಳಲ್ಲಿ ದಾರಿಗಳು ಮತ್ತು ಜಲಮಾರ್ಗಗಳನ್ನು ತಡೆಯುವ ಅಧಿಕಾರ

26. ಅಂಥ ಅರಣ್ಯಗಳಲ್ಲಿ ನಿಷೇಧಿಸಲಾದ ಕಾರ್ಯಗಳು

27. ಇನ್ನುಮುಂದೆ ಅರಣ್ಯವನ್ನು ಮೀಸಲಿಟ್ಟಿಲ್ಲವೆಂದು ಘೋಷಿಸಲು ಅಧಿಕಾರ

**ಅಧ್ಯಾಯ – III**

**ಗ್ರಾಮ ಅರಣ್ಯಗಳ ಬಗ್ಗೆ**

28. ಗ್ರಾಮ ಅರಣ್ಯಗಳ ರಚನೆ

**ಅಧ್ಯಾಯ – IV**

**ಸಂರಕ್ಷಿತ ಅರಣ್ಯಗಳ ಬಗ್ಗೆ**

29. ಸಂರಕ್ಷಿತ ಅರಣ್ಯಗಳು

30. ಮರಗಳು ಮುಂತಾದವುಗಳನ್ನು ಮೀಸಲಿರಿಸಿ ಅಧಿಸೂಚನೆಯನ್ನು ಹೊರಡಿಸಲು ಅಧಿಕಾರ

31. ಅರಣ್ಯದ ಆಸುಪಾಸಿನಲ್ಲಿ ಅಂಥ ಅಧಿಸೂಚನೆಯ ಭಾಷಾಂತರವನ್ನು ಪ್ರಕಟಿಸುವುದು

32. ಸಂರಕ್ಷಿತ ಅರಣ್ಯಗಳಿಗಾಗಿ ನಿಯಮ ರಚನಾಧಿಕಾರ

33. 30ನೇ ಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಅಥವಾ 32ನೇ ಪ್ರಕರಣದ ಮೇರೆಗಿನ ನಿಯಮಗಳನ್ನು ಉಲ್ಲಂಘಿಸಿ ಮಾಡಿದ ಕಾರ್ಯಗಳಿಗಾಗಿ ದಂಡಗಳು

34. ಕೆಲವು ಪ್ರಕರಣಗಳಲ್ಲಿ ಮಾಡಿದ ಕಾರ್ಯಗಳನ್ನು ಈ ಅಧ್ಯಾಯದಲ್ಲಿರುವುದು ಯಾವುದೂ ನಿಷೇಧಿಸಲಾಗದು

**ಅಧ್ಯಾಯ – V**

**ಸರ್ಕಾರದ ಸ್ವತ್ತಾಗಿರದ ಅರಣ್ಯಗಳು ಮತ್ತು ಭೂಮಿಗಳ ಮೇಲೆ ನಿಯಂತ್ರಣದ ಬಗ್ಗೆ**

35. ವಿಶೇಷ ಉದ್ದೇಶಗಳಿಗಾಗಿ ಅರಣ್ಯಗಳ ಸಂರಕ್ಷಣೆ

36. ಅರಣ್ಯಗಳ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳಲು ಅಧಿಕಾರ

37. ಕೆಲವು ಸಂದರ್ಭಗಳಲ್ಲಿ ಅರಣ್ಯಗಳ ಸ್ವತ್ತು ಹಕ್ಕಿನ ಹರಣ

38. ಒಡೆಯರ ಕೋರಿಕೆಯ ಮೇರೆಗೆ ಅರಣ್ಯಗಳ ಸಂರಕ್ಷಣೆ

**ಅಧ್ಯಾಯ – VI**

**ಚೌಬೀನೆ ಮತ್ತು ಇತರ ಅರಣ್ಯೋತ್ಪನ್ನದ ಮೇಲಿನ ಸುಂಕದ ಬಗ್ಗೆ**

39. ಚೌಬೀನೆ ಮತ್ತು ಇತರ ಅರಣ್ಯೋತ್ಪನ್ನದ ಮೇಲೆ ಸುಂಕವನ್ನು ವಿಧಿಸುವ ಅಧಿಕಾರ

40. ಖರೀದಿ – ಹಣ ಅಥವಾ ಸ್ವಾಮ್ಯ ಶುಲ್ಕಕ್ಕೆ ಪರಿಮಿತಿಯು ಅನ್ವಯವಾಗದಿರುವುದು

**ಅಧ್ಯಾಯ – VII**

**ಸಾಗಣೆಯಲ್ಲಿರುವ ಚೌಬೀನೆ ಮತ್ತು ಇತರ ಅರಣ್ಯೋತ್ಪನ್ನದ ನಿಯಂತ್ರಣದ ಬಗ್ಗೆ**

41. ಅರಣ್ಯೋತ್ಪನ್ನದ ಸಾಗಣೆಯನ್ನು ನಿಯಂತ್ರಿಸಲು ನಿಯಮ ರಚನಾಧಿಕಾರ

41ಎ. ಸೀಮಾಸುಂಕ ಗಡಿಗಳ ಆಚೆ ಚೌಬೀನೆಯ ಸಾಗಣೆಗಳ ಬಗ್ಗೆ ಕೇಂದ್ರ ಸರ್ಕಾರದ ಅಧಿಕಾರಗಳು

42. 41ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಉಲ್ಲಂಘನೆಗಾಗಿ ದಂಡ

43. ಡಿಪೋದಲ್ಲಿ ಅರಣ್ಯೋತ್ಪನ್ನಕ್ಕೆ ಉಂಟಾದ ಹಾನಿಗಾಗಿ ಸರ್ಕಾರ ಮತ್ತು ಅರಣ್ಯಾಧಿಕಾರಿಗಳು ಹೊಣೆಯಲ್ಲ

44. ಡಿಪೋದಲ್ಲಿ ಉಂಟಾಗುವ ಅಪಘಾತದ ಸಂದರ್ಭದಲ್ಲಿ ಎಲ್ಲ ವ್ಯಕ್ತಿಗಳು ನೆರವು ನೀಡಲು ಬದ್ಧವಾಗಿರುವುದು

## ಅಧ್ಯಾಯ – VIII

### ಕೊಚ್ಚಿಕೊಂಡು ಬಂದ ಮತ್ತು ನೆಲಹತ್ತಿದ ಚೌಬೀನೆಯ ಸಂಗ್ರಹಣೆಯ ಬಗ್ಗೆ

45. ಕೆಲವು ಬಗೆಗಳ ಚೌಬೀನೆಯ ಸ್ವಾಮ್ಯವನ್ನು ರುಜುವಾತುಪಡಿಸುವವರೆಗೆ ಅದು ಸರ್ಕಾರದ ಸ್ವತ್ತಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅದನ್ನು ತದನುಸಾರವಾಗಿ ಸಂಗ್ರಹಿಸಬಹುದು

46. ಕೊಚ್ಚಿಕೊಂಡು ಬಂದ ಚೌಬೀನೆಯ ಕ್ಲೇಮುದಾರರಿಗೆ ನೋಟೀಸು

47. ಅಂಥ ಚೌಬೀನೆ ಕುರಿತು ಸಲ್ಲಿಸಿದ ಕ್ಲೇಮಿನ ಬಗ್ಗೆ ಪ್ರಕ್ರಿಯೆ

48. ಕ್ಲೇಮು ಮಾಡದೇ ಇರುವ ಚೌಬೀನೆಯ ವಿಲೆ

49. ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳು ಅಂಥ ಚೌಬೀನೆಯ ಹಾನಿಗಾಗಿ ಹೊಣೆಯಾಗದಿರುವುದು

50. ಚೌಬೀನೆಯನ್ನು ಕ್ಲೇಮುದಾರನ ವಶಕ್ಕೆ ಕೊಡುವುದಕ್ಕಿಂತ ಮುಂಚೆ ಕ್ಲೇಮುದಾರನು ಸಂದಾಯಗಳನ್ನು ಮಾಡುವುದು

51. ನಿಯಮಗಳನ್ನು ರಚಿಸಲು ಮತ್ತು ದಂಡಗಳನ್ನು ನಿಯಮಿಸಲು ಅಧಿಕಾರ

## ಅಧ್ಯಾಯ – IX

### ದಂಡಗಳು ಮತ್ತು ಪ್ರಕ್ರಿಯೆ

52. ವಶಪಡಿಸಿಕೊಳ್ಳುವುದಕ್ಕೆ ಗುರಿಯಾಗುವ ಸ್ವತ್ತಿನ ಅಭಿಗ್ರಹಣ

53. 52ನೇ ಪ್ರಕರಣದ ಮೇರೆಗೆ ಅಭಿಗ್ರಹಿಸಿದ ಸ್ವತ್ತನ್ನು ಬಿಡುಗಡೆ ಮಾಡಲು ಅಧಿಕಾರ

54. ತರುವಾಯದ ಪ್ರಕ್ರಿಯೆ

55. ಯಾವ ಸಂದರ್ಭದಲ್ಲಿ ಅರಣ್ಯೋತ್ಪನ್ನ, ಉಪಕರಣ, ಮುಂತಾದವುಗಳು ಮುಟ್ಟುಗೋಲಿಗೆ ಗುರಿಯಾಗುವುದು

56. ಅರಣ್ಯೋತ್ಪನ್ನಕ್ಕೆ ಸಂಬಂಧಿಸಿದಂತೆ ಮಾಡಲಾದ ಅರಣ್ಯ ಅಪರಾಧದ ಅಧಿವಿಚಾರಣೆಯು ಮುಕ್ತಾಯವಾದ ಮೇಲೆ ಅದರ ವಿಲೆ

57. ಅಪರಾಧಿ ಯಾರೆಂಬುದು ಗೊತ್ತಿಲ್ಲದೇ ಇರುವಾಗ ಅಥವಾ ಅವನು ಸಿಕ್ಕದೇ ಇರುವಾಗ ಪ್ರಕ್ರಿಯೆ

58. 52ನೇ ಪ್ರಕರಣದ ಮೇರೆಗೆ ಅಭಿಗ್ರಹಿಸಲಾದ, ಕೆಟ್ಟುಹೋಗುವ ಸ್ವತ್ತಿನ ಬಗ್ಗೆ ಪ್ರಕ್ರಿಯೆ

59. 55ನೇ ಪ್ರಕರಣದ, 56ನೇ ಪ್ರಕರಣ ಅಥವಾ 57ನೇ ಪ್ರಕರಣದ ಮೇರೆಗಿನ ಆದೇಶಗಳ ಮೇಲೆ ಅಪೀಲು

60. ಸ್ವತ್ತು ಸರ್ಕಾರದಲ್ಲಿ ಯಾವಾಗ ನಿಹಿತಗೊಳ್ಳುವುದು

61. ಅಭಿಗ್ರಹಿಸಲಾದ ಸ್ವತ್ತನ್ನು ಬಿಡುಗಡೆ ಮಾಡುವ ಅಧಿಕಾರದ ರಕ್ಷಣೆ

62. ಅಕ್ರಮ ಅಭಿಗ್ರಹಣಕ್ಕಾಗಿ ದಂಡನೆ

63. ಮರಗಳು ಮತ್ತು ಚೌಬೀನೆಯ ಮೇಲೆ ಖೋಟಾ ಗುರುತುಗಳನ್ನು ಮಾಡುವುದಕ್ಕಾಗಿ ಅಥವಾ ಗುರುತುಗಳನ್ನು ವಿರೂಪಗೊಳಿಸುವುದಕ್ಕಾಗಿ ಮತ್ತು ಗಡಿ ಗುರುತುಗಳನ್ನು ಬದಲಾಯಿಸುವುದಕ್ಕಾಗಿ ದಂಡ

64. ವಾರಂಟಿಲ್ಲದೆ ದಸ್ತಗಿರಿ ಮಾಡಲು ಅಧಿಕಾರ

65. ದಸ್ತಗಿರಿಯಾದ ವ್ಯಕ್ತಿಯನ್ನು ಬಂಧಪತ್ರದ ಮೇಲೆ ಬಿಡುಗಡೆ ಮಾಡಲು ಅಧಿಕಾರ

66. ಅಪರಾಧ ಮಾಡುವುದನ್ನು ಪ್ರತಿಬಂಧಿಸಲು ಅಧಿಕಾರ

67. ಅಪರಾಧಗಳನ್ನು ಕ್ಷಿಪ್ರವಾಗಿ ಅಧಿವಿಚಾರಿಸಲು ಅಧಿಕಾರ

68. ಅಪರಾಧಗಳನ್ನು ರಾಜಿ ಮಾಡಿಕೊಳ್ಳಲು ಅಧಿಕಾರ

69. ಅರಣ್ಯೋತ್ಪನ್ನವು ಸರ್ಕಾರಕ್ಕೆ ಸೇರಿರುತ್ತದೆ ಎಂಬ ಬಗ್ಗೆ ಪೂರ್ವಭಾವನೆ

## ಅಧ್ಯಾಯ – X

### ಜಾನುವಾರು ಅತಿಕ್ರಮಣ

70. ಜಾನುವಾರು ಅತಿಕ್ರಮಣ ಅಧಿನಿಯಮ, 1871ರ ಅನ್ವಯ
71. ಆ ಅಧಿನಿಯಮದ ಮೇರೆಗೆ ನಿಗದಿಪಡಿಸಿದ ಜುಲ್ಮಾನೆಗಳನ್ನು ಬದಲಾಯಿಸಲು ಅಧಿಕಾರ

## ಅಧ್ಯಾಯ – XI

### ಅರಣ್ಯಾಧಿಕಾರಿಗಳ ಬಗ್ಗೆ

72. ರಾಜ್ಯ ಸರ್ಕಾರವು ಅರಣ್ಯಾಧಿಕಾರಿಗಳಲ್ಲಿ ಕೆಲವು ಅಧಿಕಾರಗಳನ್ನು ನಿಹಿತಗೊಳಿಸುವುದು
73. ಅರಣ್ಯಾಧಿಕಾರಿಗಳನ್ನು ಲೋಕನೌಕರರೆಂದು ಭಾವಿಸುವುದು
74. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗೆ ರಕ್ಷಣೆ
75. ಅರಣ್ಯಾಧಿಕಾರಿಯು ವ್ಯಾಪಾರ ಮಾಡದಿರುವುದು

## ಅಧ್ಯಾಯ – XII

### ಪೂರಕ ನಿಯಮಗಳು

76. ನಿಯಮಗಳನ್ನು ರಚಿಸಲು ಹೆಚ್ಚಿನ ಅಧಿಕಾರಗಳು
77. ನಿಯಮಗಳ ಉಲ್ಲಂಘನೆಗಾಗಿ ದಂಡಗಳು
78. ನಿಯಮಗಳು ಯಾವಾಗ ಕಾನೂನಿನ ಬಲವನ್ನು ಹೊಂದಿರುವುದು

## ಅಧ್ಯಾಯ – XIII

### ಸಂಕೀರ್ಣ

79. ಅರಣ್ಯಾಧಿಕಾರಿಗಳು ಮತ್ತು ಪೊಲೀಸು ಅಧಿಕಾರಿಗಳಿಗೆ ಸಹಾಯ ಮಾಡಲು ಸಾರ್ವಜನಿಕ ವ್ಯಕ್ತಿಗಳು ಬದ್ಧರಾಗಿರುವುದು
80. ಸರ್ಕಾರ ಮತ್ತು ಇತರ ವ್ಯಕ್ತಿಗಳ ಜಂಟಿ ಸ್ವತ್ತಾದ ಅರಣ್ಯಗಳ ವ್ಯವಸ್ಥಾಪನೆ
81. ಯಾವ ಸೇವೆಗಾಗಿ ಸರ್ಕಾರಿ ಅರಣ್ಯದ ಉತ್ಪನ್ನದಲ್ಲಿನ ಒಂದು ಭಾಗವನ್ನು ಉಪಯೋಗಿಸಲಾಗುತ್ತಿದೆಯೋ ಆ ಸೇವೆಯನ್ನು ನೆರವೇರಿಸಲು ತಪ್ಪುವುದು
82. ಸರ್ಕಾರಕ್ಕೆ ಬಾಕಿಯಾದ ಹಣದ ವಸೂಲಿ
83. ಅಂಥ ಹಣಕ್ಕಾಗಿ ಅರಣ್ಯೋತ್ಪನ್ನದ ಮೇಲೆ ಧಾರಣಾಧಿಕಾರ
84. ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯು ಭೂ ಆರ್ಜನಾ ಅಧಿನಿಯಮ, 1894ರ ಮೇರೆಗೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯವಾಗಿರುವುದಾಗಿ ಭಾವಿಸುವುದು
85. ಬಂಧಪತ್ರದ ಮೇರೆಗೆ ಬಾಕಿಯಾದ ದಂಡಗಳ ವಸೂಲಿ

85ಎ. ಕೇಂದ್ರ ಸರ್ಕಾರದ ಹಕ್ಕುಗಳ ಬಗ್ಗೆ ಉಳಿಸುವಿಕೆ

86. ನಿರಸನಗಳು

ಅನುಸೂಚಿ.

* * *

# ಭಾರತ ಅರಣ್ಯ ಅಧಿನಿಯಮ, 1927

(1927ರ ಅಧಿನಿಯಮ ಸಂಖ್ಯೆ **16**)

**[21ನೇ ಸೆಪ್ಟೆಂಬರ್, 1927]**

ಅರಣ್ಯಗಳು, ಅರಣ್ಯೋತ್ಪನ್ನದ ಸಾಗಣೆ ಹಾಗೂ ಚೌಬೀನೆ ಮತ್ತು ಇತರ ಅರಣ್ಯೋತ್ಪನ್ನದ ಮೇಲೆ ವಿಧಿಸಬಹುದಾದ ಸುಂಕ–ಇವುಗಳಿಗೆ ಸಂಬಂಧಪಟ್ಟ ಕಾನೂನನ್ನು ಕ್ರೋಢೀಕರಿಸುವ ಅಧಿನಿಯಮ.

ಅರಣ್ಯಗಳು, ಅರಣ್ಯೋತ್ಪನ್ನದ ಸಾಗಣೆ ಹಾಗೂ ಚೌಬೀನೆ ಮತ್ತು ಇತರ ಅನ್ನದ ಮೇಲೆ ವಿಧಿಸಬಹುದಾದ ಸುಂಕ–ಇವುಗಳಿಗೆ ಸಂಬಂಧಪಟ್ಟ ಕಾನೂನನ್ನು ಕ್ರೋಢೀಕರಿಸುವುದು ವಿಹಿತವಾಗಿರುವುದರಿಂದ;

ಅದನ್ನು ಈ ಮುಂದಿನಂತೆ ಅಧಿನಿಯಮಿತಿಗೊಳಿಸಲಾಗಿದೆ:–

## ಅಧ್ಯಾಯ – I

### ಪ್ರಾರಂಭಿಕ

1. **ಚಿಕ್ಕ ಹೆಸರು ಮತ್ತು ವ್ಯಾಪ್ತಿ.**– (1) ಈ ಅಧಿನಿಯಮವನ್ನು ಭಾರತ ಅರಣ್ಯ ಅಧಿನಿಯಮ, 1927 ಎಂದು ಕರೆಯತಕ್ಕದ್ದು.

(2) ಇದು, 1956ರ ನವೆಂಬರ್ ಒಂದರ ನಿಕಟಪೂರ್ವದಲ್ಲಿ 'ಬಿ' – ಭಾಗದ ರಾಜ್ಯಗಳಲ್ಲಿ ಒಳಗೊಂಡಿದ್ದಂಥ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, 1956ರ ನವೆಂಬರ್ ಒಂದರ ನಿಕಟಪೂರ್ವದಲ್ಲಿ ಬಿಹಾರ, ಮುಂಬಯಿ, ಕೊಡಗು, ದೆಹಲಿ, ಮಧ್ಯಪ್ರದೇಶ, ಒರಿಸ್ಸಾ, ಪಂಜಾಬ್, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಒಳಗೊಂಡಿದ್ದಂಥ ರಾಜ್ಯಕ್ಷೇತ್ರಗಳಿಗೆ ಅನ್ವಯವಾಗುತ್ತದೆ; ಆದರೆ, ಯಾವುದೇ ರಾಜ್ಯದ ಸರ್ಕಾರವು, ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ, ಈ ಅಧಿನಿಯಮವು ವ್ಯಾಪ್ತವಾಗುವಂಥ ಆದರೆ ಅದು ಜಾರಿಯಲ್ಲಿ ಇಲ್ಲದೇ ಇರುವ ಆ ಇಡೀ ರಾಜ್ಯದಲ್ಲಿ ಅಥವಾ ಅದರ ಯಾವುದೇ ನಿರ್ದಿಷ್ಟ ಭಾಗದಲ್ಲಿ ಈ ಅಧಿನಿಯಮವನ್ನು ಜಾರಿಗೆ ತರಬಹುದು.

2. **ಅರ್ಥ ವಿವರಣೆ ಖಂಡ.**– ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾಗಿ ಏನಾದರೂ ಇದ್ದ ಹೊರತು,–

(1) 'ಜಾನುವಾರು' ಎಂಬುದರಲ್ಲಿ ಆನೆ, ಒಂಟೆ, ಎಮ್ಮೆ, ಕುದುರೆ, ಹೆಣ್ಣು ಕುದುರೆ, ಹಿಡ ಮಾಡಿದ ಕುದುರೆ, ತಟ್ಟು, ಗಂಡು ಕುದುರೆಮರಿ, ಹೆಣ್ಣು ಕುದುರೆ ಮರಿ, ಹೇಸರಗತ್ತೆ, ಕತ್ತೆ, ಹಂದಿ, ಟಗರು, ಹೆಣ್ಣು ಕುರಿ, ಕುರಿ, ಕುರಿ ಮರಿ, ಆಡು ಮತ್ತು ಆಡಿನ ಮರಿ – ಇವುಗಳು ಒಳಗೊಳ್ಳುತ್ತವೆ.

(2) 'ಅರಣ್ಯಾಧಿಕಾರಿ' ಎಂದರೆ ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶವನ್ನು ಕಾರ್ಯಗತಗೊಳಿಸಲು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೂಲಕ ಅರಣ್ಯಾಧಿಕಾರಿಯು ಮಾಡಬೇಕೆಂದು ಅಗತ್ಯಪಡಿಸಲಾದ ಯಾವುದೇ ಕಾರ್ಯವನ್ನು ಮಾಡಲು ರಾಜ್ಯ ಸರ್ಕಾರವು ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತನಾದ ಯಾರೇ ಅಧಿಕಾರಿಯು, ನೇಮಕ ಮಾಡಬಹುದಾದ ಯಾರೇ ವ್ಯಕ್ತಿ;

(3) 'ಅರಣ್ಯ ಅಪರಾಧ' ಎಂದರೆ ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಅಪರಾಧ;

(4) 'ಅರಣ್ಯೋತ್ಪನ್ನ' ಎಂಬುದು,–

(ಎ) ಅರಣ್ಯದಲ್ಲಿ ಅವು ಲಭ್ಯವಿರಲಿ ಅಥವಾ ಲಭ್ಯವಿಲ್ಲದಿರಲಿ ಅಥವಾ ಅರಣ್ಯದಿಂದ ಅವುಗಳನ್ನು ತಂದಿರಲಿ ಅಥವಾ ತಂದಿಲ್ಲದಿರಲಿ – ಈ ಮುಂದಿನವುಗಳನ್ನು ಎಂದರೆ,–

ಚೌಬೀನೆ, ಇದ್ದಿಲು, ಇಂಡಿಯಾ ರಬ್ಬರ್, ಕಾಚು, ಮರದಿಣ್ಣೆ, ರಾಳ, ನೈಸರ್ಗಿಕ ವಾರ್ನಿಷ, ತೊಗಟೆ, ಅರಗು, ಹಿಪ್ಪೆ ಹೂಗಳು, ಹಿಪ್ಪೆ ಬೀಜಗಳು, ಕುಥ್ ಮತ್ತು ಅಳಲೆಕಾಯಿ; ಮತ್ತು

(ಬಿ) ಅರಣ್ಯದಲ್ಲಿ ಅವು ದೊರಕಿದ್ದಾಗ ಅಥವಾ ಅಲ್ಲಿಂದ ತಂದಿದ್ದಾಗ, ಈ ಮುಂದಿನವುಗಳನ್ನು ಎಂದರೆ,–

(i) ಮರಗಳು ಮತ್ತು ಎಲೆಗಳು, ಹೂಗಳು ಮತ್ತು ಹಣ್ಣುಗಳು ಹಾಗೂ ಇಲ್ಲಿ ಈ ಹಿಂದೆ ಹೆಸರಿಸದೇ ಇರುವ ಮರಗಳ ಯಾವುದೇ ಇತರ ಎಲ್ಲಾ ಭಾಗಗಳು ಅಥವಾ ಉತ್ಪನ್ನ;

(ii) ಮರಗಳಲ್ಲದ ಸಸ್ಯಗಳು (ಹುಲ್ಲು, ಬಳ್ಳಿಗಳು, ಜೊಂಡುಗಳು ಮತ್ತು ಪಾಚಿಯನ್ನೂ ಒಳಗೊಂಡು) ಮತ್ತು ಅಂಥ ಸಸ್ಯಗಳ ಎಲ್ಲಾ ಭಾಗಗಳು ಅಥವಾ ಉತ್ಪನ್ನ;

(iii) ಕಾಡು ಮೃಗಗಳು ಮತ್ತು ಚರ್ಮಗಳು, ದಂತಗಳು, ಕೊಂಬುಗಳು, ಮೂಳೆಗಳು, ರೇಷ್ಮೆ, ರೇಷ್ಮೆ ಗೂಡುಗಳು, ಜೇನುತುಪ್ಪ ಮತ್ತು ಮೇಣ ಮತ್ತು ಪ್ರಾಣಿಗಳ ಇತರ ಎಲ್ಲಾ ಭಾಗಗಳು ಅಥವಾ ಉತ್ಪನ್ನ; ಮತ್ತು

(iv) ಹೆಂಟೆ ಸೌದೆ, ಮೇಲ್ಮಣ್ಣು, ಬಂಡೆ ಮತ್ತು ಖನಿಜಗಳು (ಸುಣ್ಣದ ಕಲ್ಲು, ಜಂಬು ಮಣ್ಣು, ಖನಿಜ ದಿಣ್ಣೆಗಳು) ಮತ್ತು ಗಣಿಗಳು ಅಥವಾ ಕಲ್ಲು ಗಣಿಗಳ ಎಲ್ಲಾ ಉತ್ಪನ್ನಗಳನ್ನು ಒಳಗೊಂಡು

- ಇವುಗಳನ್ನು ಒಳಗೊಳ್ಳುತ್ತದೆ.

(4ಎ) 'ಒಡೆಯ' ಎಂಬುದು ಪ್ರತಿಪಾಲಿತರ ನ್ಯಾಯಾಲಯದ ಅಧೀಕ್ಷಣೆ ಅಥವಾ ಪ್ರಭಾರದಲ್ಲಿ ಇರುವ ಸ್ವತ್ತಿಗೆ ಸಂಬಂಧಿಸಿದಂತೆ, ಆ ನ್ಯಾಯಾಲಯವನ್ನು ಒಳಗೊಳ್ಳುತ್ತದೆ.

(5) 'ನದಿ' ಎಂಬುದು ನೈಸರ್ಗಿಕವಾದ ಅಥವಾ ಕೃತಕವಾದ ಯಾವುದೇ ತೊರೆ, ಕಾಲುವೆ, ಕೊರಕಲು ಅಥವಾ ಇತರ ನಾಲೆಗಳನ್ನು ಒಳಗೊಳ್ಳುತ್ತದೆ.

(6) 'ಚೌಬೀನೆ' ಎಂಬುದು ಮರಗಳು ಬಿದ್ದಿರುವಾಗ ಅಥವಾ ಅವುಗಳನ್ನು ಬೀಳಿಸಿರುವಾಗ ಆ ಮರಗಳನ್ನು, ಮತ್ತು ಯಾವುದೇ ಉದ್ದೇಶಕ್ಕಾಗಿರಲಿ ಅಥವಾ ಅಲ್ಲದಿರಲಿ, ಕತ್ತರಿಸಿರುವುದೇ ಆಗಿರಲಿ ಅಥವಾ ರೂಪಿಸಿರುವುದೇ ಆಗಿರಲಿ ಅಥವಾ ಟೊಳ್ಳು ಮಾಡಿರುವುದೇ ಆಗಿರಲಿ ಎಲ್ಲಾ ಕಟ್ಟಿಗೆಯನ್ನು ಒಳಗೊಳ್ಳುತ್ತದೆ; ಮತ್ತು

(7) 'ಮರ' ಎಂಬುದು ತಾಳೆ, ಬಿದಿರು, ಮೋಟುಗಳು, ಕುರುಚಲು ಗಿಡ ಮತ್ತು ಬೆತ್ತಗಳನ್ನು ಒಳಗೊಳ್ಳುತ್ತದೆ.

## ಅಧ್ಯಾಯ - II

## ಮೀಸಲಿಟ್ಟ ಅರಣ್ಯಗಳ ಬಗ್ಗೆ

**3. ಅರಣ್ಯಗಳನ್ನು ಮೀಸಲಿಡುವ ಅಧಿಕಾರ.-** ರಾಜ್ಯ ಸರ್ಕಾರವು, ಸರ್ಕಾರದ ಸ್ವತ್ತಾಗಿರುವಂಥ ಅಥವಾ ಸರ್ಕಾರವು ಮಾಲೀಕತ್ವದ ಹಕ್ಕುಗಳನ್ನು ಹೊಂದಿರುವಂಥ ಅಥವಾ ಯಾವ ಸಂಪೂರ್ಣ ಅರಣ್ಯೋತ್ಪನ್ನ ಅಥವಾ ಅದರ ಯಾವುದೇ ಭಾಗಕ್ಕೆ ಸರ್ಕಾರವು ಹಕ್ಕನ್ನು ಹೊಂದಿರುವುದೋ ಆ ಯಾವುದೇ ಅರಣ್ಯ ಭೂಮಿ ಅಥವಾ ಬಂಜರು ಭೂಮಿಯನ್ನು ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವ ರೀತಿಯಲ್ಲಿ ಮೀಸಲಿಟ್ಟ ಅರಣ್ಯವೆಂದು ರೂಪಿಸಬಹುದು;

**4. ರಾಜ್ಯ ಸರ್ಕಾರದಿಂದ ಅಧಿಸೂಚನೆ.-** (1) ಯಾವುದೇ ಭೂಮಿಯನ್ನು ಮೀಸಲಿಟ್ಟ ಅರಣ್ಯವೆಂದು ರೂಪಿಸಲು ತೀರ್ಮಾನಿಸಿದಾಗಲೆಲ್ಲಾ, ರಾಜ್ಯ ಸರ್ಕಾರವು ರಾಜಪತ್ರದಲ್ಲಿ,-

(ಎ) ಅಂಥ ಭೂಮಿಯನ್ನು ಮೀಸಲಿಟ್ಟ ಅರಣ್ಯವನ್ನಾಗಿ ರೂಪಿಸಬೇಕೆಂದು ತೀರ್ಮಾನಿಸಲಾಗಿದೆಯೆಂದು ಘೋಷಿಸುವ;

(ಬಿ) ಅಂಥ ಭೂಮಿಯು ಇರುವ ಸ್ಥಳ ಮತ್ತು ಪರಿಮಿತಿಗಳನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ನಿರ್ದಿಷ್ಟಪಡಿಸುವ; ಮತ್ತು

(ಸಿ) ಅಂಥ ಪರಿಮಿತಿಗಳೊಳಗೆ ಇರುವ ಯಾವುದೇ ಭೂಮಿಯಲ್ಲಿ ಅಥವಾ ಅದರ ಮೇಲೆ ಅಥವಾ ಯಾವುದೇ ಅರಣ್ಯೋತ್ಪನ್ನದಲ್ಲಿ ಅಥವಾ ಅದರ ಮೇಲೆ ಯಾರೇ ವ್ಯಕ್ತಿಯ ಹೆಸರಿನಲ್ಲಿ ಇರುವುವೆಂದು ಹೇಳಲಾದ ಯಾವುದೇ ಹಕ್ಕುಗಳ ಬಗ್ಗೆ ವಿಚಾರಣೆ ಮಾಡಲು ಮತ್ತು ಅವುಗಳ ಅಸ್ತಿತ್ವ, ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲು ಮತ್ತು ಈ ಅಧ್ಯಾಯದಲ್ಲಿ ಉಪಬಂಧಿಸಿರುವಂತೆ ಅದರೊಂದಿಗೆ ವ್ಯವಹರಿಸಲು ಒಬ್ಬ ಅಧಿಕಾರಿಯನ್ನು (ಇಲ್ಲಿ ಇನ್ನು ಮುಂದೆ "ಅರಣ್ಯ ಇತ್ಯರ್ಥಾಧಿಕಾರಿ" ಎಂದು ಕರೆಯಲಾಗಿದೆ) ನೇಮಕ ಮಾಡುವ

- ಒಂದು ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

**ವಿವರಣೆ.-** (ಬಿ) ಖಂಡದ ಉದ್ದೇಶಕ್ಕಾಗಿ ಆ ಅರಣ್ಯದ ಪರಿಮಿತಿಗಳನ್ನು ವಿವರಿಸಲು ರಸ್ತೆಗಳು, ನದಿಗಳು, ಬದುಗಳು ಅಥವಾ ಇತರ ಚಿರಪರಿಚಿತ ಅಥವಾ ಕೂಡಲೇ ತಿಳಿಯಬಹುದಾದ ಗಡಿಗಳು ಸಾಕಷ್ಟಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ನೇಮಕಗೊಂಡ ಅಧಿಕಾರಿಯು ಸಾಮಾನ್ಯವಾಗಿ ಅರಣ್ಯ ಇತ್ಯರ್ಥಾಧಿಕಾರಿಯ ಹುದ್ದೆಯನ್ನು ಹೊರತುಪಡಿಸಿ ಇತರ ಯಾವುದೇ ಅರಣ್ಯ ಹುದ್ದೆಯನ್ನು ಧಾರಣ ಮಾಡಿಲ್ಲದ ವ್ಯಕ್ತಿಯಾಗಿರತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ, ಈ ಅಧಿನಿಯಮದ ಮೇರೆಗೆ ಅರಣ್ಯ ಇತ್ಯರ್ಥಾಧಿಕಾರಿಯ ಕರ್ತವ್ಯಗಳನ್ನು ನೆರವೇರಿಸಲು ಮೂವರಿಗೆ ಮೀರದಷ್ಟು ಸಂಖ್ಯೆಯ ಅಧಿಕಾರಿಗಳನ್ನು ನೇಮಕ ಮಾಡಲು ರಾಜ್ಯ ಸರ್ಕಾರವನ್ನು ಪ್ರತಿಬಂಧಿಸತಕ್ಕದ್ದಲ್ಲ. ಹೀಗೆ ನೇಮಕಗೊಳ್ಳುವವರ ಪೈಕಿ ಒಬ್ಬನಿಗಿಂತ ಹೆಚ್ಚಲ್ಲದಷ್ಟು ವ್ಯಕ್ತಿಗಳು ಮೇಲೆ ಹೇಳಿರುವುದನ್ನು ಹೊರತುಪಡಿಸಿ ಯಾವುದೇ ಅರಣ್ಯ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಿಯಾಗಿರತಕ್ಕದ್ದು.

5. **ಅರಣ್ಯ ಹಕ್ಕುಗಳು ಕೂಡಿಬರುವ ಬಗ್ಗೆ ಪ್ರತಿಷೇಧ.-** 4ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಉತ್ತರಾಧಿಕಾರದ ಮೂಲಕವಲ್ಲದೆ ಅಥವಾ ಸರ್ಕಾರವು ಅಥವಾ ಸರ್ಕಾರದ ಪರವಾಗಿ ಅಥವಾ ಆ ಅಧಿಸೂಚನೆಯನ್ನು ಹೊರಡಿಸಿದಾಗ ಯಾರಲ್ಲಿ ಅಂಥ ಹಕ್ಕು ನಿಹಿತವಾಗಿತ್ತೋ, ಆ ಯಾರೇ ವ್ಯಕ್ತಿಯು, ಲಿಖಿತದಲ್ಲಿರುವ ಕೊಡುಗೆ ಅಥವಾ ಮಾಡಿಕೊಂಡ ಕರಾರಿನ ಮೇರೆಗೆ ಅಲ್ಲದೆ, ಅಂಥ ಅಧಿಸೂಚನೆಯಲ್ಲಿ ಒಳಗೊಂಡ ಭೂಮಿಯಲ್ಲಿ ಅಥವಾ ಅದರ ಮೇಲೆ ಯಾವುದೇ ಹಕ್ಕನ್ನು ಆರ್ಜಿಸತಕ್ಕದ್ದಲ್ಲ; ಮತ್ತು ಅಂಥ ಭೂಮಿಯಲ್ಲಿ ಸಾಗುವಳಿಗಾಗಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಯಾವುದೇ ಹೊಸ ಕಡಿಯುವಿಕೆಗಳನ್ನು, ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೆ ಅನುಸಾರವಾಗಿ ಅಲ್ಲದೆ ಮಾಡತಕ್ಕದ್ದಲ್ಲ.

6. **ಅರಣ್ಯ ಇತ್ಯರ್ಥಾಧಿಕಾರಿಯಿಂದ ಉದ್ಘೋಷಣೆ.-** 4ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವಾಗ, ಅರಣ್ಯ ಇತ್ಯರ್ಥಾಧಿಕಾರಿಯು ಅದರಲ್ಲಿ ಒಳಗೊಂಡ ಭೂಮಿಯ ನೆರೆಹೊರೆಯಲ್ಲಿರುವ ಪ್ರತಿಯೊಂದು ಪಟ್ಟಣ ಮತ್ತು ಹಳ್ಳಿಯಲ್ಲಿ ಅಲ್ಲಿನ ಸ್ಥಳೀಯ ಭಾಷೆಯಲ್ಲಿ,-

(ಎ) ಸಾಧ್ಯವಾದಷ್ಟು ಮಟ್ಟಿಗೆ ಪ್ರಸ್ತಾವಿತ ಅರಣ್ಯವು ಇರುವ ಸ್ಥಳ ಮತ್ತು ಅದರ ಪರಿಮಿತಿಗಳನ್ನು ನಿರ್ದಿಷ್ಟಪಡಿಸುವ;

(ಬಿ) ಅಂಥ ಅರಣ್ಯವನ್ನು ಮೀಸಲಿಟ್ಟ ತರುವಾಯ ಉಂಟಾಗುವ ಪರಿಣಾಮಗಳನ್ನು ವಿವರಿಸುವ; ಮತ್ತು

(ಸಿ) ಅಂಥ ಉದ್ಘೋಷಣೆಯ ದಿನಾಂಕದಿಂದ ಮೂರು ತಿಂಗಳುಗಳಿಗಿಂತ ಕಡಿಮೆ ಇಲ್ಲದ ಅವಧಿಯನ್ನು ನಿಗದಿಪಡಿಸುವ ಮತ್ತು 4ನೇ ಪ್ರಕರಣ ಅಥವಾ 5ನೇ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಹಕ್ಕನ್ನು ಕ್ಲೇಮು ಮಾಡುವ ಪ್ರತಿಯೊಬ್ಬ ವ್ಯಕ್ತಿಯನ್ನು ಅಂಥ ಅವಧಿಯೊಳಗೆ ಹಕ್ಕಿನ ಸ್ವರೂಪ ಮತ್ತು ಅದಕ್ಕೆ ಸಂಬಂಧಿಸಿದಂತೆ ಕ್ಲೇಮು ಮಾಡಿರುವ ನಷ್ಟ ಪರಿಹಾರ (ಯಾವುದಾದರೂ ಇದ್ದರೆ) ಅದರ ಮೊಬಲಗು ಮತ್ತು ವಿವರವನ್ನು ನಿರ್ದಿಷ್ಟಪಡಿಸಿ ಬರಹದಲ್ಲಿನ ನೋಟೀಸನ್ನು ಅರಣ್ಯ ಇತ್ಯರ್ಥಾಧಿಕಾರಿಗೆ ಸಲ್ಲಿಸಬೇಕೆಂದು ಅಥವಾ ಆತನ ಮುಂದೆ ಹಾಜರಾಗಿ ಅದನ್ನು ತಿಳಿಸಬೇಕೆಂದು ಅಗತ್ಯಪಡಿಸುವ

- ಉದ್ಘೋಷಣೆಯನ್ನು ಪ್ರಕಟಿಸತಕ್ಕದ್ದು.

7. **ಅರಣ್ಯ ಇತ್ಯರ್ಥಾಧಿಕಾರಿಯಿಂದ ವಿಚಾರಣೆ.-** 6ನೇ ಪ್ರಕರಣದ ಮೇರೆಗೆ ಮಾಡುವ ಎಲ್ಲಾ ಹೇಳಿಕೆಗಳನ್ನು ಅರಣ್ಯ ಇತ್ಯರ್ಥಾಧಿಕಾರಿಯು ದಾಖಲು ಮಾಡಿಕೊಳ್ಳತಕ್ಕದ್ದು ಮತ್ತು ಆ ಪ್ರಕರಣದ ಮೇರೆಗೆ ಕ್ರಮಬದ್ಧವಾಗಿ ಸಲ್ಲಿಸಲಾದ ಕ್ಲೇಮುಗಳು ಮತ್ತು ಸರ್ಕಾರಿ ದಾಖಲೆಗಳಿಂದ ಮತ್ತು ಅವುಗಳ ಬಗ್ಗೆ ತಿಳಿವಳಿಕೆಯನ್ನು ಹೊಂದಿರಬಹುದಾದ ಯಾರೇ ವ್ಯಕ್ತಿಗಳ ಸಾಕ್ಷ್ಯದಿಂದ ಅವುಗಳನ್ನು ಖಚಿತಪಡಿಸಿಕೊಳ್ಳಬಹುದಾದಷ್ಟರಮಟ್ಟಿಗೆ 4ನೇ ಅಥವಾ 5ನೇ ಪ್ರಕರಣದಲ್ಲಿ ನಮೂದು ಮಾಡಿರುವ ಮತ್ತು 6ನೇ ಪ್ರಕರಣದ ಮೇರೆಗೆ ಕ್ಲೇಮು ಮಾಡಿಲ್ಲದೇ ಇರುವ ಯಾವುವೇ ಹಕ್ಕುಗಳು ಇರುವ ಬಗ್ಗೆ ಒಂದು ಅನುಕೂಲಕರವಾದ ಸ್ಥಳದಲ್ಲಿ ವಿಚಾರಣೆ ಮಾಡತಕ್ಕದ್ದು.

8. **ಅರಣ್ಯ ಇತ್ಯರ್ಥಾಧಿಕಾರಿಯ ಅಧಿಕಾರಗಳು.-** ಅಂಥ ವಿಚಾರಣೆಯ ಉದ್ದೇಶಕ್ಕಾಗಿ, ಅರಣ್ಯ ಇತ್ಯರ್ಥಾಧಿಕಾರಿಯು ಈ ಮುಂದಿನ ಅಧಿಕಾರಗಳನ್ನು, ಎಂದರೆ:-

(ಎ) ತಾನಾಗಿಯೇ ಅಥವಾ ಆ ಉದ್ದೇಶಕ್ಕಾಗಿ ಅವನು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಯಾವುದೇ ಭೂಮಿಯನ್ನು ಪ್ರವೇಶಿಸುವ ಮತ್ತು ಅದನ್ನು ಮೋಜಣಿ ಮಾಡುವ, ಗಡಿ ನಿರ್ಣಯ ಮಾಡುವ ಮತ್ತು ಅದರ ನಕಾಶೆಯನ್ನು ತಯಾರಿಸುವ ಅಧಿಕಾರವನ್ನು; ಮತ್ತು

(ಬಿ) ದಾವೆಗಳ ಅಧಿವಿಚಾರಣೆಯಲ್ಲಿ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು

– ಚಲಾಯಿಸಬಹುದು.

**9. ಹಕ್ಕುಗಳು ಅಳಿದು ಹೋಗುವುದು.**– 6ನೇ ಪ್ರಕರಣದ ಮೇರೆಗೆ ಯಾವುದೇ ಹಕ್ಕಿಗೆ ಸಂಬಂಧಿಸಿದಂತೆ ಯಾವುದೇ ಕ್ಲೇಮನ್ನು ಸಲ್ಲಿಸಿಲ್ಲವೋ ಮತ್ತು 7ನೇ ಪ್ರಕರಣದ ಮೇರೆಗೆ ವಿಚಾರಣೆ ನಡೆಸಿ ಆ ಹಕ್ಕು ಇರುವ ಬಗ್ಗೆ ಯಾವುದೇ ತಿಳಿವಳಿಕೆಯನ್ನು ಪಡೆದಿಲ್ಲವೋ ಆ ಹಕ್ಕುಗಳು, 20ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸುವುದಕ್ಕೆ ಮುಂಚೆ ಅವುಗಳನ್ನು ಕ್ಲೇಮು ಮಾಡುವ ವ್ಯಕ್ತಿಯು ಆ ಅರಣ್ಯ ಇತ್ಯರ್ಥಾಧಿಕಾರಿಗೆ 6ನೇ ಪ್ರಕರಣದ ಮೇರೆಗೆ ನಿಗದಿಪಡಿಸಿದ ಅವಧಿಯ ಒಳಗೆ ಅಂಥ ಕ್ಲೇಮನ್ನು ಸಲ್ಲಿಸದೇ ಇರುವುದಕ್ಕಾಗಿ ಅವನಿಗೆ ಸಾಕಷ್ಟು ಕಾರಣವಿತ್ತೆಂದು ಮನದಟ್ಟು ಮಾಡಿಕೊಟ್ಟ ಹೊರತು ಆ ಹಕ್ಕು ಅಳಿದು ಹೋಗತಕ್ಕದ್ದು.

**10. ಸರದಿ ಸಾಗುವಳಿ ಪದ್ಧತಿಗೆ ಸಂಬಂಧಪಟ್ಟ ಕ್ಲೇಮುಗಳ ಪರಿಗಣನೆ.**– (1) ಸರದಿ ಸಾಗುವಳಿಯ ಆಚರಣೆಗೆ ಸಂಬಂಧಿಸಿದ ಕ್ಲೇಮಿನ ಪ್ರಕರಣದಲ್ಲಿ ಅರಣ್ಯ ಇತ್ಯರ್ಥಾಧಿಕಾರಿಯು, ಆ ಕ್ಲೇಮಿನ ಮತ್ತು ಆ ಆಚರಣೆಗೆ ಅವಕಾಶ ಮಾಡಿಕೊಟ್ಟಿರುವ ಅಥವಾ ಅದನ್ನು ನಿಯಂತ್ರಿಸುವಂಥ ಯಾವುದೇ ಸ್ಥಳೀಯ ನಿಯಮ ಅಥವಾ ಆದೇಶದ ಬಗ್ಗೆ ವಿವರಗಳನ್ನು ನಿರೂಪಿಸುವ ಹೇಳಿಕೆಯನ್ನು ದಾಖಲು ಮಾಡತಕ್ಕದ್ದು ಮತ್ತು ಆ ಹೇಳಿಕೆಯನ್ನು ಆ ಆಚರಣೆಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಅನುಮತಿಸಬೇಕೋ ಅಥವಾ ನಿಷೇಧಿಸಬೇಕೋ ಎಂಬ ಬಗ್ಗೆ ತನ್ನ ಅಭಿಪ್ರಾಯದೊಂದಿಗೆ, ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(2) ಆ ಹೇಳಿಕೆ ಮತ್ತು ಅಭಿಪ್ರಾಯವನ್ನು ಸ್ವೀಕರಿಸಿದ ಮೇಲೆ ರಾಜ್ಯ ಸರ್ಕಾರವು, ಆ ಆಚರಣೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಅನುಮತಿಸುವ ಅಥವಾ ನಿಷೇಧಿಸುವ ಆದೇಶವನ್ನು ಮಾಡಬಹುದು.

(3) ಅಂಥ ಆಚರಣೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಅನುಮತಿಸಿದರೆ ಆ ಅರಣ್ಯ ಇತ್ಯರ್ಥಾಧಿಕಾರಿಯು, ಅದನ್ನು ಚಲಾಯಿಸುವುದಕ್ಕಾಗಿ,–

(ಎ) ಸೂಕ್ತ ಬಗೆಯ ಮತ್ತು ಯುಕ್ತ ಅನುಕೂಲಕರ ಸ್ಥಳದಲ್ಲಿರುವ ಸಾಕಷ್ಟು ವಿಸ್ತೀರ್ಣದ ಭೂಮಿಯನ್ನು ಕ್ಲೇಮುದಾರರ ಉದ್ದೇಶಗಳಿಗಾಗಿ ಹೊರತುಪಡಿಸುವ ದೃಷ್ಟಿಯಿಂದ ಇತ್ಯರ್ಥದಲ್ಲಿರುವ ಭೂಮಿಯ ಪರಿಮಿತಿಗಳನ್ನು ಬದಲಾಯಿಸುವ ಮೂಲಕ; ಮತ್ತು

(ಬಿ) ಇತ್ಯರ್ಥದಲ್ಲಿರುವ ಭೂಮಿಯ ಕೆಲವು ಭಾಗಗಳನ್ನು ಪ್ರತ್ಯೇಕವಾಗಿ ಗಡಿ ನಿರ್ಣಯ ಮಾಡಿಸುವ ಮತ್ತು ಅವನು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಅದರಲ್ಲಿ ಸರದಿ ಸಾಗುವಳಿಯನ್ನು ಮಾಡುವ ಕ್ಲೇಮುದಾರನಿಗೆ ಅನುಮತಿ ನೀಡುವ ಮೂಲಕ

– ವ್ಯವಸ್ಥೆ ಮಾಡಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಎಲ್ಲಾ ವ್ಯವಸ್ಥೆಗಳು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

(5) ಎಲ್ಲ ಪ್ರಕರಣಗಳಲ್ಲಿ ಸರದಿ ಸಾಗುವಳಿಯ ಆಚರಣೆಯನ್ನು, ಆ ರಾಜ್ಯ ಸರ್ಕಾರದ ನಿಯಂತ್ರಣ, ಪರಿಬಂಧ ಮತ್ತು ರದ್ದಿಯಾತಿಗೆ ಒಳಪಟ್ಟು, ವಿಶೇಷಾಧಿಕಾರವೆಂದು ಭಾವಿಸತಕ್ಕದ್ದು.

**11. ಹಕ್ಕುಗಳನ್ನು ಕ್ಲೇಮು ಮಾಡಲಾಗಿರುವ ಭೂಮಿಯನ್ನು ಆರ್ಜಿಸುವ ಅಧಿಕಾರ.**– (1) ದಾರಿಯ ಹಕ್ಕು ಅಥವಾ ಮೇಯಿಸುವ ಹಕ್ಕು ಅಥವಾ ಅರಣ್ಯೋತ್ಪನ್ನದ ಅಥವಾ ಜಲಮಾರ್ಗದ ಹಕ್ಕು – ಇವುಗಳನ್ನು ಹೊರತುಪಡಿಸಿ ಯಾವುದೇ ಭೂಮಿಯಲ್ಲಿ ಅಥವಾ ಅದರ ಮೇಲಿನ ಹಕ್ಕಿನ ಪ್ರಕರಣದಲ್ಲಿ ಅರಣ್ಯ ಇತ್ಯರ್ಥಾಧಿಕಾರಿಯು ಅದನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸುವ ಅಥವಾ ತಿರಸ್ಕರಿಸುವ ಆದೇಶವನ್ನು ಮಾಡತಕ್ಕದ್ದು.

(2) ಅಂಥ ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಿದರೆ ಅರಣ್ಯ ಇತ್ಯರ್ಥಾಧಿಕಾರಿಯು,–

(i) ಪ್ರಸ್ತಾವಿತ ಅರಣ್ಯದ ಪರಿಮಿತಿಗಳಿಂದ ಅಂಥ ಭೂಮಿಯನ್ನು ಹೊರತುಪಡಿಸತಕ್ಕದ್ದು; ಅಥವಾ

(ii) ಅದರ ಒಡೆಯನು ತನ್ನ ಹಕ್ಕುಗಳನ್ನು ಬಿಟ್ಟುಕೊಡುವುದಕ್ಕಾಗಿ ಅವನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು; ಅಥವಾ

(iii) ಅಂಥ ಭೂಮಿಯನ್ನು ಭೂ ಆರ್ಜನಾ ಅಧಿನಿಯಮ, 1894 (1894ರ 1)ರ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಆರ್ಜಿಸಲು ಮುಂದುವರಿಯತಕ್ಕದ್ದು.

(3) ಅಂಥ ಅರಣ್ಯ ಭೂಮಿಯನ್ನು ಹಾಗೆ ಆರ್ಜಿಸುವ ಉದ್ದೇಶಕ್ಕಾಗಿ,–

(ಎ) ಅರಣ್ಯ ಇತ್ಯರ್ಥಾಧಿಕಾರಿಯನ್ನು, ಭೂ ಆರ್ಜನಾ ಅಧಿನಿಯಮ, 1894 (1894ರ 1)ರ ಮೇರೆಗೆ ವ್ಯವಹರಿಸುತ್ತಿರುವ ಕಲೆಕ್ಟರನೆಂದು ಭಾವಿಸತಕ್ಕದ್ದು;

(ಬಿ) ಕ್ಲೇಮುದಾರನನ್ನು, ಆ ಅಧಿನಿಯಮದ 9ನೇ ಪ್ರಕರಣದ ಮೇರೆಗೆ ಹಿತಾಸಕ್ತಿಯನ್ನು ಹೊಂದಿರುವ ಮತ್ತು ಅದರ ಮೇರೆಗೆ ಕೊಟ್ಟ ನೋಟೀಸಿನ ಅನುಸರಣೆಯಲ್ಲಿ ಅವನ ಮುಂದೆ ಹಾಜರಾಗುವ ವ್ಯಕ್ತಿಯಾಗಿರುವನೆಂದು ಭಾವಿಸತಕ್ಕದ್ದು;

(ಸಿ) ಆ ಅಧಿನಿಯಮದ ಹಿಂದಿನ ಪ್ರಕರಣಗಳ ಉಪಬಂಧಗಳನ್ನು ಪಾಲಿಸಲಾಗಿದೆ ಎಂದು ಭಾವಿಸತಕ್ಕದ್ದು; ಮತ್ತು

(ಡಿ) ಕಲೆಕ್ಟರನು ಕ್ಲೇಮುದಾರನ ಸಮ್ಮತಿಯೊಂದಿಗೆ, ಅಥವಾ ನ್ಯಾಯಾಲಯವು ಆ ಎರಡೂ ಪಕ್ಷಕಾರರ ಸಮ್ಮತಿಯೊಂದಿಗೆ ಭೂಮಿಯ ರೂಪದಲ್ಲಿ ಅಥವಾ ಭಾಗಶಃ ಭೂಮಿಯ ರೂಪದಲ್ಲಿ ಮತ್ತು ಭಾಗಶಃ ಹಣದ ರೂಪದಲ್ಲಿ ನಷ್ಟ ಪರಿಹಾರವನ್ನು ಕೊಡಬಹುದು.

**12. ಮೇಯಿಸುವ ಅಥವಾ ಅರಣ್ಯೋತ್ಪನ್ನದ ಹಕ್ಕುಗಳ ಕುರಿತಾದ ಕ್ಲೇಮುಗಳ ಬಗ್ಗೆ ಆದೇಶ.–** ಹುಲ್ಲುಗಾವಲು ಅಥವಾ ಅರಣ್ಯೋತ್ಪನ್ನದ ಹಕ್ಕುಗಳಿಗೆ ಸಂಬಂಧಪಟ್ಟ ಕ್ಲೇಮಿನ ಪ್ರಕರಣದಲ್ಲಿ ಅರಣ್ಯ ಇತ್ಯರ್ಥಾಧಿಕಾರಿಯು ಅದನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸುವ ಅಥವಾ ತಿರಸ್ಕರಿಸುವ ಆದೇಶವನ್ನು ಮಾಡತಕ್ಕದ್ದು.

**13. ಅರಣ್ಯ ಇತ್ಯರ್ಥಾಧಿಕಾರಿಯು ಮಾಡಬೇಕಾದ ದಾಖಲು.–** ಅರಣ್ಯ ಇತ್ಯರ್ಥಾಧಿಕಾರಿಯು 12ನೇ ಪ್ರಕರಣದ ಮೇರೆಗಿನ ಆದೇಶವನ್ನು ಮಾಡುವಾಗ ಕಾರ್ಯಸಾಧ್ಯವಾಗಬಹುದಾದಷ್ಟರಮಟ್ಟಿಗೆ,–

(ಎ) ಹಕ್ಕನ್ನು ಕ್ಲೇಮು ಮಾಡುವ ವ್ಯಕ್ತಿಯ ಹೆಸರು, ತಂದೆಯ ಹೆಸರು, ಜಾತಿ, ನಿವಾಸ ಮತ್ತು ವೃತ್ತಿ; ಮತ್ತು

(ಬಿ) ಯಾವ ಹೊಲಗಳಿಗೆ ಅಥವಾ ಹೊಲಗಳ ಗುಂಪುಗಳಿಗೆ ಸಂಬಂಧಿಸಿದಂತೆ ಅಂಥ ಹಕ್ಕುಗಳನ್ನು ಚಲಾಯಿಸಲು ಕ್ಲೇಮು ಮಾಡಲಾಗಿದೆಯೋ ಆ ಎಲ್ಲಾ ಹೊಲಗಳು ಅಥವಾ ಹೊಲಗಳ ಗುಂಪುಗಳು (ಯಾವುದಾದರೂ ಇದ್ದರೆ) ಅವುಗಳ ವಿವರಣೆ, ಅವು ಇರುವ ಸ್ಥಳ ಮತ್ತು ವಿಸ್ತೀರ್ಣವನ್ನು ಮತ್ತು ಎಲ್ಲಾ ಕಟ್ಟಡಗಳು (ಯಾವುದಾದರೂ ಇದ್ದರೆ) ಅವುಗಳ ವಿವರಣೆ ಮತ್ತು ಇರುವ ಸ್ಥಳ

– ಇವುಗಳನ್ನು ದಾಖಲು ಮಾಡತಕ್ಕದ್ದು.

**14. ಕ್ಲೇಮನ್ನು ಅಂಗೀಕರಿಸುವಲ್ಲಿ ಅವನು ಮಾಡಬೇಕಾದ ದಾಖಲು.–** ಅರಣ್ಯ ಇತ್ಯರ್ಥಾಧಿಕಾರಿಯು 12ನೇ ಪ್ರಕರಣದ ಮೇರೆಗಿನ ಯಾವುದೇ ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಿದರೆ, ಅವನು, ಆ ಕ್ಲೇಮುದಾರನು ಅರಣ್ಯದಲ್ಲಿ ಕಾಲಕಾಲಕ್ಕೆ ಮೇಯಿಸಲು ಹಕ್ಕುಳ್ಳವನಾಗಿರುವಂಥ ಜಾನುವಾರುಗಳ ಸಂಖ್ಯೆ ಮತ್ತು ಅವುಗಳ ವಿವರಣೆ ಮತ್ತು ಅಂಥ ಮೇಯಿಸುವಿಕೆಯನ್ನು ಅನುಮತಿಸಿರುವಂಥ ಋತುಮಾನ, ಯಾವ ಪ್ರಮಾಣದ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನವನ್ನು ತೆಗೆದುಕೊಳ್ಳಲು ಅಥವಾ ಸ್ವೀಕರಿಸಲು ಕಾಲಕಾಲಕ್ಕೆ ಅವನನ್ನು ಅಧಿಕೃತಗೊಳಿಸಲಾಗಿದೆಯೋ ಆ ಪ್ರಮಾಣ ಮತ್ತು ಆ ಪ್ರಕರಣವು ಅಗತ್ಯಪಡಿಸಬಹುದಾದಂಥ ಇತರ ವಿವರಗಳನ್ನು ನಿರ್ದಿಷ್ಟಪಡಿಸಿ ಆ ಕ್ಲೇಮನ್ನು ಎಷ್ಟರಮಟ್ಟಿಗೆ ಅಂಗೀಕರಿಸಲಾಗಿದೆಯೋ ಅದನ್ನು ಸಹ ದಾಖಲು ಮಾಡತಕ್ಕದ್ದು. ಕ್ಲೇಮು ಮಾಡಲಾಗಿರುವ ಹಕ್ಕುಗಳನ್ನು ಚಲಾಯಿಸುವ ಮೂಲಕ ಪಡೆದ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನವನ್ನು ಮಾರಾಟ ಮಾಡಬಹುದೇ ಅಥವಾ ವಸ್ತು ವಿನಿಮಯ ಮಾಡಿಕೊಳ್ಳಬಹುದೇ ಹೇಗೆ ಎಂಬುದನ್ನು ಸಹ ಅವನು ದಾಖಲು ಮಾಡತಕ್ಕದ್ದು.

**15. ಅಂಗೀಕರಿಸಲಾದ ಹಕ್ಕುಗಳನ್ನು ಚಲಾಯಿಸುವುದು.–** (1) ಅಂಥ ದಾಖಲನ್ನು ಮಾಡಿದ ತರುವಾಯ ಅರಣ್ಯ ಇತ್ಯರ್ಥಾಧಿಕಾರಿಯು, ಶಕ್ಯಾನುಸಾರ, ಯಾವ ಮೀಸಲಿಟ್ಟ ಅರಣ್ಯಕ್ಕೆ ಸಂಬಂಧಿಸಿದಂತೆ ಆ ಕ್ಲೇಮನ್ನು ಮಾಡಲಾಗಿದೆಯೋ ಆ ಮೀಸಲಿಟ್ಟ ಅರಣ್ಯವನ್ನು ಸುವ್ಯವಸ್ಥೆಯಲ್ಲಿಟ್ಟುಕೊಂಡು ಬರುವ ಬಗ್ಗೆ ಯುಕ್ತ ಗಮನವನ್ನು ಕೊಟ್ಟು, ಹಾಗೆ ಅಂಗೀಕರಿಸಿರುವ ಹಕ್ಕುಗಳನ್ನು ನಿರಂತರವಾಗಿ ಚಲಾಯಿಸುವುದನ್ನು ಸುನಿಶ್ಚಿತಗೊಳಿಸುವಂಥ ಆದೇಶಗಳನ್ನು ಮಾಡಬಹುದು.

(2) ಈ ಉದ್ದೇಶಕ್ಕಾಗಿ ಅರಣ್ಯ ಇತ್ಯರ್ಥಾಧಿಕಾರಿಯು,–

(ಎ) ಅಂಥ ಕ್ಲೇಮುದಾರರ ಉದ್ದೇಶಕ್ಕಾಗಿ ಸಾಕಷ್ಟು ವಿಸ್ತೀರ್ಣದ ಮತ್ತು ಯುಕ್ತವಾಗಿ ಅನುಕೂಲಕರ ಸ್ಥಳದಲ್ಲಿರುವ ಯಾವುದೇ ಇತರ ಅರಣ್ಯ ಪ್ರದೇಶವನ್ನು ನಿರೂಪಿಸಬಹುದು ಮತ್ತು ಹಾಗೆ ಅಂಗೀಕರಿಸುವಷ್ಟರ ಮಟ್ಟಿಗೆ (ಸಂದರ್ಭಾನುಸಾರ) ಅವರಿಗೆ ಹುಲ್ಲುಗಾವಲು ಅಥವಾ ಅರಣ್ಯೋತ್ಪನ್ನದ ಬಗ್ಗೆ ಹಕ್ಕನ್ನು ಪ್ರದಾನ ಮಾಡಿರುವ ಆದೇಶವನ್ನು ದಾಖಲು ಮಾಡಬಹುದು; ಅಥವಾ

(ಬಿ) ಕ್ಲೇಮುದಾರರ ಉದ್ದೇಶಗಳಿಗಾಗಿ ಸಾಕಷ್ಟು ವಿಸ್ತೀರ್ಣದ ಮತ್ತು ಯುಕ್ತವಾಗಿ ಅನುಕೂಲಕರ ಸ್ಥಳದಲ್ಲಿನ ಅರಣ್ಯ ಭೂಮಿಯನ್ನು ಹೊರತುಪಡಿಸುವ ಹಾಗೆ ಪ್ರಸ್ತಾವಿತ ಅರಣ್ಯದ ಪರಿಮಿತಿಗಳನ್ನು ಬದಲಾಯಿಸಬಹುದು; ಅಥವಾ

(ಸಿ) ಹಾಗೆ ಅಂಗೀಕರಿಸಿರುವಷ್ಟರ ಮಟ್ಟಿಗೆ ಅಂಥ ಋತುಮಾನಗಳಲ್ಲಿ ಹಾಗೂ ಅಂಥ ಪ್ರಸ್ತಾವಿತ ಅರಣ್ಯದ ಭಾಗಗಳೊಳಗೆ ಮತ್ತು ರಾಜ್ಯ ಸರ್ಕಾರವು ಈ ಬಗ್ಗೆ ರಚಿಸಬಹುದಾದಂಥ ನಿಯಮಗಳ ಮೇರೆಗೆ, ಸಂದರ್ಭಾನುಸಾರ ಹುಲ್ಲುಗಾವಲು ಅಥವಾ ಅರಣ್ಯೋತ್ಪನ್ನದ ಬಗೆಗಿನ ಹಕ್ಕನ್ನು ಅಂಥ ಕ್ಲೇಮುದಾರರಿಗೆ ಮುಂದುವರಿಸುವ ಆದೇಶವನ್ನು ದಾಖಲು ಮಾಡಬಹುದು.

**16. ಹಕ್ಕುಗಳ ಪರಿವರ್ತನೆ.–** ಮೀಸಲಿಟ್ಟ ಅರಣ್ಯದ ನಿರ್ವಹಣೆಯನ್ನು ಯುಕ್ತವಾಗಿ ಗಮನದಲ್ಲಿರಿಸಿಕೊಂಡು, ಹಾಗೆ ಅಂಗೀಕರಿಸುವಷ್ಟರ ಮಟ್ಟಿಗೆ ಸದರಿ ಹಕ್ಕುಗಳನ್ನು ನಿರಂತರವಾಗಿ ಚಲಾಯಿಸುವುದನ್ನು ಸುನಿಶ್ಚಿತಗೊಳಿಸುವಂತೆ 15ನೇ ಪ್ರಕರಣದ ಮೇರೆಗೆ ಅಂಥ ಇತ್ಯರ್ಥವನ್ನು ಮಾಡುವುದು ಅಸಾಧ್ಯವೆಂದು ಅರಣ್ಯ ಇತ್ಯರ್ಥಾಧಿಕಾರಿಗೆ ಅನಿಸಿದರೆ, ಅವನು ರಾಜ್ಯ ಸರ್ಕಾರವು ಈ ಬಗ್ಗೆ ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಅಂಥ ಹಕ್ಕುಗಳಿಗೆ ಬದಲಾಗಿ ಹಣದ ಮೊತ್ತವನ್ನು ಅಂಥ ವ್ಯಕ್ತಿಗಳಿಗೆ ಸಂದಾಯ ಮಾಡುವ ಮೂಲಕ ಅಥವಾ ಭೂಮಿಯನ್ನು ಮಂಜೂರು ಮಾಡುವ ಮೂಲಕ ಅಥವಾ ಅವನು ಸೂಕ್ತವೆಂದು ಯೋಚಿಸುವಂಥ ಇತರ ರೀತಿಯಲ್ಲಿ ಹಕ್ಕುಗಳನ್ನು ಪರಿವರ್ತಿಸತಕ್ಕದ್ದು.

**17. 11ನೇ ಪ್ರಕರಣ, 12ನೇ ಪ್ರಕರಣ, 15ನೇ ಪ್ರಕರಣ ಅಥವಾ 16ನೇ ಪ್ರಕರಣಗಳ ಮೇರೆಗೆ ಮಾಡಿದ ಆದೇಶಗಳ ಮೇಲೆ ಅಪೀಲು.–** ಈ ಅಧಿನಿಯಮದ ಮೇರೆಗೆ ಕ್ಲೇಮನ್ನು ಮಾಡಿರುವ ಯಾರೇ ವ್ಯಕ್ತಿ ಅಥವಾ ಯಾರೇ ಅರಣ್ಯ ಅಧಿಕಾರಿ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕಾರ ನೀಡಿದ ಇತರ ವ್ಯಕ್ತಿಯು, 11ನೇ ಪ್ರಕರಣ, 12ನೇ ಪ್ರಕರಣ, 15ನೇ ಪ್ರಕರಣ ಅಥವಾ 16ನೇ ಪ್ರಕರಣಗಳ ಮೇರೆಗೆ ಅರಣ್ಯ ಇತ್ಯರ್ಥಾಧಿಕಾರಿಯು ಅಂಥ ಕ್ಲೇಮಿಗೆ ಸಂಬಂಧಿಸಿ ಮಾಡಿದ ಆದೇಶದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ಅಂಥ ಆದೇಶದ ಮೇಲೆ ಅಪೀಲನ್ನು ರಾಜ್ಯ ಸರ್ಕಾರವು, ಅಂಥ ಆದೇಶಗಳ ಮೇಲಿನ ಅಪೀಲುಗಳನ್ನು ಸುನಾವಣೆ ಮಾಡಲು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೇಮಕ ಮಾಡಬಹುದಾದ, ಕಲೆಕ್ಟರ್‌ನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಕಂದಾಯ ಇಲಾಖೆಯ ಅಧಿಕಾರಿಗೆ ಸಲ್ಲಿಸಬಹುದು:

ಪರಂತು, ರಾಜ್ಯ ಸರ್ಕಾರವು, ನೇಮಕ ಮಾಡಬೇಕಾದ ಮೂವರು ವ್ಯಕ್ತಿಗಳನ್ನು ಒಳಗೊಂಡ ನ್ಯಾಯಾಲಯವನ್ನು (ಇಲ್ಲಿ ಇನ್ನು ಮುಂದೆ ಅರಣ್ಯ ನ್ಯಾಯಾಲಯ ಎಂದು ಕರೆಯಲಾಗಿದೆ) ರಾಜ್ಯ ಸರ್ಕಾರವು ಸ್ಥಾಪಿಸಬಹುದು ಮತ್ತು ಹಾಗೆ ಸ್ಥಾಪಿಸಿದ ಅರಣ್ಯ ನ್ಯಾಯಾಲಯಕ್ಕೆ ಅಂಥ ಎಲ್ಲಾ ಅಪೀಲುಗಳನ್ನು ಸಲ್ಲಿಸತಕ್ಕದ್ದು.

**18. 17ನೇ ಪ್ರಕರಣದ ಮೇರೆಗೆ ಅಪೀಲು.–** (1) 17ನೇ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ಬರಹದಲ್ಲಿ ಅರ್ಜಿಯ ಮೂಲಕ ಮಾಡಿಕೊಳ್ಳತಕ್ಕದ್ದು ಮತ್ತು ಅದನ್ನು ಅರಣ್ಯ ಇತ್ಯರ್ಥಾಧಿಕಾರಿಗೆ ಕೊಡಬಹುದು, ಅವನು ವಿಳಂಬವಿಲ್ಲದೆ ಅದನ್ನು ಸುನಾವಣೆ ಮಾಡಲು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(2) 17ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಗೆ ಆ ಅಪೀಲನ್ನು ಮಾಡಿಕೊಂಡರೆ, ಭೂಕಂದಾಯಕ್ಕೆ ಸಂಬಂಧಪಟ್ಟ ವಿಷಯಗಳ ಮೇಲಣ ಅಪೀಲುಗಳನ್ನು ಸುನಾವಣೆ ಮಾಡುವುದಕ್ಕಾಗಿ ತತ್ಕಾಲದಲ್ಲಿ ನಿಯಮಿಸಲಾಗಿರುವ ರೀತಿಯಲ್ಲಿ ಅವನು ಅದನ್ನು ಸುನಾವಣೆ ಮಾಡತಕ್ಕದ್ದು.

(3) ಅರಣ್ಯ ನ್ಯಾಯಾಲಯಕ್ಕೆ ಅಪೀಲನ್ನು ಮಾಡಿಕೊಂಡರೆ ಆ ನ್ಯಾಯಾಲಯವು ಅಪೀಲಿನ ಸುನಾವಣೆಗಾಗಿ ಒಂದು ದಿನಾಂಕವನ್ನು ಮತ್ತು ಪ್ರಸ್ತಾವಿತ ಅರಣ್ಯದ ನೆರೆಹೊರೆಯಲ್ಲಿರುವ ಒಂದು ಅನುಕೂಲಕರ ಸ್ಥಳವನ್ನು ನಿಗದಿಪಡಿಸತಕ್ಕದ್ದು, ಮತ್ತು ಆ ಬಗ್ಗೆ ಪಕ್ಷಕಾರರಿಗೆ ನೋಟೀಸನ್ನು ಕೊಟ್ಟು ತದನುಸಾರವಾಗಿ ಅಂಥ ಅಪೀಲನ್ನು ಸುನಾವಣೆ ಮಾಡತಕ್ಕದ್ದು.

(4) ಸಂದರ್ಭಾನುಸಾರ ಅಂಥ ಅಧಿಕಾರಿ ಅಥವಾ ನ್ಯಾಯಾಲಯ ಅಥವಾ ಅಂಥ ನ್ಯಾಯಾಲಯದ ಬಹು ಸಂಖ್ಯೆಯ ಸದಸ್ಯರು ಆ ಅಪೀಲಿನ ಮೇಲೆ ಮಾಡಿದ ಆದೇಶವು, ರಾಜ್ಯ ಸರ್ಕಾರದ ಪುನರೀಕ್ಷಣೆಗೆ ಮಾತ್ರ ಒಳಪಟ್ಟು, ಅಂತಿಮವಾಗಿರತಕ್ಕದ್ದು.

**19. ಪ್ಲೀಡರುಗಳು.–** ರಾಜ್ಯ ಸರ್ಕಾರವು ಅಥವಾ ಈ ಅಧಿನಿಯಮದ ಮೇರೆಗೆ ಕ್ಲೇಮನ್ನು ಮಾಡಿರುವ ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗಿನ ಯಾವುದೇ ವಿಚಾರಣೆ ಅಥವಾ ಅಪೀಲಿನ ಸಮಯದಲ್ಲಿ ಅರಣ್ಯ ಇತ್ಯರ್ಥಾಧಿಕಾರಿ ಅಥವಾ ಅಪೀಲು ಪ್ರಾಧಿಕಾರಿಯ ಮುಂದೆ ಅದರ ಅಥವಾ ಅವನ ಪರವಾಗಿ ಹಾಜರಾಗಲು, ವಾದಿಸಲು ಮತ್ತು ಕಾರ್ಯ ನಿರ್ವಹಿಸಲು ಯಾರೇ ವ್ಯಕ್ತಿಯನ್ನು ನೇಮಕ ಮಾಡಬಹುದು.

**20. ಮೀಸಲಿಟ್ಟ ಅರಣ್ಯವೆಂದು ಘೋಷಿಸುವ ಅಧಿಸೂಚನೆ.–** (1) ಈ ಮುಂದಿನ ಘಟನೆಗಳು ಸಂಭವಿಸಿರುವಾಗ, ಎಂದರೆ,–

(ಎ) ಕ್ಲೇಮುಗಳನ್ನು ಸಲ್ಲಿಸುವುದಕ್ಕಾಗಿ 6ನೇ ಪ್ರಕರಣದ ಮೇರೆಗೆ ನಿಗದಿಪಡಿಸಿದ ಅವಧಿಯು ಮುಕ್ತಾಯವಾಗಿದ್ದರೆ ಮತ್ತು ಆ ಪ್ರಕರಣ ಅಥವಾ 9ನೇ ಪ್ರಕರಣದ ಮೇರೆಗೆ ಯಾವುದಾದರೂ ಕ್ಲೇಮುಗಳನ್ನು ಮಾಡಿಕೊಂಡಿದ್ದು ಅವುಗಳನ್ನು ಅರಣ್ಯ ಇತ್ಯರ್ಥಾಧಿಕಾರಿಯು ವಿಲೆ ಮಾಡಿದ್ದರೆ;

(ಬಿ) ಅಂಥ ಯಾವುದೇ ಕ್ಲೇಮುಗಳನ್ನು ಮಾಡಿಕೊಂಡಿದ್ದರೆ, ಆ ಕ್ಲೇಮುಗಳ ಮೇಲೆ ಮಾಡಿದ ಆದೇಶಗಳ ಮೇಲೆ ಅಪೀಲನ್ನು ಮಾಡಲು, 17ನೇ ಪ್ರಕರಣದ ಮೂಲಕ ಪರಿಮಿತಿಗೊಳಿಸಿದ ಅವಧಿಯು ಮುಕ್ತಾಯವಾಗಿದ್ದರೆ, ಮತ್ತು ಅಂಥ ಅವಧಿಯೊಳಗೆ ಸಲ್ಲಿಸಿದ ಎಲ್ಲಾ ಅಪೀಲುಗಳು, (ಯಾವುದಾದರೂ ಇದ್ದರೆ) ಅವುಗಳನ್ನು ಅಪೀಲು ಅಧಿಕಾರಿ ಅಥವಾ ನ್ಯಾಯಾಲಯವು ವಿಲೆ ಮಾಡಿದ್ದರೆ; ಮತ್ತು

(ಸಿ) ಯಾವುದನ್ನು ಅರಣ್ಯ ಇತ್ಯರ್ಥಾಧಿಕಾರಿಯು 11ನೇ ಪ್ರಕರಣದ ಮೇರೆಗೆ ಭೂ ಆರ್ಜನಾ ಅಧಿನಿಯಮ, 1894 (1894ರ 1)ರ ಮೇರೆಗೆ ಆರ್ಜಿಸಲು ಆಯ್ಕೆ ಮಾಡಿರುವನೋ ಆ ಪ್ರಸ್ತಾವಿತ ಅರಣ್ಯದಲ್ಲಿ ಸೇರಿಸಬೇಕಾದ ಆ ಎಲ್ಲಾ ಭೂಮಿಗಳು (ಯಾವುವಾದರೂ ಇದ್ದರೆ, ಅವುಗಳು) ಆ ಅಧಿನಿಯಮದ 16ನೇ ಪ್ರಕರಣದ ಮೇರೆಗೆ ಸರ್ಕಾರದಲ್ಲಿ ನಿಹಿತವಾಗಿದ್ದರೆ

– ರಾಜ್ಯ ಸರ್ಕಾರವು, ಮೀಸಲಿಡಬೇಕಾಗಿರುವಂಥ ಆ ಅರಣ್ಯದ ಪರಿಮಿತಿಗಳನ್ನು, ನಿರ್ಮಿಸಲಾಗಿರುವ ಗಡಿ ಗುರುತುಗಳಿಗೆ ಅನುಸಾರವಾಗಿ ಅಥವಾ ಅನ್ಯಥಾ, ಖಚಿತವಾಗಿ ನಿರ್ದಿಷ್ಟಪಡಿಸಿ ಮತ್ತು ಆ ಅಧಿಸೂಚನೆಯ ಮೂಲಕ ನಿಗದಿಪಡಿಸಿದ ದಿನಾಂಕದಿಂದ ಅದನ್ನು ಮೀಸಲಾಗಿಟ್ಟಿರುವುದಾಗಿ ಘೋಷಿಸಿ, ರಾಜಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸತಕ್ಕದ್ದು.

(2) ಹಾಗೆ ನಿಗದಿಪಡಿಸಿದ ದಿನಾಂಕದಿಂದ ಅಂಥ ಅರಣ್ಯವು ಮೀಸಲಿಟ್ಟ ಅರಣ್ಯವಾಗಿರುವುದಾಗಿ ಭಾವಿಸತಕ್ಕದ್ದು.

**21. ಅರಣ್ಯದ ಆಸುಪಾಸಿನಲ್ಲಿ ಅಂಥ ಅಧಿಸೂಚನೆಯ ಭಾಷಾಂತರದ ಪ್ರಕಟಣೆ.–** ಅರಣ್ಯ ಅಧಿಕಾರಿಯು, ಅಂಥ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ದಿನಾಂಕಕ್ಕೆ ಮುಂಚೆ ಆ ಅರಣ್ಯದ ಆಸುಪಾಸಿನಲ್ಲಿರುವ ಪ್ರತಿಯೊಂದು ಪಟ್ಟಣ ಮತ್ತು ಗ್ರಾಮದಲ್ಲಿ ಅದರ ಭಾಷಾಂತರವನ್ನು ಸ್ಥಳೀಯ ಭಾಷೆಯಲ್ಲಿ ಪ್ರಕಟಿಸುವಂತೆ ವ್ಯವಸ್ಥೆ ಮಾಡತಕ್ಕದ್ದು.

**22. 15ನೇ ಪ್ರಕರಣ ಅಥವಾ 18ನೇ ಪ್ರಕರಣದ ಮೇರೆಗೆ ಮಾಡಿದ ವ್ಯವಸ್ಥೆಗಳನ್ನು ಪರಿಷ್ಕರಿಸುವ ಅಧಿಕಾರ.–** ರಾಜ್ಯ ಸರ್ಕಾರವು, 20ನೇ ಪ್ರಕರಣದ ಮೇರೆಗಿನ ಯಾವುದೇ ಅಧಿಸೂಚನೆಯನ್ನು ಪ್ರಕಟಿಸಿದಂದಿನಿಂದ ಐದು ವರ್ಷಗಳ ಒಳಗೆ 15ನೇ ಪ್ರಕರಣ ಅಥವಾ 18ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ವ್ಯವಸ್ಥೆಯನ್ನು ಪರಿಷ್ಕರಿಸಬಹುದು ಮತ್ತು ಈ ಉದ್ದೇಶಕ್ಕಾಗಿ 15ನೇ ಪ್ರಕರಣ ಅಥವಾ 18ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ರದ್ದುಗೊಳಿಸಬಹುದು ಅಥವಾ ಮಾರ್ಪಾಟು ಮಾಡಬಹುದು ಮತ್ತು 15ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಒಂದು ವ್ಯವಹರಣೆಯನ್ನು, ಅಂಥ ವ್ಯವಹರಣೆಗಳ ಪೈಕಿ ಯಾವುದೇ ಇತರ ವ್ಯವಹರಣೆಗೆ ಬದಲಾಗಿ ಕೈಗೊಳ್ಳಬೇಕೆಂದು ಅಥವಾ 12ನೇ ಪ್ರಕರಣದ ಮೇರೆಗೆ ಅಂಗೀಕರಿಸಿರುವ ಹಕ್ಕುಗಳನ್ನು 16ನೇ ಪ್ರಕರಣದ ಮೇರೆಗೆ ಪರಿವರ್ತಿಸಬೇಕೆಂದು ನಿರ್ದೇಶಿಸಬಹುದು.

**23. ಇಲ್ಲಿ ಉಪಬಂಧಿಸಿರುವಂತಲ್ಲದೆ ಮೀಸಲಿಟ್ಟ ಅರಣ್ಯದ ಮೇಲೆ ಯಾವುದೇ ಹಕ್ಕನ್ನು ಆರ್ಜಿಸಲಾಗದು.–** ಉತ್ತರಾಧಿಕಾರದ ಮೂಲಕವಲ್ಲದೆ ಅಥವಾ ಸರ್ಕಾರವು ಅಥವಾ ಅದರ ಪರವಾಗಿ ಅಥವಾ 20ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದಾಗ ಅಂಥ ಹಕ್ಕು ಯಾರಲ್ಲಿ ನಿಹಿತವಾಗಿತ್ತೋ ಆ ಯಾರೇ ವ್ಯಕ್ತಿಯು ಕೊಟ್ಟ ಕೊಡುಗೆ ಅಥವಾ ಬರಹದಲ್ಲಿ ಮಾಡಿಕೊಂಡ ಕರಾರಿನ ಮೇರೆಗೆ ಅಲ್ಲದೆ, ಮೀಸಲಿಟ್ಟ ಅರಣ್ಯದಲ್ಲಿ ಅಥವಾ ಅದರ ಮೇಲೆ ಯಾವುದೇ ವಿವರಣೆಯ ಯಾವುದೇ ಹಕ್ಕನ್ನು ಆರ್ಜಿಸತಕ್ಕದ್ದಲ್ಲ.

**24. ಮಂಜೂರಾತಿ ಇಲ್ಲದೆ ಹಕ್ಕುಗಳನ್ನು ಪರಭಾರೆ ಮಾಡಲಾಗದು.–** (1) 23ನೇ ಪ್ರಕರಣದಲ್ಲಿ ಏನೇ ಇದ್ದರೂ, 15ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಮುಂದುವರಿಸಿದ ಯಾವುದೇ ಹಕ್ಕನ್ನು ರಾಜ್ಯ ಸರ್ಕಾರದ ಮಂಜೂರಾತಿ ಇಲ್ಲದೆ ಕೊಡುಗೆ, ಮಾರಾಟ, ಗೇಣಿ, ಅಡಮಾನ – ಇವುಗಳ ಮೂಲಕ ಅಥವಾ ಅನ್ಯಥಾ ಪರಭಾರೆ ಮಾಡತಕ್ಕದ್ದಲ್ಲ.

(2) ಅಂಥ ಯಾವುದೇ ಹಕ್ಕನ್ನು ಚಲಾಯಿಸಿ ಪಡೆದುಕೊಂಡ ಯಾವುದೇ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನವನ್ನು 14ನೇ ಪ್ರಕರಣದ ಮೇರೆಗೆ ದಾಖಲು ಮಾಡಿರುವ ಆದೇಶದಲ್ಲಿ ಅಂಗೀಕರಿಸಬಹುದಾದಷ್ಟರಮಟ್ಟಿಗೆ ಹೊರತು ಮಾರಾಟ ಮಾಡತಕ್ಕದ್ದಲ್ಲ ಅಥವಾ ವಸ್ತು ವಿನಿಮಯ ಮಾಡಿಕೊಳ್ಳತಕ್ಕದ್ದಲ್ಲ.

**25. ಮೀಸಲಿಟ್ಟ ಅರಣ್ಯಗಳಲ್ಲಿ ದಾರಿಗಳು ಮತ್ತು ಜಲಮಾರ್ಗಗಳನ್ನು ತಡೆಯುವ ಅಧಿಕಾರ.–** ಅರಣ್ಯಾಧಿಕಾರಿಯು, ರಾಜ್ಯ ಸರ್ಕಾರದ ಅಥವಾ ಈ ಬಗ್ಗೆ ಅದು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯ ಪೂರ್ವ ಮಂಜೂರಾತಿ ಪಡೆದು, ಮೀಸಲಿಟ್ಟ ಅರಣ್ಯದಲ್ಲಿ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ದಾರಿ ಅಥವಾ ಜಲಮಾರ್ಗವನ್ನು ತಡೆಯಬಹುದು:

ಪರಂತು, ಹಾಗೆ ತಡೆದಿರುವ ದಾರಿ ಅಥವಾ ಜಲಮಾರ್ಗಕ್ಕೆ ಬದಲಾಗಿ ರಾಜ್ಯ ಸರ್ಕಾರವು ಯುಕ್ತವಾಗಿ ಅನುಕೂಲವಾಗಿರುವುದಾಗಿ ಭಾವಿಸುವಂಥ ಮತ್ತೊಂದು ದಾರಿ ಅಥವಾ ಜಲಮಾರ್ಗ ಈಗಾಗಲೇ ಇರಬೇಕು ಅಥವಾ ಅದಕ್ಕೆ ಬದಲಾಗಿ ಅರಣ್ಯಾಧಿಕಾರಿಯು ಒದಗಿಸಿರಬೇಕು ಅಥವಾ ನಿರ್ಮಿಸಿರಬೇಕು.

**26. ಅಂಥ ಅರಣ್ಯಗಳಲ್ಲಿ ನಿಷೇಧಿಸಲಾದ ಕಾರ್ಯಗಳು.–** (1) (ಎ) 5ನೇ ಪ್ರಕರಣದ ಮೂಲಕ ನಿಷೇಧಿಸಲಾಗಿರುವ ಯಾವುದೇ ಹೊಸ ಕಡಿಯುವಿಕೆಯನ್ನು ಮಾಡುವ; ಅಥವಾ

(ಬಿ) ಮೀಸಲಿಟ್ಟ ಅರಣ್ಯಕ್ಕೆ ಬೆಂಕಿಯನ್ನು ಹಚ್ಚುವ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಿರುವ ಯಾವುವೇ ನಿಯಮಗಳನ್ನು ಉಲ್ಲಂಘಿಸಿ ಅಂಥ ಅರಣ್ಯಕ್ಕೆ ಅಪಾಯವನ್ನುಂಟು ಮಾಡುವಂಥ ರೀತಿಯಲ್ಲಿ ಬೆಂಕಿಯನ್ನು ಹೊತ್ತಿಸುವ ಅಥವಾ ಯಾವುದೇ ಉರಿಯುತ್ತಿರುವ ಬೆಂಕಿಯನ್ನು ಉರಿಯಲು ಹಾಗೇ ಬಿಡುವ ಅಥವಾ ಮೀಸಲಿಟ್ಟ ಅರಣ್ಯದಲ್ಲಿ;

(ಸಿ) ಅರಣ್ಯ ಅಧಿಕಾರಿಯು ಈ ಬಗ್ಗೆ ಅಧಿಸೂಚಿಸಬಹುದಾದಂಥ ಋತುಮಾನಗಳಲ್ಲಿ ಹೊರತು ಯಾವುದೇ ಇತರ ಕಾಲದಲ್ಲಿ ಯಾವುದೇ ಬೆಂಕಿಯನ್ನು ಹೊತ್ತಿಸುವ, ಇಡುವ ಅಥವಾ ಒಯ್ಯುವ;

(ಡಿ) ಜಾನುವಾರುಗಳನ್ನು ಅತಿಕ್ರಮಿಸುವಂತೆ ಮಾಡುವ ಅಥವಾ ಅವುಗಳನ್ನು ಮೇಯಿಸುವ ಅಥವಾ ಜಾನುವಾರುಗಳನ್ನು ಅತಿಕ್ರಮಿಸಲು ಅನುವು ಮಾಡಿಕೊಡುವ;

(ಇ) ಯಾವುದೇ ಮರವನ್ನು ಕೆಡಹುವಲ್ಲಿ ಅಥವಾ ಯಾವುದೇ ಚೌಬೀನೆಯನ್ನು ಕತ್ತರಿಸುವಲ್ಲಿ ಅಥವಾ ಎಳೆದೊಯ್ಯುವಲ್ಲಿ ನಿರ್ಲಕ್ಷ್ಯತೆಯಿಂದ ಯಾವುದೇ ಹಾನಿಯನ್ನುಂಟು ಮಾಡುವ;

(ಎಫ್) ಯಾವುದೇ ಮರವನ್ನು ಕೆಡಹುವ, ಸುತ್ತಲೂ ಕೆತ್ತುವ, ಸವರುವ, ರಳ ಇಳಿಸುವ ಅಥವಾ ಸುಡುವ ಅಥವಾ ಅದರಿಂದ ತೊಗಟೆ ಅಥವಾ ಎಲೆಗಳನ್ನು ಕಿತ್ತುಹಾಕುವ ಅಥವಾ ಅದಕ್ಕೆ ಅನ್ಯಥಾ ಹಾನಿಗೊಳಿಸುವ;

(ಜಿ) ಕಲ್ಲನ್ನು ತೆಗೆಯುವ, ಸುಣ್ಣ ಅಥವಾ ಇದ್ದಿಲನ್ನು ಸುಡುವ ಅಥವಾ ಯಾವುದೇ ಅರಣ್ಯೋತ್ಪನ್ನವನ್ನು ಸಂಗ್ರಹಿಸುವ, ಯಾವುದೇ ತಯಾರಿಕಾ ವಿಧಾನಕ್ಕೆ ಒಳಪಡಿಸುವ ಅಥವಾ ಸ್ಥಳಾಂತರಿಸುವ;

(ಎಚ್) ಸಾಗುವಳಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಯಾವುದೇ ಭೂಮಿಯನ್ನು ಅಣಿ ಮಾಡುವ ಅಥವಾ ಅಗೆಯುವ;

(ಐ) ರಾಜ್ಯ ಸರ್ಕಾರವು ಈ ಬಗ್ಗೆ ರಚಿಸಿದ ಯಾವುವೇ ನಿಯಮಗಳನ್ನು ಉಲ್ಲಂಘಿಸಿ ಬೇಟೆಯಾಡುವ, ಗುಂಡು ಹಾರಿಸುವ, ಮೀನು ಹಿಡಿಯುವ, ನೀರಿಗೆ ವಿಷ ಹಾಕುವ ಅಥವಾ ಬೋನುಗಳನ್ನು ಅಥವಾ ಬಲೆಗಳನ್ನು ಇಡುವ; ಅಥವಾ

(ಜೆ) ಆನೆಗಳ ಪರಿರಕ್ಷಣಾ ಅಧಿನಿಯಮ, 1879 (1879ರ 6) ಜಾರಿಯಲ್ಲಿ ಇರದೇ ಇರುವಂಥ ಯಾವುದೇ ಪ್ರದೇಶದಲ್ಲಿ, ಹಾಗೆ ರಚಿಸಿದ ಯಾವುವೇ ನಿಯಮಗಳನ್ನು ಉಲ್ಲಂಘಿಸಿ ಆನೆಗಳನ್ನು ಕೊಲ್ಲುವ ಅಥವಾ ಹಿಡಿಯುವ

– ಯಾರೇ ವ್ಯಕ್ತಿಯು ಅರಣ್ಯಕ್ಕೆ ಮಾಡಿದ ಹಾನಿಗಾಗಿ, ಅಪರಾಧವನ್ನು ನಿರ್ಣಯ ಮಾಡುವ ನ್ಯಾಯಾಲಯವು ಸಂದಾಯ ಮಾಡಬೇಕೆಂದು ನಿರ್ದೇಶಿಸಬಹುದಾದಂಥ ನಷ್ಟ ಪರಿಹಾರದ ಜೊತೆಗೆ ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಈ ಪ್ರಕರಣದಲ್ಲಿರುವುದು ಯಾವುದೂ,–

(ಎ) ಅರಣ್ಯ ಅಧಿಕಾರಿಯ ಲಿಖಿತ ಅನುಮತಿಯನ್ನು ಪಡೆದು ಅಥವಾ ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು; ಅಥವಾ

(ಬಿ) 15ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಮುಂದುವರೆಯುತ್ತಿರುವ ಅಥವಾ 23ನೇ ಪ್ರಕರಣದ ಮೇರೆಗೆ ಸರ್ಕಾರವು ಅಥವಾ ಅದರ ಪರವಾಗಿ ಲಿಖಿತದಲ್ಲಿನ ಕೊಡುಗೆ ಅಥವಾ ಕರಾರಿನ ಮೂಲಕ ಸೃಜಿಸಿರುವ ಯಾವುದೇ ಹಕ್ಕನ್ನು ಚಲಾಯಿಸುವುದರಿಂದ

– ನಿಷೇಧಿಸುವುದೆಂದು ಭಾವಿಸತಕ್ಕದ್ದಲ್ಲ.

(3) ಮೀಸಲಿಟ್ಟ ಅರಣ್ಯದಲ್ಲಿ ಉದ್ದೇಶಪೂರ್ವಕವಾಗಿ ಅಥವಾ ಅತೀವ ನಿರ್ಲಕ್ಷ್ಯತೆಯಿಂದ ಬೆಂಕಿಯನ್ನುಂಟು ಮಾಡಿರುವಾಗಲೆಲ್ಲಾ, ರಾಜ್ಯ ಸರ್ಕಾರವು (ಈ ಪ್ರಕರಣದ ಮೇರೆಗೆ ಯಾವುದೇ ದಂಡವನ್ನು ವಿಧಿಸಿದ್ದಾಗ್ಯೂ) ಅಂಥ ಅರಣ್ಯ ಅಥವಾ ಅದರ ಯಾವುದೇ ಭಾಗದಲ್ಲಿನ ಹುಲ್ಲುಗಾವಲು ಅಥವಾ ಅರಣ್ಯೋತ್ಪನ್ನಕ್ಕೆ ಸಂಬಂಧಪಟ್ಟ ಎಲ್ಲಾ ಹಕ್ಕುಗಳನ್ನು ಚಲಾಯಿಸುವುದನ್ನು, ಅದು ಸೂಕ್ತವೆಂದು ಯೋಚಿಸುವಂಥ ಅವಧಿಯವರೆಗೆ ಅಮಾನತುಗೊಳಿಸತಕ್ಕದ್ದು ಎಂದು ನಿರ್ದೇಶಿಸಬಹುದು.

**27. ಇನ್ನು ಮುಂದೆ ಅರಣ್ಯವನ್ನು ಮೀಸಲಿಟ್ಟಿಲ್ಲವೆಂದು ಘೋಷಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸಿ, ಅಂಥ ಅಧಿಸೂಚನೆಯಲ್ಲಿ ನಿಗದಿಪಡಿಸಲಾದ ದಿನಾಂಕದಿಂದ, ಈ ಅಧಿನಿಯಮದ ಮೇರೆಗೆ ಮೀಸಲಿಟ್ಟ ಯಾವುದೇ ಅರಣ್ಯ ಅಥವಾ ಅದರ ಯಾವುದೇ ಭಾಗವು ಮೀಸಲಿಟ್ಟ ಅರಣ್ಯವಾಗಿರುವುದು ನಿಂತುಹೋಗತಕ್ಕದ್ದು ಎಂದು ನಿರ್ದೇಶಿಸಬಹುದು.

(2) ಹಾಗೆ ನಿಗದಿಪಡಿಸಿದ ದಿನಾಂಕದಿಂದ, ಅಂಥ ಅರಣ್ಯ ಅಥವಾ ಅದರ ಭಾಗವು ಮೀಸಲಾಗಿಟ್ಟಿರುವುದು ನಿಂತು ಹೋಗತಕ್ಕದ್ದು; ಆದರೆ ಅದರಲ್ಲಿನ ಅಳಿದು ಹೋಗಿರುವಂಥ ಹಕ್ಕುಗಳು (ಯಾವುವಾದರೂ ಇದ್ದರೆ), ಅವುಗಳು ಅಂಥ ನಿಂತುಹೋಗುವಿಕೆಯ ಪರಿಣಾಮದಿಂದ ಪುನರುಜ್ಜೀವಿತಗೊಳ್ಳತಕ್ಕದ್ದಲ್ಲ.

## ಅಧ್ಯಾಯ – III

## ಗ್ರಾಮ ಅರಣ್ಯಗಳ ಬಗ್ಗೆ

**28. ಗ್ರಾಮ ಅರಣ್ಯಗಳ ರಚನೆ.–** (1) ರಾಜ್ಯ ಸರ್ಕಾರವು, ಮೀಸಲಿಟ್ಟ ಅರಣ್ಯವಾಗಿ ರಚಿತವಾಗಿರುವ ಯಾವುದೇ ಭೂಮಿ ಅಥವಾ ಅದರ ಮೇಲೆ ತನಗಿರುವ ಹಕ್ಕುಗಳನ್ನು ಅದು ಯಾವುದೇ ಗ್ರಾಮ ಸಮುದಾಯಕ್ಕೆ ವಹಿಸಿಕೊಡಬಹುದು ಮತ್ತು ಅಂಥ ವಹಿಸಿಕೊಡುವಿಕೆಯನ್ನು ರದ್ದುಗೊಳಿಸಬಹುದು. ಹಾಗೆ ವಹಿಸಿಕೊಟ್ಟಿರುವ ಎಲ್ಲಾ ಅರಣ್ಯಗಳನ್ನು ಗ್ರಾಮ ಅರಣ್ಯಗಳೆಂದು ಕರೆಯತಕ್ಕದ್ದು.

(2) ರಾಜ್ಯ ಸರ್ಕಾರವು, ಗ್ರಾಮ ಅರಣ್ಯಗಳ ವ್ಯವಸ್ಥಾಪನೆಯನ್ನು ನಿಯಂತ್ರಿಸುವುದಕ್ಕಾಗಿ ಯಾವ ಸಮುದಾಯಕ್ಕೆ ಅಂಥ ಹಕ್ಕುಗಳನ್ನು ವಹಿಸಿಕೊಡಲಾಗಿದೆಯೋ ಆ ಸಮುದಾಯಕ್ಕೆ ಯಾವ ಷರತ್ತುಗಳಿಗೆ ಒಳಪಟ್ಟು ಚೌಬೀನೆ ಅಥವಾ ಇತರ ಅರಣ್ಯ ಉತ್ಪನ್ನ ಅಥವಾ ಹುಲ್ಲುಗಾವಲನ್ನು ಒದಗಿಸಬಹುದೋ ಆ ಷರತ್ತುಗಳು ಮತ್ತು ಅಂಥ ಅರಣ್ಯದ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಅವರ ಕರ್ತವ್ಯಗಳನ್ನು ನಿಯಮಿಸಿ, ನಿಯಮಗಳನ್ನು ರಚಿಸಬಹುದು.

(3) ಮೀಸಲಿಟ್ಟ ಅರಣ್ಯಗಳಿಗೆ ಸಂಬಂಧಪಟ್ಟ ಈ ಅಧಿನಿಯಮದ ಎಲ್ಲಾ ಉಪಬಂಧಗಳು (ಹಾಗೆ ರಚಿಸಿದ ನಿಯಮಗಳಿಗೆ ಅವು ಅಸಂಗತವಾಗದಿರುವಷ್ಟರಮಟ್ಟಿಗೆ) ಗ್ರಾಮ ಅರಣ್ಯಗಳಿಗೆ ಅನ್ವಯವಾಗತಕ್ಕದ್ದು.

## ಅಧ್ಯಾಯ – IV

## ಸಂರಕ್ಷಿತ ಅರಣ್ಯಗಳ ಬಗ್ಗೆ

**29. ಸಂರಕ್ಷಿತ ಅರಣ್ಯಗಳು.–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವ ಅರಣ್ಯ ಭೂಮಿ ಅಥವಾ ಬಂಜರು ಭೂಮಿಯು ಮೀಸಲಿಟ್ಟ ಅರಣ್ಯದಲ್ಲಿ ಸೇರಿಲ್ಲವೋ, ಆದರೆ ಯಾವುದು ಸರ್ಕಾರದ ಸ್ವತ್ತಾಗಿರುವುದೋ ಅಥವಾ ಯಾವುದರ ಮೇಲೆ ಸರ್ಕಾರವು ಮಾಲೀಕತ್ವದ ಹಕ್ಕುಗಳನ್ನು ಹೊಂದಿರುವುದೋ ಆ ಅರಣ್ಯ ಭೂಮಿ ಅಥವಾ ಬಂಜರು ಭೂಮಿಗೆ ಅಥವಾ ಸರ್ಕಾರವು ಹಕ್ಕನ್ನು ಹೊಂದಿರುವ ಅರಣ್ಯೋತ್ಪನ್ನದ ಇಡೀ ಅಥವಾ ಅದರ ಯಾವುದೇ ಭಾಗಕ್ಕೆ

– ಈ ಅಧ್ಯಾಯದ ಉಪಬಂಧಗಳು ಅನ್ವಯವಾಗುವುದೆಂದು ಘೋಷಿಸಬಹುದು.

(2) ಯಾವುದೇ ಅಂಥ ಅಧಿಸೂಚನೆಯಲ್ಲಿ ಒಳಗೊಂಡ ಅರಣ್ಯಭೂಮಿ ಮತ್ತು ಬಂಜರು ಭೂಮಿಗಳನ್ನು 'ಸಂರಕ್ಷಿತ ಅರಣ್ಯ' ಎಂದು ಕರೆಯತಕ್ಕದ್ದು.

(3) ಅಂಥ ಅಧಿಸೂಚನೆಯಲ್ಲಿ ಒಳಗೊಂಡ ಅರಣ್ಯಭೂಮಿ ಅಥವಾ ಬಂಜರು ಭೂಮಿಯಲ್ಲಿ ಅಥವಾ ಅದರ ಮೇಲೆ ಸರ್ಕಾರದ ಮತ್ತು ಖಾಸಗಿ ವ್ಯಕ್ತಿಗಳ ಹಕ್ಕುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಮೋಜಣಿ ಅಥವಾ ವ್ಯವಸ್ಥೆಗೊಳಿಸಿ ಅಥವಾ ರಾಜ್ಯ ಸರ್ಕಾರವು ಸಾಕಷ್ಟೆಂದು ಯೋಚಿಸುವಂಥ ಇತರ ರೀತಿಯಲ್ಲಿ ವಿಚಾರಣೆ ಮಾಡಿ ದಾಖಲು ಮಾಡಿದ್ದ ಹೊರತು ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ. ಅಂಥ ಪ್ರತಿಯೊಂದು ದಾಖಲೆ ಸರಿಯಾಗಿಲ್ಲವೆಂದು ತದ್ವಿರುದ್ಧವಾಗಿ ರುಜುವಾತುಪಡಿಸುವವರೆಗೆ ಅದು ಸರಿಯಾಗಿರುವುದಾಗಿ ಭಾವಿಸತಕ್ಕದ್ದು:

ಪರಂತು, ಯಾವುದೇ ಅರಣ್ಯ ಭೂಮಿ ಅಥವಾ ಬಂಜರು ಭೂಮಿಯ ಸಂದರ್ಭದಲ್ಲಿ ವಿಚಾರಣೆ ಮತ್ತು ದಾಖಲೆಯು ಅವಶ್ಯವೆಂದು, ಆದರೆ ಅವನ್ನು ಪಡೆಯುವುದು ಸರ್ಕಾರದ ಹಕ್ಕುಗಳಿಗೆ ಧಕ್ಕೆಯುಂಟಾಗುವಷ್ಟು ಕಾಲವನ್ನು ತೆಗೆದುಕೊಳ್ಳುವುದೆಂದು ರಾಜ್ಯಸರ್ಕಾರವು ಭಾವಿಸಿದರೆ, ಅದು ಅಂಥ ವಿಚಾರಣೆ ಮತ್ತು ದಾಖಲು ಮಾಡುವುದು ಇತ್ಯರ್ಥದಲ್ಲಿರುವಾಗ ಅಂಥ ಭೂಮಿಯು ವ್ಯಕ್ತಿಗಳ ಅಥವಾ ಸಮುದಾಯಗಳ ಅಸ್ತಿತ್ವದಲ್ಲಿರುವ ಯಾವುದೇ ಹಕ್ಕುಗಳನ್ನು ಕುಂಠಿತ ಅಥವಾ ಬಾಧಕಗೊಳಿಸದ ಹಾಗೆ 'ಸಂರಕ್ಷಿತ ಅರಣ್ಯ' ವಾಗಿರುವುದಾಗಿ ಘೋಷಿಸಬಹುದು.

**30. ಮರಗಳು ಮುಂತಾದವುಗಳನ್ನು ಮೀಸಲಿರಿಸಿ ಅಧಿಸೂಚನೆಯನ್ನು ಹೊರಡಿಸಲು ಅಧಿಕಾರ.–** ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,–

(ಎ) ಸಂರಕ್ಷಿತ ಅರಣ್ಯದಲ್ಲಿರುವ ಯಾವುವೇ ಮರಗಳು, ಅಥವಾ ಮರಗಳ ವರ್ಗವನ್ನು, ಆ ಅಧಿಸೂಚನೆಯಲ್ಲಿ ನಿಗದಿಪಡಿಸಲಾದ ದಿನಾಂಕದಿಂದ ಮೀಸಲಿಟ್ಟಿರುವುದಾಗಿ ಘೋಷಿಸಬಹುದು;

(ಬಿ) ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅಂಥ ಅರಣ್ಯದ ಯಾವುದೇ ಭಾಗವನ್ನು ರಾಜ್ಯ ಸರ್ಕಾರವು ಸೂಕ್ತವೆಂದು ಯೋಚಿಸುವಂತೆ ಮೂವತ್ತು ವರ್ಷಗಳಿಗೆ ಮೀರದಷ್ಟು ಅವಧಿಯವರೆಗೆ ಮುಚ್ಚತಕ್ಕದ್ದು ಮತ್ತು ಖಾಸಗಿ ವ್ಯಕ್ತಿಗಳ ಹಕ್ಕುಗಳು ಯಾವುವಾದರೂ ಇದ್ದರೆ ಅವುಗಳು ಅಂಥ ಭಾಗದಲ್ಲಿ ಅಂಥ ಅವಧಿಯವರೆಗೆ ನಿಲಂಬನಗೊಳ್ಳತಕ್ಕದ್ದೆಂದು ಘೋಷಿಸಬಹುದು, ಪರಂತು, ಅಂಥ ಅರಣ್ಯದ ಉಳಿದ ಭಾಗವು ಸಾಕಷ್ಟಿರಬೇಕು ಮತ್ತು, ಅದು ಹಾಗೆ ಮುಚ್ಚಲಾಗಿರುವ ಭಾಗದಲ್ಲಿ ನಿಲಂಬಿತವಾಗಿರುವ ಹಕ್ಕುಗಳನ್ನು ಕ್ರಮಬದ್ಧವಾಗಿ ಚಲಾಯಿಸಲು ಸಾಕಷ್ಟು ಅನುಕೂಲಕರವಾದ ಸ್ಥಳದಲ್ಲಿ ಇರಬೇಕು; ಅಥವಾ

(ಸಿ) ಹಿಂದೆ ಹೇಳಿದಂತೆ ನಿಗದಿಪಡಿಸಲಾಗಿರುವ ದಿನಾಂಕದಿಂದ ಅಂಥ ಯಾವುದೇ ಅರಣ್ಯದಲ್ಲಿ, ಕಲ್ಲು ತೆಗೆಯುವುದು ಅಥವಾ ಸುಣ್ಣ ಅಥವಾ ಇದ್ದಿಲನ್ನು ಸುಡುವುದು ಅಥವಾ ಯಾವುದೇ ಅರಣ್ಯೋತ್ಪನ್ನವನ್ನು ಸಂಗ್ರಹಿಸುವುದು ಅಥವಾ ಅದನ್ನು ಯಾವುದೇ ತಯಾರಿಕಾ ವಿಧಾನಕ್ಕೆ ಒಳಪಡಿಸುವುದು ಅಥವಾ ಸ್ಥಳಾಂತರಿಸುವುದನ್ನು ಮತ್ತು ಅಂಥ ಯಾವುದೇ ಅರಣ್ಯದಲ್ಲಿನ ಯಾವುದೇ ಭೂಮಿಯನ್ನು ಸಾಗುವಳಿಗಾಗಿ, ಕಟ್ಟಡ ಕಟ್ಟುವುದಕ್ಕಾಗಿ, ಜಾನುವಾರುಗಳನ್ನು ಹಿಂಡುಗೂಡಿಸುವುದಕ್ಕಾಗಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಅಗೆಯುವುದು ಅಥವಾ ಅಣಿ ಮಾಡುವುದನ್ನು ನಿಷೇಧಿಸಬಹುದು.

**31. ಅರಣ್ಯದ ಆಸುಪಾಸಿನಲ್ಲಿ ಅಂಥ ಅಧಿಸೂಚನೆಯ ಭಾಷಾಂತರವನ್ನು ಪ್ರಕಟಿಸುವುದು.–** ಕಲೆಕ್ಟರನು, 30ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯ ಸ್ಥಳೀಯ ಭಾಷೆಯ ಭಾಷಾಂತರವನ್ನು ಆ ಅಧಿಸೂಚನೆಯಲ್ಲಿ ಒಳಗೊಂಡ ಅರಣ್ಯದ ಆಸುಪಾಸಿನಲ್ಲಿರುವ ಪ್ರತಿಯೊಂದು ಪಟ್ಟಣ ಮತ್ತು ಗ್ರಾಮದ ಒಂದು ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

**32. ಸಂರಕ್ಷಿತ ಅರಣ್ಯಗಳಿಗಾಗಿ ನಿಯಮ ರಚನಾಧಿಕಾರ.–** ರಾಜ್ಯ ಸರ್ಕಾರವು, ಈ ಮುಂದಿನ ವಿಷಯಗಳನ್ನು ವಿನಿಯಮಿಸಲು, ಎಂದರೆ,–

(ಎ) ಮರಗಳು ಮತ್ತು ಚೌಬೀನೆಯನ್ನು ಕಡಿಯುವುದು, ಕೊಯ್ಯುವುದು, ಪರಿವರ್ತಿಸುವುದು ಮತ್ತು ಸ್ಥಳಾಂತರಿಸುವುದು ಮತ್ತು ಸಂರಕ್ಷಿತ ಅರಣ್ಯಗಳಿಂದ ಅರಣ್ಯೋತ್ಪನ್ನಗಳನ್ನು ಸಂಗ್ರಹಿಸುವುದು, ತಯಾರಿಸುವುದು ಮತ್ತು ಸ್ಥಳಾಂತರಿಸುವುದು;

(ಬಿ) ಅವರ ಸ್ವಂತ ಉಪಯೋಗಕ್ಕಾಗಿ ಮರಗಳು, ಚೌಬೀನೆ, ಅಥವಾ ಇತರ ಅರಣ್ಯೋತ್ಪನ್ನವನ್ನು ತೆಗೆದುಕೊಳ್ಳಲು ಸಂರಕ್ಷಿತ ಅರಣ್ಯಗಳ ಆಸುಪಾಸಿನಲ್ಲಿರುವ ಪಟ್ಟಣಗಳು ಮತ್ತು ಗ್ರಾಮಗಳ ನಿವಾಸಿಗಳಿಗೆ ಲೈಸೆನ್ಸುಗಳನ್ನು ಕೊಡುವುದು ಮತ್ತು ಅಂಥ ವ್ಯಕ್ತಿಗಳು ಅಂಥ ಲೈಸೆನ್ಸನ್ನು ಹಾಜರುಪಡಿಸುವುದು ಮತ್ತು ಹಿಂತಿರುಗಿಸುವುದು;

(ಸಿ) ವ್ಯಾಪಾರದ ಉದ್ದೇಶಗಳಿಗಾಗಿ ಅಂಥ ಅರಣ್ಯಗಳಲ್ಲಿನ ಮರಗಳು ಅಥವಾ ಚೌಬೀನೆಯನ್ನು ಕಡಿಯುವ ಅಥವಾ ಅಲ್ಲಿಂದ ಅದನ್ನು ಅಥವಾ ಇತರ ಅರಣ್ಯೋತ್ಪನ್ನವನ್ನು ಸ್ಥಳಾಂತರಿಸುವ ವ್ಯಕ್ತಿಗಳಿಗೆ ಲೈಸೆನ್ಸುಗಳನ್ನು ಕೊಡುವುದು ಮತ್ತು ಅಂಥ ವ್ಯಕ್ತಿಗಳು ಅಂಥ ಲೈಸೆನ್ಸುಗಳನ್ನು ಹಾಜರುಪಡಿಸುವುದು ಮತ್ತು ಹಿಂತಿರುಗಿಸುವುದು;

(ಡಿ) ಅಂಥ ಮರಗಳನ್ನು ಕಡಿಯಲು ಅಥವಾ ಅಂಥ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನವನ್ನು ಸಂಗ್ರಹಿಸಲು ಮತ್ತು ಸ್ಥಳಾಂತರಿಸಲು ಅನುಮತಿಗಾಗಿ (ಬಿ) ಮತ್ತು (ಸಿ) ಖಂಡದಲ್ಲಿ ನಮೂದಿಸಿರುವ ವ್ಯಕ್ತಿಗಳು ಮಾಡಬೇಕಾದ ಸಂದಾಯಗಳು ಯಾವುವಾದರೂ ಇದ್ದರೆ ಅವು;

(ಇ) ಅಂಥ ಮರಗಳು, ಚೌಬೀನೆ, ಮತ್ತು ಉತ್ಪನ್ನಕ್ಕೆ ಸಂಬಂಧಿಸಿದಂತೆ ಅವರು ಮಾಡಬೇಕಾದ ಇತರ ಸಂದಾಯಗಳು ಯಾವುದಾದರೂ ಇದ್ದರೆ ಅವು ಮತ್ತು ಅಂಥ ಸಂದಾಯವನ್ನು ಮಾಡತಕ್ಕಂಥ ಸ್ಥಳಗಳು;

(ಎಫ್) ಅಂಥ ಅರಣ್ಯಗಳಿಂದ ಹೊರಕ್ಕೆ ಹೋಗುತ್ತಿರುವ ಅರಣ್ಯೋತ್ಪನ್ನದ ತಪಾಸಣೆ;

(ಜಿ) ಅಂಥ ಅರಣ್ಯಗಳಲ್ಲಿ ಸಾಗುವಳಿ ಅಥವಾ ಇತರ ಉದ್ದೇಶಗಳಿಗಾಗಿ ಭೂಮಿಯನ್ನು ಅಣಿಗೊಳಿಸುವುದು ಮತ್ತು ಅಗೆಯುವುದು;

(ಎಚ್) ಅಂಥ ಅರಣ್ಯಗಳಲ್ಲಿ ಇರುವ ಚೌಬೀನೆಯನ್ನು ಮತ್ತು 30ನೇ ಪ್ರಕರಣದ ಮೇರೆಗೆ ಮೀಸಲಿಟ್ಟ ಮರಗಳನ್ನು ಬೆಂಕಿಯಿಂದ ಸಂರಕ್ಷಿಸುವುದು;

(ಐ) ಅಂಥ ಅರಣ್ಯಗಳಲ್ಲಿನ ಹುಲ್ಲನ್ನು ಕತ್ತರಿಸುವುದು ಮತ್ತು ಅಲ್ಲಿ ಜಾನುವಾರುಗಳನ್ನು ಮೇಯಿಸುವುದು;

(ಜೆ) ಅಂಥ ಅರಣ್ಯಗಳಲ್ಲಿ ಬೇಟೆಯಾಡುವುದು, ಗುಂಡು ಹಾರಿಸುವುದು, ಮೀನು ಹಿಡಿಯುವುದು, ನೀರಿಗೆ ವಿಷ ಹಾಕುವುದು, ಬೋನುಗಳು ಅಥವಾ ಬಲೆಗಳನ್ನು ಇಡುವುದು ಮತ್ತು ಆನೆಗಳ ಪರಿರಕ್ಷಣಾ ಅಧಿನಿಯಮ, 1879 (1879ರ 6) ಜಾರಿಯಲ್ಲಿ ಇಲ್ಲದಿರುವಂಥ ಪ್ರದೇಶಗಳಲ್ಲಿನ ಅರಣ್ಯಗಳಲ್ಲಿ ಆನೆಗಳನ್ನು ಕೊಲ್ಲುವುದು ಅಥವಾ ಹಿಡಿಯವುದು;

(ಕೆ) 30ನೇ ಪ್ರಕರಣದ ಮೇರೆಗೆ ಮುಚ್ಚಲಾದ ಅರಣ್ಯದ ಯಾವುದೇ ಭಾಗದ ಸಂರಕ್ಷಣೆ ಮತ್ತು ವ್ಯವಸ್ಥಾಪನೆ; ಮತ್ತು

(ಎಲ್) 29ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಹಕ್ಕುಗಳನ್ನು ಚಲಾಯಿಸುವುದು

– ಇವುಗಳ ಬಗ್ಗೆ ನಿಯಮಗಳನ್ನು ರಚಿಸಬಹುದು.

**33. 30ನೇ ಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಅಥವಾ 32ನೇ ಪ್ರಕರಣದ ಮೇರೆಗಿನ ನಿಯಮಗಳನ್ನು ಉಲ್ಲಂಘಿಸಿ ಮಾಡಿದ ಕಾರ್ಯಗಳಿಗಾಗಿ ದಂಡಗಳು.**– (1) ಈ ಮುಂದಿನ ಯಾವುದೇ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯು, ಎಂದರೆ,–

(ಎ) 30ನೇ ಪ್ರಕರಣದ ಮೇರೆಗೆ ಮೀಸಲಿಟ್ಟ ಯಾವುದೇ ಮರವನ್ನು ಕೆಡವಿದರೆ, ಸುತ್ತಲೂ ಕೆತ್ತಿದರೆ, ಸವರಿದರೆ, ರಸ ಇಳಿಸಿದರೆ ಅಥವಾ ಸುಟ್ಟರೆ ಅಥವಾ ಅಂಥ ಯಾವುದೇ ಮರದಿಂದ ತೊಗಟೆ ಅಥವಾ ಎಲೆಗಳನ್ನು ಕಿತ್ತು ಹಾಕಿದರೆ ಅಥವಾ ಅದಕ್ಕೆ ಅನ್ಯಥಾ ಹಾನಿಯನ್ನುಂಟು ಮಾಡಿದರೆ;

(ಬಿ) 30ನೇ ಪ್ರಕರಣದ ಮೇರೆಗಿನ ಯಾವುದೇ ನಿಷೇಧಕ್ಕೆ ತದ್ವಿರುದ್ಧವಾಗಿ ಯಾವುದೇ ಕಲ್ಲನ್ನು ತೆಗೆದರೆ ಅಥವಾ ಯಾವುದೇ ಸುಣ್ಣ ಅಥವಾ ಇದ್ದಿಲನ್ನು ಸುಟ್ಟರೆ ಅಥವಾ ಯಾವುದೇ ಅರಣ್ಯೋತ್ಪನ್ನವನ್ನು ಸಂಗ್ರಹಿಸಿದರೆ, ಯಾವುದೇ ತಯಾರಿಕಾ ವಿಧಾನಕ್ಕೆ ಒಳಪಡಿಸಿದರೆ ಅಥವಾ ಸ್ಥಳಾಂತರಿಸಿದರೆ;

(ಸಿ) 30ನೇ ಪ್ರಕರಣದ ಮೇರೆಗಿನ ಯಾವುದೇ ನಿಷೇಧಕ್ಕೆ ತದ್ವಿರುದ್ಧವಾಗಿ ಯಾವುದೇ ಸಂರಕ್ಷಿತ ಅರಣ್ಯದಲ್ಲಿ ಯಾವುದೇ ಭೂಮಿಯನ್ನು ಸಾಗುವಳಿಗಾಗಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಅಗೆದರೆ ಅಥವಾ ಅಣಿಗೊಳಿಸಿದರೆ;

(ಡಿ) ಅಂಥ ಅರಣ್ಯಕ್ಕೆ ಬೆಂಕಿ ಇಟ್ಟರೆ ಅಥವಾ 30ನೇ ಪ್ರಕರಣದ ಮೇರೆಗೆ ಮೀಸಲಾಗಿಟ್ಟ ಯಾವುದೇ ಮರಕ್ಕೆ, ಅದು ನಿಂತಿರಲಿ, ಬಿದ್ದಿರಲಿ ಅಥವಾ ಅದನ್ನು ಕೆಡವಿರಲಿ ಅದಕ್ಕೆ ಅಥವಾ ಅಂಥ ಅರಣ್ಯದ ಯಾವುದೇ ಮುಚ್ಚಿದ ಭಾಗಕ್ಕೆ ಬೆಂಕಿಯು ಹರಡುವುದನ್ನು ತಡೆಗಟ್ಟಲು ಎಲ್ಲಾ ಯುಕ್ತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳದೆ ಬೆಂಕಿಯನ್ನು ಹೊತ್ತಿಸಿದರೆ;

(ಇ) ಯಾವುದೇ ಅಂಥ ಮರದ ಅಥವಾ ಮುಚ್ಚಿದ ಭಾಗದ ಆಸುಪಾಸಿನಲ್ಲಿ ಅವನು ಹೊತ್ತಿಸಿದ ಯಾವುದೇ ಬೆಂಕಿಯನ್ನು ಉರಿಯಲು ಬಿಟ್ಟರೆ;

(ಎಫ್) ಹಿಂದೆ ಹೇಳಿದಂತೆ ಮೀಸಲಿಟ್ಟ ಯಾವುದೇ ಮರಕ್ಕೆ ಹಾನಿಯಾಗುವ ಹಾಗೆ ಯಾವುದೇ ಮರವನ್ನು ಕೆಡವಿದರೆ ಅಥವಾ ಯಾವುದೇ ಚೌಬೀನೆಯನ್ನು ಎಳೆದುಕೊಂಡು ಹೋದರೆ;

(ಜಿ) ಅಂಥ ಯಾವುದೇ ಮರವನ್ನು ಜಾನುವಾರುಗಳು ಹಾನಿಗೊಳಿಸಲು ಅವಕಾಶ ಮಾಡಿಕೊಟ್ಟರೆ;

(ಎಚ್) 32ನೇ ಪ್ರಕರಣದ ಮೇರೆಗಿನ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ

- ಅವನು ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಸಂರಕ್ಷಿತ ಅರಣ್ಯದಲ್ಲಿ ಉದ್ದೇಶಪೂರ್ವಕವಾಗಿ ಅಥವಾ ಅತೀವ ನಿರ್ಲಕ್ಷ್ಯದಿಂದ ಬೆಂಕಿಯನ್ನು ಉಂಟು ಮಾಡಿರುವಾಗಲೆಲ್ಲಾ ರಾಜ್ಯ ಸರ್ಕಾರವು, ಈ ಪ್ರಕರಣದ ಮೇರೆಗೆ ಯಾವುದೇ ದಂಡವನ್ನು ವಿಧಿಸಿದ್ದಾಗ್ಯೂ, ಅಂಥ ಅರಣ್ಯ ಅಥವಾ ಅದರ ಯಾವುದೇ ಭಾಗದಲ್ಲಿ ಹುಲ್ಲುಗಾವಲು ಅಥವಾ ಅರಣ್ಯೋತ್ಪನ್ನಕ್ಕೆ ಸಂಬಂಧಪಟ್ಟ ಯಾವುದೇ ಹಕ್ಕನ್ನು ಚಲಾಯಿಸುವುದನ್ನು ಅದು ಸೂಕ್ತವೆಂದು ಯೋಚಿಸುವಂಥ ಅವಧಿಯವರೆಗೆ ಅಮಾನತುಗೊಳಿಸತಕ್ಕದ್ದೆಂದು ನಿರ್ದೇಶಿಸಬಹುದು.

**34. ಕೆಲವು ಪ್ರಕರಣಗಳಲ್ಲಿ ಮಾಡಿದ ಕಾರ್ಯಗಳನ್ನು ಈ ಅಧ್ಯಾಯದಲ್ಲಿರುವುದು ಯಾವುದೂ ನಿಷೇಧಿಸಲಾಗದು.-** ಈ ಅಧ್ಯಾಯದಲ್ಲಿರುವುದು ಯಾವುದೂ, ಅರಣ್ಯಾಧಿಕಾರಿಯ ಲಿಖಿತ ಅನುಮತಿ ಪಡೆದು ಅಥವಾ 32ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ಅಥವಾ 29ನೇ ಪ್ರಕರಣದ ಮೇರೆಗೆ ದಾಖಲು ಮಾಡಿದ ಯಾವುದೇ ಹಕ್ಕನ್ನು ಚಲಾಯಿಸಿ, 30ನೇ ಪ್ರಕರಣದ ಮೇರೆಗೆ ಮುಚ್ಚಿದ ಅರಣ್ಯದ ಯಾವುದೇ ಭಾಗದ ಅಥವಾ 33ನೇ ಪ್ರಕರಣದ ಮೇರೆಗೆ ಅಮಾನತುಗೊಳಿಸಿರುವಂಥ ಯಾವುವೇ ಹಕ್ಕುಗಳನ್ನು ಹೊರತುಪಡಿಸಿ, ಮಾಡಲಾದ ಯಾವುದೇ ಕಾರ್ಯವನ್ನು ನಿಷೇಧಿಸುವುದೆಂದು ಭಾವಿಸತಕ್ಕದ್ದಲ್ಲ.

## ಅಧ್ಯಾಯ - V

## ಸರ್ಕಾರದ ಸ್ವತ್ತಾಗಿರದ ಅರಣ್ಯಗಳು ಮತ್ತು ಭೂಮಿಗಳ ಮೇಲೆ ನಿಯಂತ್ರಣದ ಬಗ್ಗೆ

**35. ವಿಶೇಷ ಉದ್ದೇಶಗಳಿಗಾಗಿ ಅರಣ್ಯಗಳ ಸಂರಕ್ಷಣೆ.-** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಅರಣ್ಯ ಅಥವಾ ಬಂಜರು ಭೂಮಿಯಲ್ಲಿ,-

(ಎ) ಸಾಗುವಳಿಗಾಗಿ ಭೂಮಿಯನ್ನು ಅಗೆಯುವುದು ಅಥವಾ ಅಣಿ ಮಾಡುವುದು;

(ಬಿ) ಜಾನುವಾರುಗಳನ್ನು ಮೇಯಿಸುವುದು; ಅಥವಾ

(ಸಿ) ಸಸ್ಯರಾಶಿಗೆ ಬೆಂಕಿ ಹಚ್ಚುವುದು ಅಥವಾ ಅವುಗಳನ್ನು ತೆಗೆದು ಹಾಕುವುದು

- ಇವುಗಳನ್ನು ಈ ಕೆಳಕಂಡ ಯಾವುದೇ ಉದ್ದೇಶಕ್ಕಾಗಿ, ಎಂದರೆ:-

(i) ಬಿರುಗಾಳಿ, ಗಾಳಿ, ಉರುಳಿ ಬೀಳುವ ಕಲ್ಲುಗಳು, ಪ್ರವಾಹ, ಉರುಳು ನೀರ್ಗಲ್ಲು ಇವುಗಳ ವಿರುದ್ಧ ಸಂರಕ್ಷಣೆಗಾಗಿ;

(ii) ಬದುವುಗಳು ಮತ್ತು ಇಳಿಜಾರುಗಳ ಮೇಲಿನ ಮತ್ತು ಗುಡ್ಡಗಾಡು ಪ್ರದೇಶಗಳ ಕೊಳ್ಳಗಳಲ್ಲಿನ ಮಣ್ಣಿನ ಪರಿರಕ್ಷಣೆ, ಭೂಜರಿತಗಳು ಅಥವಾ ಕೊರಕಲುಗಳು ಮತ್ತು ರಭಸ ಪ್ರವಾಹ ಉಂಟಾಗುವುದನ್ನು ತಡೆಗಟ್ಟುವುದು ಅಥವಾ ಸವೆತದಿಂದ ಭೂಮಿಯನ್ನು ಸಂರಕ್ಷಿಸುವುದಕ್ಕಾಗಿ ಅಥವಾ ಭೂಮಿಯ ಮೇಲೆ ಮರಳು, ಕಲ್ಲುಗಳು ಅಥವಾ ಕಂಕರೆಯ ಶೇಖರಣೆಯಾಗದಂತೆ ಭೂಮಿಯನ್ನು ಸಂರಕ್ಷಿಸುವುದಕ್ಕಾಗಿ;

(iii) ಚಿಲುಮೆಗಳು, ನದಿಗಳು ಮತ್ತು ಕೆರೆಗಳಲ್ಲಿನ ನೀರು ಪೂರೈಕೆಯ ನಿರ್ವಹಣೆಗಾಗಿ;

(iv) ರಸ್ತೆಗಳು, ಸೇತುವೆಗಳು, ರೈಲ್ವೆಗಳು ಮತ್ತು ಇತರ ಸಂಪರ್ಕ ಮಾರ್ಗಗಳ ಸಂರಕ್ಷಣೆಗಾಗಿ;

(v) ಸಾರ್ವಜನಿಕ ಆರೋಗ್ಯದ ಪರಿರಕ್ಷಣೆಗಾಗಿ;

- ನಿಯಂತ್ರಣ ಅಥವಾ ನಿಷೇಧವು ಅವಶ್ಯವೆಂದು ಕಂಡುಬಂದಾಗ ಹಾಗೆ ನಿಯಂತ್ರಿಸಬಹುದು ಅಥವಾ ನಿಷೇಧಿಸಬಹುದು.

(2) ರಾಜ್ಯ ಸರ್ಕಾರವು, ಯಾವುದೇ ಅಂಥ ಉದ್ದೇಶಕ್ಕಾಗಿ ಅದರ ವೆಚ್ಚದಲ್ಲಿಯೇ ಅದು ಸೂಕ್ತವೆಂದು ಯೋಚಿಸುವಂಥ ಕಾಮಗಾರಿಯನ್ನು ಯಾವುದೇ ಅರಣ್ಯ ಅಥವಾ ಬಂಜರು ಭೂಮಿಯಲ್ಲಿ ಅಥವಾ ಅದರ ಮೇಲೆ ನಿರ್ಮಿಸಬಹುದು.

(3) ಸಂದರ್ಭಾನುಸಾರ ಅಂಥ ಅಧಿಸೂಚನೆಯನ್ನು ಏಕೆ ಹೊರಡಿಸಬಾರದು ಅಥವಾ ಕಾಮಗಾರಿಯನ್ನು ನಿರ್ಮಿಸಕೂಡದು ಎಂಬ ಬಗ್ಗೆ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ ಯುಕ್ತ ಅವಧಿಯೊಳಗೆ ಕಾರಣವನ್ನು ತೋರಿಸಲು ಅಂಥ ಅರಣ್ಯ ಅಥವಾ ಭೂಮಿಯ ಒಡೆಯನಿಗೆ ನೋಟೀಸನ್ನು ಕೊಡುವವರೆಗೆ ಮತ್ತು ಅವನ ಆಕ್ಷೇಪಣೆಗಳು ಯಾವುವಾದರೂ ಇದ್ದರೆ ಅವುಗಳನ್ನು ಮತ್ತು ಅವುಗಳ ಸಮರ್ಥನೆಯಲ್ಲಿ ಅವನು ಹಾಜರುಪಡಿಸಬಹುದಾದ ಯಾವುದೇ ಸಾಕ್ಷ್ಯವನ್ನು ಆ ಬಗ್ಗೆ ಕ್ರಮಬದ್ಧವಾಗಿ ನೇಮಕಗೊಂಡ ಒಬ್ಬ ಅಧಿಕಾರಿಯು ಸುನಾವಣೆ ಮಾಡಿದ ತರುವಾಯ ರಾಜ್ಯ ಸರ್ಕಾರವು ಅವುಗಳನ್ನು ಪರ್ಯಾಲೋಚಿಸುವವರೆಗೆ, (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ ಅಥವಾ (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದಲ್ಲ.

**36. ಅರಣ್ಯಗಳ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳಲು ಅಧಿಕಾರ.**- (1) 35ನೇ ಪ್ರಕರಣದ ಮೇರೆಗಿನ ಯಾವುದೇ ವಿನಿಯಮ ಅಥವಾ ನಿಷೇಧಕ್ಕೆ ನಿರ್ಲಕ್ಷ್ಯತೆಯ ಅಥವಾ ಉದ್ದೇಶಪೂರ್ವಕವಾಗಿ ಅವಿಧೇಯತೆಯನ್ನು ತೋರಿಸುವ ಸಂದರ್ಭದಲ್ಲಿ ಅಥವಾ ಆ ಪ್ರಕರಣದ ಮೇರೆಗೆ ಯಾವುದೇ ಕಾಮಗಾರಿಯ ನಿರ್ಮಾಣದ ಉದ್ದೇಶಗಳು ಹಾಗೆ ಅಗತ್ಯಪಡಿಸಿದರೆ, ರಾಜ್ಯ ಸರ್ಕಾರವು ಅಂಥ ಅರಣ್ಯ ಅಥವಾ ಭೂಮಿಯ ಒಡೆಯನಿಗೆ ಲಿಖಿತದಲ್ಲಿ ನೋಟೀಸನ್ನು ಕೊಟ್ಟ ತರುವಾಯ ಮತ್ತು ಅವನ ಆಕ್ಷೇಪಣೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸಿದ ತರುವಾಯ, ಅದನ್ನು ಅರಣ್ಯಾಧಿಕಾರಿಯ ನಿಯಂತ್ರಣದಲ್ಲಿ ಇಡಬಹುದು ಮತ್ತು ಮೀಸಲಿಟ್ಟ ಅರಣ್ಯಗಳಿಗೆ ಸಂಬಂಧಪಟ್ಟ ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉಪಬಂಧಗಳು ಅಂಥ ಅರಣ್ಯಕ್ಕೆ ಅಥವಾ ಭೂಮಿಗೆ ಅನ್ವಯವಾಗತಕ್ಕದ್ದು ಎಂದು ಘೋಷಿಸಬಹುದು.

(2) ಅಂಥ ಅರಣ್ಯ ಅಥವಾ ಭೂಮಿಯ ವ್ಯವಸ್ಥಾಪನೆಯಿಂದ ಉದ್ಭವಿಸುವ ನಿವ್ವಳ ಲಾಭಗಳು

- ಯಾವುವಾದರೂ ಇದ್ದರೆ ಅವುಗಳನ್ನು

- ಸದರಿ ಒಡೆಯನಿಗೆ ಸಂದಾಯ ಮಾಡತಕ್ಕದ್ದು.

**37. ಕೆಲವು ಸಂದರ್ಭಗಳಲ್ಲಿ ಅರಣ್ಯಗಳ ಸ್ವತ್ತು ಹಕ್ಕಿನ ಹರಣ.**- (1) ಈ ಅಧ್ಯಾಯದ ಮೇರೆಗಿನ ಯಾವುದೇ ಪ್ರಕರಣದಲ್ಲಿ, ಅರಣ್ಯ ಅಥವಾ ಭೂಮಿಯನ್ನು ಅರಣ್ಯಾಧಿಕಾರಿಯ ನಿಯಂತ್ರಣದಲ್ಲಿ ಇಡುವುದಕ್ಕೆ ಬದಲಾಗಿ ಅದನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಆರ್ಜಿಸಬೇಕೆಂದು ರಾಜ್ಯ ಸರ್ಕಾರವು ಪರ್ಯಾಲೋಚಿಸಿದರೆ, ಭೂ ಆರ್ಜನಾ ಅಧಿನಿಯಮ, 1894 (1894ರ 1) ರಲ್ಲಿ ಉಪಬಂಧಿಸಿದ ರೀತಿಯಲ್ಲಿ ಅದನ್ನು ಆರ್ಜಿಸಲು ರಾಜ್ಯ ಸರ್ಕಾರವು ಮುಂದುವರಿಯಬಹುದು.

(2) 35ನೇ ಪ್ರಕರಣದ ಮೇರೆಗಿನ ಯಾವುದೇ ಅಧಿಸೂಚನೆಯಲ್ಲಿ ಒಳಗೊಂಡ ಯಾವುದೇ ಅರಣ್ಯ ಅಥವಾ ಭೂಮಿಯ ಒಡೆಯನು ಅಧಿಸೂಚನೆಯ ದಿನಾಂಕದಿಂದ ಮೂರು ವರ್ಷಗಳಿಗೆ ಕಡಿಮೆ ಇಲ್ಲದ ಅಥವಾ ಹನ್ನೆರಡು ವರ್ಷಗಳಿಗೆ ಮೀರದ ಯಾವುದೇ ಕಾಲದಲ್ಲಿ ಅಂಥ ಅರಣ್ಯ ಅಥವಾ ಭೂಮಿಯನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಆರ್ಜಿಸತಕ್ಕದ್ದೆಂದು ಅಗತ್ಯಪಡಿಸಬಹುದು ಮತ್ತು ತದನುಸಾರವಾಗಿ ರಾಜ್ಯ ಸರ್ಕಾರವು ಅಂಥ ಅರಣ್ಯ ಅಥವಾ ಭೂಮಿಯನ್ನು ಆರ್ಜಿಸತಕ್ಕದ್ದು.

**38. ಒಡೆಯರ ಕೋರಿಕೆಯ ಮೇರೆಗೆ ಅರಣ್ಯಗಳ ಸಂರಕ್ಷಣೆ.**- (1) ಯಾವುದೇ ಭೂಮಿಯ ಒಡೆಯನು ಅಥವಾ ಒಬ್ಬನಿಗಿಂತ ಹೆಚ್ಚು ಮಂದಿ ಅದರ ಒಡೆಯರಿದ್ದರೆ, ಒಟ್ಟಿನಲ್ಲಿ ಕನಿಷ್ಠ ಮೂರನೇ ಎರಡರಷ್ಟಾಗುವ ಷೇರುಗಳ ಒಡೆಯರು ಆ ಭೂಮಿಯ ಮೇಲೆ ಅರಣ್ಯಗಳ ರಚನೆ ಅಥವಾ ಸಂರಕ್ಷಣೆಯ ದೃಷ್ಟಿಯಿಂದ ಲಿಖಿತದಲ್ಲಿ ಕಲೆಕ್ಟರನಿಗೆ,-

(ಎ) ಪರಸ್ಪರ ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳ ಮೇರೆಗೆ ಅಂಥ ಭೂಮಿಯನ್ನು ಅರಣ್ಯಾಧಿಕಾರಿಯು ಮೀಸಲಿಟ್ಟ ಅಥವಾ ಸಂರಕ್ಷಿತ ಅರಣ್ಯವನ್ನಾಗಿ ತಮ್ಮ ಪರವಾಗಿ ವ್ಯವಸ್ಥಾಪನೆ ಮಾಡಬೇಕೆಂದು; ಅಥವಾ

(ಬಿ) ಅಂಥ ಭೂಮಿಗೆ ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧಗಳನ್ನು ಅನ್ವಯಿಸತಕ್ಕದ್ದೆಂದು

– ಮನವಿ ಮೂಲಕ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಬಹುದು.

(2) ಈ ಎರಡೂ ಪ್ರಕರಣಗಳಲ್ಲಿ, ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಪರಿಸ್ಥಿತಿಗಳಿಗೆ ಸೂಕ್ತವೆಂದು ತಾನು ಯೋಚಿಸುವಂಥ ಮತ್ತು ಅರ್ಜಿದಾರರು ಇಚ್ಚಿಸಬಹುದಾದಂಥ ಈ ಅಧಿನಿಯಮದ ಉಪಬಂಧಗಳನ್ನು ಅಂಥ ಭೂಮಿಗೆ ಅನ್ವಯಿಸಬಹುದು.

## ಅಧ್ಯಾಯ – VI

## ಚೌಬೀನೆ ಮತ್ತು ಇತರ ಅರಣ್ಯೋತ್ಪನ್ನದ ಮೇಲಿನ ಸುಂಕದ ಬಗ್ಗೆ

**39. ಚೌಬೀನೆ ಮತ್ತು ಇತರ ಅರಣ್ಯೋತ್ಪನ್ನದ ಮೇಲೆ ಸುಂಕವನ್ನು ವಿಧಿಸುವ ಅಧಿಕಾರ.–** (1) ಕೇಂದ್ರ ಸರ್ಕಾರವು, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಘೋಷಿಸಬಹುದಾದಂಥ ರೀತಿಯಲ್ಲಿ, ಸ್ಥಳಗಳಲ್ಲಿ ಮತ್ತು ದರಗಳಲ್ಲಿ,–

(ಎ) ಈ ಅಧಿನಿಯಮವು ವ್ಯಾಪ್ತವಾಗುವಂಥ ರಾಜ್ಯಕ್ಷೇತ್ರಗಳಲ್ಲಿ ಉತ್ಪಾದಿಸಲಾಗುವಂಥ ಮತ್ತು ಸರ್ಕಾರವು ಯಾವುದೇ ಹಕ್ಕನ್ನು ಹೊಂದಿರುವಂಥ;

(ಬಿ) ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳ ಹೊರಗಿನ ಯಾವುದೇ ಸ್ಥಳದಿಂದ ತರಲಾಗಿರುವಂಥ

– ಎಲ್ಲಾ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನದ ಮೇಲೆ ಸುಂಕವನ್ನು ವಿಧಿಸಬಹುದು.

(2) ಅಂಥ ಸುಂಕವನ್ನು ಮೌಲ್ಯಾನುಸಾರವಾಗಿ ವಿಧಿಸಬೇಕೆಂದು ನಿರ್ದೇಶಿಸಲಾಗಿರುವಂಥ ಪ್ರತಿಯೊಂದು ಪ್ರಕರಣದಲ್ಲಿ ಕೇಂದ್ರ ಸರ್ಕಾರವು ಅಂಥದೇ ಅಧಿಸೂಚನೆಯ ಮೂಲಕ ಯಾವ ಮೌಲ್ಯದ ಮೇಲೆ ಅಂಥ ಸುಂಕವನ್ನು ನಿರ್ಧರಿಸತಕ್ಕದ್ದೆಂಬುದನ್ನು ನಿಗದಿಪಡಿಸಬಹುದು.

(3) ಯಾವುದೇ ರಾಜ್ಯಕ್ಷೇತ್ರದಲ್ಲಿ ಈ ಅಧಿನಿಯಮವು ಜಾರಿಗೆ ಬರುವ ಕಾಲದಲ್ಲಿ ರಾಜ್ಯ ಸರ್ಕಾರದ ಅಧಿಕಾರದ ಮೇರೆಗೆ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನದ ಮೇಲೆ, ಅಲ್ಲಿ ವಿಧಿಸಲಾಗುವಂಥ ಎಲ್ಲಾ ಸುಂಕಗಳನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಕ್ರಮಬದ್ಧವಾಗಿ ವಿಧಿಸಿದೆ ಮತ್ತು ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು.

(4) ಈ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು, ಸಂಸತ್ತು ತದ್ವಿರುದ್ಧವಾಗಿ ಉಪಬಂಧಿಸುವವರೆಗೆ, ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಅದು ಕಾನೂನುಬದ್ಧವಾಗಿ ವಿಧಿಸುತ್ತಿದ್ದ ಯಾವುದೇ ಸುಂಕವನ್ನು ಆಗ ಜಾರಿಯಲ್ಲಿದ್ದಂತೆ ಈ ಪ್ರಕರಣದ ಮೇರೆಗೆ ವಿಧಿಸುವುದನ್ನು ಮುಂದುವರಿಸತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ರಾಜ್ಯದಲ್ಲಿನ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನ ಮತ್ತು ರಾಜ್ಯದ ಹೊರಗಡೆಯ ಅಂಥದೇ ಉತ್ಪನ್ನ – ಇವೆರಡರ ನಡುವೆ ಮೊದಲನೆಯದಕ್ಕೆ ಅನುಕೂಲಕರವಾಗಿರುವಂಥ, ಅಥವಾ ರಾಜ್ಯದ ಹೊರಗಡೆಯ ಸ್ಥಳಗಳಲ್ಲಿನ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನದ ಸಂದರ್ಭದಲ್ಲಿ ಒಂದು ಸ್ಥಳದ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನಗಳ ನಡುವೆ ತಾರತಮ್ಯ ಮಾಡುವಂಥ ಯಾವುದೇ ಸುಂಕವನ್ನು ವಿಧಿಸಲು ಅಧಿಕೃತಗೊಳಿಸುವುದಿಲ್ಲ.

**40. ಖರೀದಿ – ಹಣ ಅಥವಾ ಸ್ವಾಮ್ಯ ಶುಲ್ಕಕ್ಕೆ ಪರಿಮಿತಿಯು ಅನ್ವಯವಾಗದಿರುವುದು.–** ಈ ಅಧ್ಯಾಯ ದಲ್ಲಿರುವುದು ಯಾವುದೂ, ಯಾವುದೇ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನದ ಖರೀದಿ – ಹಣ ಅಥವಾ ಸ್ವಾಮ್ಯ ಶುಲ್ಕವಾಗಿ ವಿಧಿಸಬಹುದಾದ ಮೊಬಲಗು ಯಾವುದಾದರೂ ಇದ್ದರೆ, ಅಂಥ ಚೌಬೀನೆ ಅಥವಾ ಉತ್ಪನ್ನದ ಸಾಗಣೆಯಲ್ಲಿರುವಾಗ ಸುಂಕವನ್ನು ವಿಧಿಸುವಂಥ ರೀತಿಯಲ್ಲಿಯೇ ಅದಕ್ಕೆ ವಿಧಿಸಿದ್ದಾಗ್ಯೂ, ಆ ಮೊಬಲಗನ್ನು ಪರಿಮಿತಿಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

## ಅಧ್ಯಾಯ – VII

## ಸಾಗಣೆಯಲ್ಲಿರುವ ಚೌಬೀನೆ ಮತ್ತು ಇತರ ಅರಣ್ಯೋತ್ಪನ್ನದ ನಿಯಂತ್ರಣದ ಬಗ್ಗೆ

**41. ಅರಣ್ಯೋತ್ಪನ್ನದ ಸಾಗಣೆಯನ್ನು ನಿಯಂತ್ರಿಸಲು ನಿಯಮ ರಚನಾಧಿಕಾರ.–** (1) ಚೌಬೀನೆಯನ್ನು ತೇಲಿ ಬಿಡುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ನದಿಗಳ ಮತ್ತು ಅವುಗಳ ದಂಡೆಗಳ ನಿಯಂತ್ರಣವು ಮತ್ತು ಭೂ ಅಥವಾ

ಜಲಮಾರ್ಗದ ಮೂಲಕ ಸಾಗಣೆಯಲ್ಲಿರುವ ಎಲ್ಲಾ ಚೌಬೀನೆ ಮತ್ತು ಇತರ ಅರಣ್ಯೋತ್ಪನ್ನದ ನಿಯಂತ್ರಣವು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,-

(ಎ) ಯಾವ ಮಾರ್ಗಗಳ ಮೂಲಕ ಮಾತ್ರ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನವನ್ನು ರಾಜ್ಯದಿಂದ ಅಥವಾ ರಾಜ್ಯದೊಳಗೆ ಆಮದು ಮಾಡಿಕೊಳ್ಳಬಹುದು, ರಫ್ತು ಮಾಡಬಹುದು ಅಥವಾ ಸಾಗಿಸಬಹುದು ಎಂಬುದನ್ನು ನಿಯಮಿಸಬಹುದು;

(ಬಿ) ಪಾಸನ್ನು ಕೊಡಲು ಕ್ರಮಬದ್ಧವಾಗಿ ಅಧಿಕೃತಗೊಳಿಸಲಾಗಿರುವ ಅಧಿಕಾರಿಯಿಂದ ಪಾಸನ್ನು ಪಡೆಯದೆ ಅಥವಾ ಅಂಥ ಪಾಸಿನ ಷರತ್ತುಗಳಿಗೆ ಅನುಸಾರವಾಗಿ ಅಲ್ಲದೆ, ಅಂಥ ಚೌಬೀನೆ ಅಥವಾ ಇತರ ಉತ್ಪನ್ನದ ಆಮದು ಅಥವಾ ರಫ್ತು ಮಾಡುವುದನ್ನು ಅಥವಾ ಸಾಗಿಸುವುದನ್ನು ನಿಷೇಧಿಸಬಹುದು;

(ಸಿ) ಅಂಥ ಪಾಸುಗಳನ್ನು ಕೊಡಲು, ಹಾಜರುಪಡಿಸಲು ಮತ್ತು ವಾಪಸ್ಸು ಮಾಡಲು ಮತ್ತು ಅದಕ್ಕಾಗಿ ಫೀಜುಗಳನ್ನು ಸಂದಾಯ ಮಾಡಲು ಉಪಬಂಧ ಕಲ್ಪಿಸಬಹುದು;

(ಡಿ) ಯಾವ ಚೌಬೀನೆ ಅಥವಾ ಅರಣ್ಯೋತ್ಪನ್ನದ ಸಂಬಂಧದಲ್ಲಿ, ಅದರ ಬೆಲೆಯ ಬಗ್ಗೆ, ಅಥವಾ ಅದರ ಬಗ್ಗೆ ಬಾಕಿಯಾದ ಯಾವುದೇ ಸುಂಕ, ಫೀಜು, ಸ್ವಾಮ್ಯ ಶುಲ್ಕ ಅಥವಾ ಋಣಭಾರದ ಬಗ್ಗೆ ಸರ್ಕಾರಕ್ಕೆ ಯಾವುದೇ ಹಣವು ಸಂದಾಯವಾಗಬೇಕೆಂದು ನಂಬಲು ಕಾರಣವಿದೆಯೋ ಅಥವಾ ಯಾವುದಕ್ಕೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಗುರುತನ್ನು ಹಾಕುವುದು ಅಪೇಕ್ಷಣೀಯವಾಗಿದೆಯೋ ಆ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನವನ್ನು ಅದು ಸಾಗಣೆಯಲ್ಲಿರುವಾಗ ನಿಲ್ಲಿಸುವುದು, ವರದಿ ಮಾಡುವುದು, ಪರೀಕ್ಷಿಸುವುದು ಮತ್ತು ಗುರುತು ಹಾಕುವುದು - ಇವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು;

(ಇ) ಪರೀಕ್ಷೆಗಾಗಿ ಅಥವಾ ಅಂಥ ಹಣದ ಸಂದಾಯಕ್ಕಾಗಿ ಅಥವಾ ಅಂಥ ಗುರುತುಗಳನ್ನು ಅದಕ್ಕೆ ಹಾಕುವುದಕ್ಕಾಗಿ ಅದರ ಪ್ರಭಾರದಲ್ಲಿರುವವರು ಯಾವ ಡಿಪೋಗಳಿಗೆ ಅಂಥ ಚೌಬೀನೆ ಅಥವಾ ಇತರ ಉತ್ಪನ್ನವನ್ನು ತೆಗೆದುಕೊಂಡು ಹೋಗಬೇಕೋ ಆ ಡಿಪೋಗಳ ಸ್ಥಾಪನೆ ಮತ್ತು ನಿಯಂತ್ರಣ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಅಂಥ ಚೌಬೀನೆ ಅಥವಾ ಇತರ ಉತ್ಪನ್ನವನ್ನು ಅಂಥ ಡಿಪೋಗಳಿಗೆ ತರತಕ್ಕುದೋ, ಅಲ್ಲಿ ದಾಸ್ತಾನು ಮಾಡತಕ್ಕುದೋ, ಮತ್ತು ಅಲ್ಲಿಂದ ಸ್ಥಳಾಂತರಿಸತಕ್ಕುದೋ ಆ ಷರತ್ತುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು;

(ಎಫ್) ಚೌಬೀನೆ ಮತ್ತು ಇತರ ಅರಣ್ಯೋತ್ಪನ್ನವನ್ನು ಸಾಗಿಸುವುದಕ್ಕಾಗಿ ಉಪಯೋಗಿಸುವ ಯಾವುದೇ ನದಿ ಕಾಲುವೆ ಅಥವಾ ದಂಡೆಗಳನ್ನು ಮುಚ್ಚುವುದು ಅಥವಾ ಅಡ್ಡಿಪಡಿಸುವುದು ಮತ್ತು ಯಾವುದೇ ಅಂಥ ನದಿಯೊಳಕ್ಕೆ ಹುಲ್ಲು, ಮುಳ್ಳುಕಂಟಿ, ಕೊಂಬೆಗಳು ಅಥವಾ ಎಲೆಗಳನ್ನು ಎಸೆಯುವ ಮೂಲಕ ಅಂಥ ನದಿಯು ಮುಚ್ಚಿ ಹೋಗುವಂತೆ ಮಾಡುವುದು ಅಥವಾ ಅದಕ್ಕೆ ಅಡ್ಡಿಯನ್ನುಂಟು ಮಾಡುವುದು - ಈ ಯಾವುದೇ ಕಾರ್ಯವನ್ನು ನಿಷೇಧಿಸಬಹುದು;

(ಜಿ) ಯಾವುದೇ ಅಂಥ ನದಿ ಕಾಲುವೆ ಅಥವಾ ದಂಡೆಗಳಿಗೆ, ಯಾವುದೇ ಅಡ್ಡಿಯುಂಟು ಮಾಡುವುದನ್ನು ಪ್ರತಿಬಂಧಿಸುವ ಅಥವಾ ಅದನ್ನು ತೆಗೆದು ಹಾಕುವ ಬಗ್ಗೆ ಮತ್ತು ಯಾರ ಕಾರ್ಯಗಳಿಂದ ಅಥವಾ ನಿರ್ಲಕ್ಷ್ಯತೆಯಿಂದ ಅದು ಉಂಟಾಗಿತ್ತೋ ಆ ವ್ಯಕ್ತಿಯಿಂದ ಆ ಸಂಬಂಧದಲ್ಲಿ ತಗುಲಿದ ಖರ್ಚನ್ನು ವಸೂಲು ಮಾಡುವ ಬಗ್ಗೆ ಉಪಬಂಧ ಕಲ್ಪಿಸಬಹುದು;

(ಎಚ್) ನಿರುಪಾಧಿಕವಾಗಿಯೇ ಆಗಲಿ ಅಥವಾ ಷರತ್ತುಗಳಿಗೆ ಒಳಪಟ್ಟಾಗಿಯೇ ಆಗಲಿ ನಿರ್ದಿಷ್ಟಪಡಿಸಿದ ಸ್ಥಳೀಯ ಪರಿಮಿತಿಗಳೊಳಗೆ ಗರಗಸದ ಗುಂಡಿಗಳ ಸ್ಥಾಪನೆ, ಚೌಬೀನೆಯನ್ನು ಪರಿವರ್ತಿಸುವುದು, ಕತ್ತರಿಸುವುದು, ಸುಡುವುದು, ಬಚ್ಚಿಡುವುದು ಅಥವಾ ಅದರ ಮೇಲೆ ಗುರುತು ಹಾಕುವುದು ಇವುಗಳನ್ನು, ಅದರ ಮೇಲಿನ ಯಾವುವೇ ಗುರುತುಗಳನ್ನು ಬದಲಾಯಿಸುವುದು ಅಥವಾ ಅಳಿಸಿ ಹಾಕುವುದನ್ನು, ಅಥವಾ ಚೌಬೀನೆಗೆ ಗುರುತು ಹಾಕುವುದಕ್ಕಾಗಿ ಉಪಯೋಗಿಸುವ ಗುರುತು ಸುತ್ತಿಗೆಗಳು ಅಥವಾ ಇತರ ಉಪಕರಣಗಳ ಸ್ವಾಧೀನತೆಯನ್ನು ಹೊಂದಿರುವುದು ಅಥವಾ ಅವುಗಳನ್ನು ಒಯ್ಯುವುದನ್ನು ನಿಷೇಧಿಸಬಹುದು;

(ಐ) ಚೌಬೀನೆಗೆ ಸ್ವತ್ತು ಗುರುತು ಉಪಯೋಗಿಸುವುದನ್ನು ಮತ್ತು ಅಂಥ ಗುರುತುಗಳ ನೋಂದಣಿಯನ್ನು ವಿನಿಯಮಿಸಬಹುದು; ಅಂಥ ನೋಂದಣಿಯು ಎಷ್ಟು ಕಾಲದವರೆಗೆ ಚಾಲ್ತಿಯಲ್ಲಿ ಇರತಕ್ಕುದೋ ಆ ಕಾಲವನ್ನು ನಿಯಮಿಸಬಹುದು; ಯಾರೇ ಒಬ್ಬ ವ್ಯಕ್ತಿಯು ನೋಂದಾಯಿಸಬಹುದಾದಂಥ ಗುರುತುಗಳ ಸಂಖ್ಯೆಯನ್ನು ಪರಿಮಿತಿಗೊಳಿಸಬಹುದು ಮತ್ತು ಅಂಥ ನೋಂದಣಿಗಾಗಿ ಫೀಜುಗಳನ್ನು ವಿಧಿಸುವ ಬಗ್ಗೆ ಉಪಬಂಧ ಕಲ್ಪಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವು, ಯಾವುದೇ ನಿರ್ದಿಷ್ಟ ವರ್ಗದ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನಕ್ಕೆ ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಸ್ಥಳೀಯ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ ಎಂದು ರಾಜ್ಯ ಸರ್ಕಾರವು ನಿರ್ದೇಶಿಸಬಹುದು.

**41ಎ. ಸೀಮಾಸುಂಕ ಗಡಿಗಳ ಆಚೆ ಚೌಬೀನೆಯ ಸಾಗಣೆಗಳ ಬಗ್ಗೆ ಕೇಂದ್ರ ಸರ್ಕಾರದ ಅಧಿಕಾರಗಳು.–** 41ನೇ ಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು, ಯಾವುದೇ ಸೀಮಾಸುಂಕ ಗಡಿಯುದ್ದಕ್ಕೂ ಇರುವ ಹಾಗೂ ಈ ಅಧಿನಿಯಮವು ವ್ಯಾಪ್ತವಾಗುವಂಥ ರಾಜ್ಯಕ್ಷೇತ್ರದೊಳಕ್ಕೆ ಅಥವಾ ರಾಜ್ಯಕ್ಷೇತ್ರದಿಂದ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನವನ್ನು ಯಾವ ಮಾರ್ಗದ ಮೂಲಕ ಮಾತ್ರವೇ ಆಮದು ಮಾಡಿಕೊಳ್ಳಬಹುದೋ, ರಫ್ತು ಮಾಡಬಹುದೋ ಅಥವಾ ಸಾಗಿಸಬಹುದೋ, ಆ ಮಾರ್ಗವನ್ನು ನಿಯಮಿಸಲು ನಿಯಮಗಳನ್ನು ರಚಿಸಬಹುದು ಮತ್ತು 41ನೇ ಪ್ರಕರಣದ ಮೇರೆಗೆ ರಚಿಸಿದ ಯಾವುವೇ ನಿಯಮಗಳು ಈ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳಿಗೆ ಒಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು.

**42. 41ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಉಲ್ಲಂಘನೆಗಾಗಿ ದಂಡ.–** (1) ರಾಜ್ಯ ಸರ್ಕಾರವು, ಅಂಥ ನಿಯಮಗಳ ಮೂಲಕ, ಅವುಗಳ ಉಲ್ಲಂಘನೆಗಾಗಿ ದಂಡಗಳಾಗಿ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸವನ್ನು ಮತ್ತು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯನ್ನು ಅಥವಾ ಅವೆರಡನ್ನೂ ನಿಯಮಿಸಬಹುದು.

(2) ಅಂಥ ನಿಯಮಗಳು, (1)ನೇ ಉಪಪ್ರಕರಣದಲ್ಲಿ ನಮೂದಿಸಲಾಗಿರುವ ದಂಡಗಳ ಎರಡರಷ್ಟನ್ನು, ಅಪರಾಧವನ್ನು ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯಕ್ಕೆ ಮೊದಲು ಮಾಡಿರುವಲ್ಲಿ ಅಥವಾ ಕಾನೂನು ಸಮ್ಮತ ಪ್ರಾಧಿಕಾರಿಗೆ ಪ್ರತಿರೋಧವನ್ನು ತೋರಿಸುವುದಕ್ಕಾಗಿ ಸಿದ್ಧತೆಯನ್ನು ಮಾಡಿಕೊಂಡ ತರುವಾಯ ಮಾಡಿರುವಲ್ಲಿ ಅಥವಾ ಅಪರಾಧಿಯನ್ನು ಅದೇ ಬಗೆಯ ಅಪರಾಧದ ಬಗ್ಗೆ ಈ ಹಿಂದೆ ಅಪರಾಧಿಯೆಂದು ನಿರ್ಣಯಿಸಿರುವ ಸಂದರ್ಭದಲ್ಲಿ ವಿಧಿಸಬಹುದೆಂಬ ಬಗ್ಗೆ ಉಪಬಂಧ ಕಲ್ಪಿಸಬಹುದು.

**43. ಡಿಪೋದಲ್ಲಿ ಅರಣ್ಯೋತ್ಪನ್ನಕ್ಕೆ ಉಂಟಾದ ಹಾನಿಗಾಗಿ ಸರ್ಕಾರ ಮತ್ತು ಅರಣ್ಯಾಧಿಕಾರಿಗಳು ಹೊಣೆಯಲ್ಲ.–** 41ನೇ ಪ್ರಕರಣದ ನಿಯಮಗಳ ಮೇರೆಗೆ ಸ್ಥಾಪಿಸಲಾದ ಡಿಪೋದಲ್ಲಿ ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ಬೇರೆಡೆಯಲ್ಲಿ ತಡೆಹಿಡಿದಿಟ್ಟಿರುವ ಯಾವುದೇ ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನಕ್ಕೆ ಸಂಬಂಧಿಸಿದಂತೆ ಸಂಭವಿಸಬಹುದಾದಂಥ ಯಾವುದೇ ನಷ್ಟ ಅಥವಾ ಹಾನಿಗಾಗಿ ಸರ್ಕಾರವು ಜವಾಬ್ದಾರಿಯಾಗಿರತಕ್ಕದ್ದಲ್ಲ ಮತ್ತು ಯಾರೇ ಅರಣ್ಯಾಧಿಕಾರಿಯು, ಅಂಥ ನಷ್ಟ ಅಥವಾ ಹಾನಿಯನ್ನು ನಿರ್ಲಕ್ಷ್ಯದಿಂದ, ದ್ವೇಷಪೂರ್ವಕವಾಗಿ ಅಥವಾ ಮೋಸದಿಂದ ಉಂಟು ಮಾಡಿದ ಹೊರತು ಅವನು ಯಾವುದೇ ಅಂಥ ನಷ್ಟ ಅಥವಾ ಹಾನಿಗೆ ಜವಾಬ್ದಾರನಾಗತಕ್ಕದ್ದಲ್ಲ.

**44. ಡಿಪೋದಲ್ಲಿ ಉಂಟಾಗುವ ಅಪಘಾತದ ಸಂದರ್ಭದಲ್ಲಿ ಎಲ್ಲ ವ್ಯಕ್ತಿಗಳು ನೆರವು ನೀಡಲು ಬದ್ಧರಾಗಿರುವುದು.–** ಯಾವುದೇ ಅಂಥ ಡಿಪೋವಿನಲ್ಲಿ, ಯಾವುದೇ ಸ್ವತ್ತಿಗೆ ಅಪಾಯವನ್ನುಂಟು ಮಾಡುವ ಯಾವುದೇ ಅಪಘಾತ ಅಥವಾ ತುರ್ತುಸ್ಥಿತಿಯು ಒದಗಿದ ಸಂದರ್ಭದಲ್ಲಿ, ಅಂಥ ಡಿಪೋದಲ್ಲಿ ಸರ್ಕಾರದಿಂದಾಗಲಿ ಅಥವಾ ಯಾರೇ ಖಾಸಗಿ ವ್ಯಕ್ತಿಯಿಂದಾಗಲಿ ನಿಯೋಜಿತರಾಗಿರುವ ಪ್ರತಿಯೊಬ್ಬ ವ್ಯಕ್ತಿಯನ್ನು, ಅಂಥ ಅಪಾಯವನ್ನು ನಿವಾರಿಸುವಂತೆ ಅಥವಾ ಅಂಥ ಸ್ವತ್ತನ್ನು ಹಾನಿ ಅಥವಾ ನಷ್ಟದಿಂದ ಸುರಕ್ಷಿತವಾಗಿರಿಸುವಂತೆ ಯಾರೇ ಅರಣ್ಯಾಧಿಕಾರಿ ಅಥವಾ ಪೊಲೀಸ್ ಅಧಿಕಾರಿಯು ನೆರವು ನೀಡುವಂತೆ ಕೇಳಿದಾಗ, ಅವನು ಅಂಥ ನೆರವನ್ನು ಒದಗಿಸತಕ್ಕದ್ದು.

## ಅಧ್ಯಾಯ - VIII

### ಕೊಚ್ಚಿಕೊಂಡು ಬಂದ ಮತ್ತು ನೆಲಹತ್ತಿದ ಚೌಬೀನೆಯ ಸಂಗ್ರಹಣೆಯ ಬಗ್ಗೆ

**45. ಕೆಲವು ಬಗೆಗಳ ಚೌಬೀನೆಯ ಸ್ವಾಮ್ಯವನ್ನು ರುಜುವಾತುಪಡಿಸುವವರೆಗೆ ಅದು ಸರ್ಕಾರದ ಸ್ವತ್ತಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅದನ್ನು ತದನುಸಾರವಾಗಿ ಸಂಗ್ರಹಿಸಬಹುದು.–** (1) ಕೊಚ್ಚಿಕೊಂಡು ಬಂದ, ಸಮುದ್ರ ದಂಡೆಯ ಮೇಲೆ ಬಿದ್ದಿರುವ, ನೆಲ ಹತ್ತಿದ ಅಥವಾ ಮುಳುಗಿದ ಎಲ್ಲಾ ಕಟ್ಟಿಗೆ ಅಥವಾ ಚೌಬೀನೆಯು 41ನೇ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳಿಗನುಸಾರವಾಗಿ ನೋಂದಾಯಿತವಾಗಿಲ್ಲದೆ ಇರುವಂಥ ಗುರುತುಗಳನ್ನು ಹೊಂದಿರುವ ಅಥವಾ ಯಾವುದರ ಮೇಲಿನ ಗುರುತುಗಳನ್ನು ಬೆಂಕಿಯಿಂದ ಅಥವಾ ಬೇರೆ ರೀತಿಯಲ್ಲಿ ಅಳಿಸಿಹಾಕಲಾಗಿದೆಯೋ, ಬದಲಾಯಿಸಲಾಗಿದೆಯೋ, ವಿರೂಪಗೊಳಿಸಲಾಗಿದೆಯೋ ಆ ಎಲ್ಲಾ ಕಟ್ಟಿಗೆ ಅಥವಾ ಚೌಬೀನೆ, ಮತ್ತು

– ರಾಜ್ಯ ಸರ್ಕಾರವು ನಿರ್ದೇಶಿಸುವಂಥ ಪ್ರದೇಶಗಳಲ್ಲಿನ ಗುರುತು ಮಾಡಿಲ್ಲದ ಎಲ್ಲಾ ಕಟ್ಟಿಗೆ ಅಥವಾ ಚೌಬೀನೆ– ಇವುಗಳು

– ಈ ಅಧ್ಯಾಯದಲ್ಲಿ ಉಪಬಂಧಿಸಿರುವಂತೆ ಯಾರೇ ವ್ಯಕ್ತಿಯು ಅದಕ್ಕೆ ತನ್ನ ಹಕ್ಕು ಮತ್ತು ಸ್ವಾಮ್ಯವನ್ನು ಸ್ಥಾಪಿಸಿದ್ದ ಹೊರತು ಮತ್ತು ಸ್ಥಾಪಿಸುವವರೆಗೆ ಸರ್ಕಾರದ ಸ್ವತ್ತಾಗಿರುವುದೆಂದು ಭಾವಿಸತಕ್ಕದ್ದು.

(2) ಅಂಥ ಚೌಬೀನೆಯನ್ನು ಯಾರೇ ಅರಣ್ಯಾಧಿಕಾರಿಯು ಅಥವಾ 51ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಬಲದಿಂದ ಅದನ್ನು ಸಂಗ್ರಹಿಸಲು ಹಕ್ಕುಳ್ಳವನಾದ ಇತರ ವ್ಯಕ್ತಿಯು ಸಂಗ್ರಹಿಸಬಹುದು ಮತ್ತು ಅದನ್ನು, ಕೊಚ್ಚಿಕೊಂಡು ಬಂದ ಚೌಬೀನೆಯನ್ನು ಸ್ವೀಕರಿಸುವ ಡಿಪೋ ಎಂದು ಆ ಅರಣ್ಯಾಧಿಕಾರಿಯು ಅಧಿಸೂಚಿಸಬಹುದಾದಂಥ ಯಾವುದೇ ಡಿಪೋಗೆ ಸಾಗಿಸಬಹುದು.

(3) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಚೌಬೀನೆಯ ಯಾವುದೇ ವರ್ಗವನ್ನು ಈ ಪ್ರಕರಣದ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

**46. ಕೊಚ್ಚಿಕೊಂಡು ಬಂದ ಚೌಬೀನೆಯ ಕ್ಲೇಮುದಾರರಿಗೆ ನೋಟೀಸು.–** 45ನೇ ಪ್ರಕರಣದ ಮೇರೆಗೆ ಸಂಗ್ರಹಿಸಿದ ಚೌಬೀನೆಯ ಬಗ್ಗೆ ಅರಣ್ಯಾಧಿಕಾರಿಯು ಕಾಲಕಾಲಕ್ಕೆ ಸಾರ್ವಜನಿಕ ನೋಟೀಸನ್ನು ಕೊಡತಕ್ಕದ್ದು. ಅಂಥ ನೋಟೀಸು, ಚೌಬೀನೆಯ ವಿವರಣೆಯನ್ನು ಒಳಗೊಂಡಿರತಕ್ಕದ್ದು ಮತ್ತು ಚೌಬೀನೆಯನ್ನು ಕ್ಲೇಮು ಮಾಡುವ ಯಾರೇ ವ್ಯಕ್ತಿಯು ಅಂಥ ನೋಟೀಸಿನ ದಿನಾಂಕದಿಂದ ಎರಡು ತಿಂಗಳಿಗಿಂತ ಕಡಿಮೆಯಲ್ಲದ ಅವಧಿಯ ಒಳಗಾಗಿ ಅಂಥ ಕ್ಲೇಮಿನ ಬಗ್ಗೆ ಲಿಖಿತದಲ್ಲಿ ಹೇಳಿಕೆಯನ್ನು ಅಂಥ ಅಧಿಕಾರಿಗೆ ಸಲ್ಲಿಸಲು ಅದು ಅಗತ್ಯಪಡಿಸತಕ್ಕದ್ದು.

**47. ಅಂಥ ಚೌಬೀನೆ ಕುರಿತು ಸಲ್ಲಿಸಿದ ಕ್ಲೇಮಿನ ಬಗ್ಗೆ ಪ್ರಕ್ರಿಯೆ.–** (1) ಹಿಂದೆ ಹೇಳಿದಂಥ ಯಾವುದೇ ಹೇಳಿಕೆಯನ್ನು ಸಲ್ಲಿಸಿದಾಗ ಅರಣ್ಯಾಧಿಕಾರಿಯು ತಾನು ಯುಕ್ತವೆಂದು ಯೋಚಿಸುವಂತಹ ವಿಚಾರಣೆಯನ್ನು ಮಾಡಿದ ತರುವಾಯ ಆ ಕ್ಲೇಮನ್ನು ತಿರಸ್ಕರಿಸಲು ಕಾರಣಗಳನ್ನು ದಾಖಲು ಮಾಡಿದ ನಂತರ ತಿರಸ್ಕರಿಸಬಹುದು ಅಥವಾ ಆ ಕ್ಲೇಮುದಾರನ ವಶಕ್ಕೆ ಆ ಚೌಬೀನೆಯನ್ನು ನೀಡಬಹುದು.

(2) ಅಂಥ ಚೌಬೀನೆಗಾಗಿ ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳು ಕ್ಲೇಮು ಮಾಡಿದರೆ, ಅರಣ್ಯಾಧಿಕಾರಿಯು, ಅದಕ್ಕೆ ಹಕ್ಕುದಾರನೆಂದು ತಾನು ಭಾವಿಸುವಂಥ ವ್ಯಕ್ತಿಗಳ ಪೈಕಿ ಯಾರ ವಶಕ್ಕಾದರೂ ಅದನ್ನು ಕೊಡಬಹುದು ಅಥವಾ ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ ಕ್ಲೇಮುದಾರರಿಗೆ ಹೇಳಬಹುದು ಮತ್ತು ಅದರ ವಿಲೆಗಾಗಿ ಯಾವುದೇ ಅಂಥ ನ್ಯಾಯಾಲಯದಿಂದ ಆದೇಶವನ್ನು ಸ್ವೀಕರಿಸುವವರೆಗೆ ಚೌಬೀನೆಯನ್ನು ತನ್ನ ವಶದಲ್ಲಿ ಇಟ್ಟುಕೊಳ್ಳಬಹುದು.

(3) ಈ ಪ್ರಕರಣದ ಮೇರೆಗೆ ಯಾರ ಕ್ಲೇಮನ್ನು ತಿರಸ್ಕರಿಸಲಾಗಿದೆಯೋ ಆ ಯಾರೇ ವ್ಯಕ್ತಿಯು, ಅಂಥ ತಿರಸ್ಕರಣೆಯ ದಿನಾಂಕದಿಂದ ಮೂರು ತಿಂಗಳುಗಳ ಒಳಗಾಗಿ ಅವನು ಕ್ಲೇಮು ಮಾಡಿದ ಚೌಬೀನೆಯ ಸ್ವಾಧೀನವನ್ನು ಪಡೆಯಲು ದಾವೆಯನ್ನು ಹೂಡಬಹುದು. ಆದರೆ, ಯಾರೇ ವ್ಯಕ್ತಿಯು ಅಂಥ ತಿರಸ್ಕರಣೆಯ ಕಾರಣದಿಂದ ಅಥವಾ ಯಾವುದೇ ಚೌಬೀನೆಯನ್ನು ಹಿಡಿದಿಟ್ಟ ಅಥವಾ ಸ್ಥಳಾಂತರಿಸಿದ ಕಾರಣದಿಂದ ಅಥವಾ ಈ ಪ್ರಕರಣದ ಮೇರೆಗೆ ಯಾರೇ ಇತರ ವ್ಯಕ್ತಿಗೆ ಅದನ್ನು ವಶಾವಣೆ ಮಾಡಿದ ಕಾರಣದಿಂದ ಸರ್ಕಾರದಿಂದ ಅಥವಾ ಯಾರೇ ಅರಣ್ಯ ಅಧಿಕಾರಿಯಿಂದ ಯಾವುದೇ ನಷ್ಟ ಪರಿಹಾರ ಅಥವಾ ಖರ್ಚುಗಳನ್ನು ವಸೂಲು ಮಾಡತಕ್ಕದ್ದಲ್ಲ.

(4) ಯಾವುದೇ ಅಂಥ ಚೌಬೀನೆಯನ್ನು ವಶಾವಣೆ ಮಾಡುವವರೆಗೆ ಅಥವಾ ಈ ಪ್ರಕರಣದಲ್ಲಿ ಉಪಬಂಧಿಸಿರುವಂತೆ ದಾವೆಯನ್ನು ಹೂಡುವವರೆಗೆ ಅದು, ಸಿವಿಲ್, ಕ್ರಿಮಿನಲ್ ಅಥವಾ ರೆವಿನ್ಯೂ ನ್ಯಾಯಾಲಯಗಳ ಆದೇಶಿಕೆಗೆ ಒಳಪಡಿಸತಕ್ಕದ್ದಲ್ಲ.

**48. ಕ್ಲೇಮು ಮಾಡದೇ ಇರುವ ಚೌಬೀನೆಯ ವಿಲೆ.–** ಹಿಂದೆ ಹೇಳಿದಂಥ ಯಾವುದೇ ಹೇಳಿಕೆಯನ್ನು ಸಲ್ಲಿಸದಿದ್ದರೆ, ಅಥವಾ 46ನೇ ಪ್ರಕರಣದ ಮೇರೆಗೆ ಕೊಟ್ಟ ನೋಟೀಸಿನಲ್ಲಿ ನಿಗದಿಪಡಿಸಿದ ರೀತಿಯಲ್ಲಿ ಮತ್ತು ಅಂಥ ಅವಧಿಯ ಒಳಗಾಗಿ ಕ್ಲೇಮುದಾರನು ಅವನ ಕ್ಲೇಮನ್ನು ಸಲ್ಲಿಸಲು ತಪ್ಪಿದರೆ ಅಥವಾ ಅವನು ಹಾಗೆ ಸಲ್ಲಿಸಲಾಗಿದ್ದ ಕ್ಲೇಮು ತಿರಸ್ಕೃತವಾದ ಮೇಲೆ, 47ನೇ ಪ್ರಕರಣವು ನಿಗದಿಪಡಿಸಿದ ಇನ್ನೂ ಹೆಚ್ಚಿನ ಅವಧಿಯೊಳಗೆ ಅಂಥ ಚೌಬೀನೆಯ ಸ್ವಾಧೀನವನ್ನು ಪಡೆಯಲು ದಾವೆಯನ್ನು ಹೂಡಲು ತಪ್ಪಿದರೆ, ಅಂಥ ಚೌಬೀನೆಯ ಒಡೆತನವು ಸರ್ಕಾರದಲ್ಲಿ ಅಥವಾ ಅಂಥ ಚೌಬೀನೆಯನ್ನು 47ನೇ ಪ್ರಕರಣದ ಮೇರೆಗೆ ಬೇರೊಬ್ಬ ವ್ಯಕ್ತಿಗೆ ವಶಾವಣೆ ಮಾಡಿರುವಾಗ ಆ ವ್ಯಕ್ತಿಯಲ್ಲಿ ಅವನು ಸೃಜಿಸಿಲ್ಲದ ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ ನಿಹಿತವಾಗಿರತಕ್ಕದ್ದು.

**49. ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳು ಅಂಥ ಚೌಬೀನೆಯ ಹಾನಿಗಾಗಿ ಹೊಣೆಯಾಗದಿರುವುದು.–** ಸರ್ಕಾರವು 45ನೇ ಪ್ರಕರಣದ ಮೇರೆಗೆ ಸಂಗ್ರಹಿಸಿದ ಯಾವುದೇ ಚೌಬೀನೆಯ ಸಂಬಂಧದಲ್ಲಿ ಸಂಭವಿಸಬಹುದಾದಂಥ ಯಾವುದೇ ನಷ್ಟ ಅಥವಾ ಹಾನಿಗೆ ಸರ್ಕಾರವು ಜವಾಬ್ದಾರಿಯಾಗತಕ್ಕದ್ದಲ್ಲ ಮತ್ತು ಯಾರೇ ಅರಣ್ಯಾಧಿಕಾರಿಯು ಯಾವುದೇ ಅಂಥ ನಷ್ಟ ಅಥವಾ ಹಾನಿಯನ್ನು ನಿರ್ಲಕ್ಷ್ಯತೆಯಿಂದ, ದೋಷಪೂರ್ವಕವಾಗಿ ಅಥವಾ ಮೋಸದಿಂದ ಉಂಟು ಮಾಡಿದ್ದ ಹೊರತು, ಅಂಥ ಯಾವುದೇ ನಷ್ಟ ಅಥವಾ ಹಾನಿಗಾಗಿ ಜವಾಬ್ದಾರನಾಗತಕ್ಕದ್ದಲ್ಲ.

**50. ಚೌಬೀನೆಯನ್ನು ಕ್ಲೇಮುದಾರನ ವಶಕ್ಕೆ ಕೊಡುವುದಕ್ಕಿಂತ ಮುಂಚೆ ಕ್ಲೇಮುದಾರನು ಸಂದಾಯಗಳನ್ನು ಮಾಡುವುದು.–** ಹಿಂದೆ ಹೇಳಿದಂತೆ ಸಂಗ್ರಹಿಸಿದ ಅಥವಾ ವಶಾವಣೆ ಮಾಡಿದ ಯಾವುದೇ ಚೌಬೀನೆಯ ಸ್ವಾಧೀನವನ್ನು ಪಡೆಯಲು ಯಾರೇ ವ್ಯಕ್ತಿಯು, ಅವನು 51ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಅದರ ಬಗ್ಗೆ ಬಾಕಿಯಾಗಬಹುದಾದಂಥ ಮೊತ್ತವನ್ನು ಅರಣ್ಯಾಧಿಕಾರಿಗೆ ಅಥವಾ ಅದನ್ನು ಸ್ವೀಕರಿಸಲು ಹಕ್ಕುಳ್ಳವನಾದ ಇತರೆ ವ್ಯಕ್ತಿಗೆ ಸಂದಾಯ ಮಾಡುವವರೆಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**51. ನಿಯಮಗಳನ್ನು ರಚಿಸಲು ಮತ್ತು ದಂಡಗಳನ್ನು ನಿಯಮಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು ಈ ಕೆಳಕಂಡ ವಿಷಯಗಳನ್ನು ವಿನಿಯಮಿಸಲು ನಿಯಮಗಳನ್ನು ರಚಿಸಬಹುದು, ಎಂದರೆ,–

(ಎ) 45ನೇ ಪ್ರಕರಣದಲ್ಲಿ ನಮೂದು ಮಾಡಿದ ಎಲ್ಲಾ ಚೌಬೀನೆಯನ್ನು ಸಂರಕ್ಷಣೆ ಮಾಡುವುದು, ಸಂಗ್ರಹಿಸುವುದು ಮತ್ತು ವಿಲೇ ಮಾಡುವುದು;

(ಬಿ) ಚೌಬೀನೆಯನ್ನು ಸಂರಕ್ಷಿಸುವಲ್ಲಿ ಮತ್ತು ಸಂಗ್ರಹಿಸುವಲ್ಲಿ ಉಪಯೋಗಿಸುವ ದೋಣಿಗಳ ಉಪಯೋಗ ಮತ್ತು ಅವುಗಳ ನೋಂದಣಿ;

(ಸಿ) ಅಂಥ ಚೌಬೀನೆಯನ್ನು ಸಂರಕ್ಷಿಸುವುದು, ಸಂಗ್ರಹಿಸುವುದು, ಸಾಗಿಸುವುದು, ದಾಸ್ತಾನು ಮಾಡುವುದು ಅಥವಾ ವಿಲೆ ಮಾಡುವುದು – ಇವುಗಳಿಗಾಗಿ ಸಂದಾಯ ಮಾಡಬೇಕಾದ ಮೊಬಲಗುಗಳು; ಮತ್ತು

(ಡಿ) ಅಂಥ ಚೌಬೀನೆಗೆ ಗುರುತು ಮಾಡುವುದಕ್ಕಾಗಿ ಉಪಯೋಗಿಸುವ ಸುತ್ತಿಗೆಗಳು ಮತ್ತು ಉಪಕರಣಗಳ ಉಪಯೋಗ ಮತ್ತು ಅವುಗಳ ನೋಂದಣಿ.

(2) ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಉಲ್ಲಂಘನೆಗಾಗಿ ದಂಡಗಳೆಂದು ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆ ಅಥವಾ ಅವೆರಡನ್ನೂ ನಿಯಮಿಸಬಹುದು.

## ಅಧ್ಯಾಯ – IX

## ದಂಡಗಳು ಮತ್ತು ಪ್ರಕ್ರಿಯೆ

**52. ವಶಪಡಿಸಿಕೊಳ್ಳುವುದಕ್ಕೆ ಗುರಿಯಾಗುವ ಸ್ವತ್ತಿನ ಅಭಿಗ್ರಹಣ.–** (1) ಯಾವುದೇ ಅರಣ್ಯೋತ್ಪನ್ನಕ್ಕೆ ಸಂಬಂಧಿಸಿದಂತೆ ಅರಣ್ಯ ಅಪರಾಧವನ್ನು ಮಾಡಲಾಗಿದೆ ಎಂದು ನಂಬಲು ಕಾರಣವಿರುವಾಗ, ಯಾರೇ ಅರಣ್ಯಾಧಿಕಾರಿ ಅಥವಾ ಪೊಲೀಸ್ ಅಧಿಕಾರಿಯು, ಯಾವುದೇ ಉತ್ಪನ್ನವನ್ನು ಯಾವುದೇ ಅಂಥ ಅಪರಾಧವನ್ನು ಮಾಡುವಲ್ಲಿ ಉಪಯೋಗಿಸಿದ ಎಲ್ಲಾ ಉಪಕರಣಗಳು, ದೋಣಿಗಳು, ಗಾಡಿಗಳು ಅಥವಾ ಜಾನುವಾರುಗಳೊಂದಿಗೆ ಅಭಿಗ್ರಹಿಸಬಹುದು.

(2) ಈ ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಅಭಿಗ್ರಹಿಸುವ ಪ್ರತಿಯೊಬ್ಬ ಅಧಿಕಾರಿಯು, ಅಂಥ ಸ್ವತ್ತಿನ ಮೇಲೆ ಅದನ್ನು ಹಾಗೆ ಅಭಿಗ್ರಹಿಸಲಾಗಿದೆ ಎಂದು ಸೂಚಿಸುವ ಗುರುತನ್ನು ಹಾಕತಕ್ಕದ್ದು, ಮತ್ತು ಆದಷ್ಟು ಬೇಗ ಅಂಥ ಅಭಿಗ್ರಹಣದ ಬಗ್ಗೆ ಯಾವ ಅಪರಾಧಕ್ಕೆ ಸಂಬಂಧಿಸಿದಂತೆ, ಆ ಅಭಿಗ್ರಹಣವನ್ನು ಮಾಡಲಾಗಿದೆಯೋ

ಆ ಅಪರಾಧವನ್ನು ಅಧಿವಿಚಾರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನಿಗೆ ವರದಿಯನ್ನು ಮಾಡತಕ್ಕದ್ದು:

ಪರಂತು, ಯಾವ ಅರಣ್ಯೋತ್ಪನ್ನಕ್ಕೆ ಸಂಬಂಧಿಸಿದಂತೆ ಅಂಥ ಅಪರಾಧವನ್ನು ಮಾಡಲಾಗಿದೆ ಎಂದು ನಂಬಲಾಗಿದೆಯೋ ಆ ಅರಣ್ಯೋತ್ಪನ್ನವು ಸರ್ಕಾರದ ಸ್ವತ್ತಾಗಿರುವಾಗ ಮತ್ತು ಆ ಅಪರಾಧಿಯು ಯಾರೆಂದು ಗೊತ್ತಿಲ್ಲದಿರುವಾಗ ಆ ಅಧಿಕಾರಿಯು ಆದಷ್ಟು ಬೇಗ ಆ ಸಂದರ್ಭಗಳ ಬಗ್ಗೆ ಅವನ ಸರ್ಕಾರಿ ಮೇಲಧಿಕಾರಿಗೆ ವರದಿಯನ್ನು ಮಾಡಿದ್ದರೆ ಅದು ಸಾಕಷ್ಟಾಗಿರತಕ್ಕದ್ದು.

**53. 52ನೇ ಪ್ರಕರಣದ ಮೇರೆಗೆ ಅಭಿಗ್ರಹಿಸಿದ ಸ್ವತ್ತನ್ನು ಬಿಡುಗಡೆ ಮಾಡಲು ಅಧಿಕಾರ.**- ರೇಂಜರ್ ದರ್ಜೆಗಿಂತ ಕಡಿಮೆ ದರ್ಜೆಯವನಲ್ಲದ ಯಾರೇ ಅರಣ್ಯಾಧಿಕಾರಿಯು ಅಥವಾ ಅವನ ಅಧೀನ ಅಧಿಕಾರಿಯು 52ನೇ ಪ್ರಕರಣದ ಮೇರೆಗೆ ಯಾವುದೇ ಉಪಕರಣಗಳು, ದೋಣಿಗಳು, ಗಾಡಿಗಳು ಅಥವಾ ಜಾನುವಾರುಗಳನ್ನು ಅಭಿಗ್ರಹಿಸಿರುವಾಗ, ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಆ ಅಭಿಗ್ರಹಣವನ್ನು ಮಾಡಲಾಗಿದೆಯೋ ಆ ಅಪರಾಧವನ್ನು ಅಧಿವಿಚಾರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಸ್ವತ್ತನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸಿದರೆ ಮತ್ತು ಅಗತ್ಯಪಡಿಸಿದಾಗ ಹಾಗೆ ಮಾಡುವುದಾಗಿ ಅದರ ಒಡೆಯನು ಬಂಧಪತ್ರವನ್ನು ಬರೆದುಕೊಟ್ಟ ಮೇಲೆ ಅವುಗಳನ್ನು ಬಿಡುಗಡೆ ಮಾಡಬಹುದು.

**54. ತರುವಾಯದ ಪ್ರಕ್ರಿಯೆ.**- ಯಾವುದೇ ಅಂಥ ವರದಿಯನ್ನು ಸ್ವೀಕರಿಸಿದ ಮೇಲೆ, ಆ ಮ್ಯಾಜಿಸ್ಟ್ರೇಟನು, ಆದಷ್ಟು ಬೇಗ ಕಾನೂನಿಗನುಸಾರವಾಗಿ ಆ ಅಪರಾಧಿಯ ದಸ್ತಗಿರಿ ಮತ್ತು ಅಧಿವಿಚಾರಣೆ ಮತ್ತು ಆ ಸ್ವತ್ತಿನ ವಿಲೆಗಾಗಿ ಅವಶ್ಯಕವಾಗಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**55. ಯಾವ ಸಂದರ್ಭದಲ್ಲಿ ಅರಣ್ಯೋತ್ಪನ್ನ, ಉಪಕರಣ, ಮುಂತಾದವುಗಳು ಮುಟ್ಟುಗೋಲಿಗೆ ಗುರಿಯಾಗುವುದು.**- (1) ಸರ್ಕಾರದ ಸ್ವತ್ತಾಗಿಲ್ಲದಂಥ ಮತ್ತು ಯಾವುದಕ್ಕೆ ಸಂಬಂಧಿಸಿದಂತೆ ಅರಣ್ಯ ಅಪರಾಧವನ್ನು ಮಾಡಲಾಗಿದೆಯೋ ಆ ಎಲ್ಲ ಚೌಬೀನೆ ಅಥವಾ ಅರಣ್ಯೋತ್ಪನ್ನವನ್ನು ಮತ್ತು ಯಾವುದೇ ಅರಣ್ಯ ಅಪರಾಧವನ್ನು ಮಾಡುವಲ್ಲಿ ಉಪಯೋಗಿಸಲಾದ ಎಲ್ಲ ಉಪಕರಣಗಳು, ದೋಣಿಗಳು, ಗಾಡಿಗಳು ಮತ್ತು ಜಾನುವಾರುಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು.

(2) ಅಂಥ ಮುಟ್ಟುಗೋಲು ಅಂಥ ಅಪರಾಧಕ್ಕಾಗಿ ನಿಯಮಿಸಲಾದ ಯಾವುದೇ ಇತರ ದಂಡನೆಗಳ ಜೊತೆಗೆ ಹೆಚ್ಚಿಗೆಯಾಗಿರಬಹುದು.

**56. ಅರಣ್ಯೋತ್ಪನ್ನಕ್ಕೆ ಸಂಬಂಧಿಸಿದಂತೆ ಮಾಡಲಾದ ಅರಣ್ಯ ಅಪರಾಧದ ಅಧಿವಿಚಾರಣೆಯು ಮುಕ್ತಾಯವಾದ ಮೇಲೆ ಅದರ ವಿಲೆ.**- ಯಾವುದೇ ಅರಣ್ಯ ಅಪರಾಧದ ಬಗ್ಗೆ ಅಧಿವಿಚಾರಣೆಯು ಮುಕ್ತಾಯವಾದಾಗ, ಯಾವ ಅರಣ್ಯೋತ್ಪನ್ನಕ್ಕೆ ಸಂಬಂಧಿಸಿದಂತೆ ಅಂಥ ಅಪರಾಧವನ್ನು ಮಾಡಲಾಗಿತ್ತೋ ಅದು ಸರ್ಕಾರದ ಸ್ವತ್ತಾಗಿದ್ದರೆ ಅಥವಾ ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದರೆ, ಅರಣ್ಯಾಧಿಕಾರಿಯು ಅದನ್ನು ತನ್ನ ವಶಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಯಾವುದೇ ಇತರ ಪ್ರಕರಣದಲ್ಲಿ ಅದನ್ನು ನ್ಯಾಯಾಲಯವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡಬಹುದು.

**57. ಅಪರಾಧಿ ಯಾರೆಂಬುದು ಗೊತ್ತಿಲ್ಲದೇ ಇರುವಾಗ ಅಥವಾ ಅವನು ಸಿಕ್ಕದೇ ಇರುವಾಗ ಪ್ರಕ್ರಿಯೆ.**- ಅಪರಾಧಿ ಯಾರೆಂದು ಗೊತ್ತಿಲ್ಲದಿರುವಾಗ ಅಥವಾ ಅವನು ಸಿಕ್ಕದೇ ಇರುವಾಗ ಮ್ಯಾಜಿಸ್ಟ್ರೇಟನಿಗೆ ಆ ಅಪರಾಧವನ್ನು ಮಾಡಲಾಗಿದೆ ಎಂದು ಕಂಡುಬಂದರೆ, ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಆ ಅಪರಾಧವನ್ನು ಮಾಡಲಾಗಿದೆಯೋ ಆ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅರಣ್ಯಾಧಿಕಾರಿಯು ಅದನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಅಥವಾ ಮ್ಯಾಜಿಸ್ಟ್ರೇಟನು ಅದಕ್ಕೆ ಹಕ್ಕುಳ್ಳವನಾಗಿರುವುದಾಗಿ ಭಾವಿಸುವ ವ್ಯಕ್ತಿಗೆ ಒಪ್ಪಿಸಬೇಕೆಂದು ಆದೇಶಿಸಬಹುದು:

ಪರಂತು, ಅಂಥ ಸ್ವತ್ತನ್ನು ಅಭಿಗ್ರಹಿಸಿದ ದಿನಾಂಕದಿಂದ ಒಂದು ತಿಂಗಳು ಮುಕ್ತಾಯವಾಗುವವರೆಗೆ ಅಥವಾ ಅದರ ಬಗ್ಗೆ ಯಾವುದೇ ಹಕ್ಕನ್ನು ಕ್ಲೇಮು ಮಾಡುವ ವ್ಯಕ್ತಿಯು, ಯಾರಾದರೂ ಇದ್ದರೆ ಅವನ ಅಹವಾಲನ್ನು ಕೇಳದೆ ಮತ್ತು ತನ್ನ ಕ್ಲೇಮಿಗೆ ಸಮರ್ಥನೆಯಾಗಿ ಅವನು ಹಾಜರುಪಡಿಸಬಹುದಾದಂಥ ಸಾಕ್ಷ್ಯ ಯಾವುದಾದರೂ ಇದ್ದರೆ ಅದರ ಬಗ್ಗೆ ಸುನಾವಣೆ ಮಾಡದೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**58. 52ನೇ ಪ್ರಕರಣದ ಮೇರೆಗೆ ಅಭಿಗ್ರಹಿಸಲಾದ, ಕೆಟ್ಟುಹೋಗುವ ಸ್ವತ್ತಿನ ಬಗ್ಗೆ ಪ್ರಕ್ರಿಯೆ.**- ಮ್ಯಾಜಿಸ್ಟ್ರೇಟನು, ಇದರಲ್ಲಿ ಇದಕ್ಕೆ ಮುಂಚೆ ಏನೇ ಇದ್ದರೂ, 52ನೇ ಪ್ರಕರಣದ ಮೇರೆಗೆ ಅಭಿಗ್ರಹಿಸಲಾದ ಮತ್ತು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ಕೆಟ್ಟುಹೋಗುವಂಥ ಯಾವುದೇ ಸ್ವತ್ತಿನ ಮಾರಾಟವನ್ನು ನಿರ್ದೇಶಿಸಬಹುದು ಮತ್ತು ಆ ಸ್ವತ್ತನ್ನು ಮಾರಾಟ ಮಾಡಿರದಿದ್ದರೆ ಆ ಹುಟ್ಟುವಳಿ ಸಂಬಂಧದಲ್ಲಿ ಯಾವ ಕ್ರಮ ಕೈಗೊಳ್ಳಬಹುದಾಗಿತ್ತೋ ಅದೇ ಕ್ರಮವನ್ನು ಕೈಗೊಳ್ಳಬಹುದು.

**59. 55ನೇ ಪ್ರಕರಣ, 56ನೇ ಪ್ರಕರಣ ಅಥವಾ 57ನೇ ಪ್ರಕರಣದ ಮೇರೆಗಿನ ಆದೇಶಗಳ ಮೇಲೆ ಅಪೀಲು.–** 52ನೇ ಪ್ರಕರಣದ ಮೇರೆಗೆ ಅಭಿಗ್ರಹಣ ಮಾಡಿದ ಅಧಿಕಾರಿಯು ಅಥವಾ ಅವನ ಯಾರೇ ವರಿಷ್ಠ ಅಧಿಕಾರಿಯು ಅಥವಾ ಹಾಗೆ ಅಭಿಗ್ರಹಿಸಲಾದ ಸ್ವತ್ತಿನಲ್ಲಿ ಹಿತಾಸಕ್ತಿಯನ್ನು ಹೊಂದಿರುವುದಾಗಿ ಕ್ಲೇಮು ಮಾಡುವ ಯಾರೇ ವ್ಯಕ್ತಿಯು, 55ನೇ ಪ್ರಕರಣ, 56ನೇ ಪ್ರಕರಣ ಅಥವಾ 57ನೇ ಪ್ರಕರಣದ ಮೇರೆಗೆ ಮಾಡಿರುವ ಯಾವುದೇ ಆದೇಶದ ದಿನಾಂಕದಿಂದ ಒಂದು ತಿಂಗಳ ಒಳಗೆ ಅಂಥ ಮ್ಯಾಜಿಸ್ಟ್ರೇಟನು ಮಾಡಿದ ಆದೇಶಗಳ ಮೇಲೆ ಸಾಮಾನ್ಯವಾಗಿ ಯಾವ ನ್ಯಾಯಾಲಯಕ್ಕೆ ಅಪೀಲು ಮಾಡಿಕೊಳ್ಳಬಹುದೋ ಆ ನ್ಯಾಯಾಲಯಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿನ ಮೇಲೆ ಮಾಡಲಾಗುವ ಆದೇಶವು ಅಂತಿಮವಾಗಿರತಕ್ಕದ್ದು.

**60. ಸ್ವತ್ತು ಸರ್ಕಾರದಲ್ಲಿ ಯಾವಾಗ ನಿಹಿತಗೊಳ್ಳುವುದು.–** ಯಾವುದೇ ಸ್ವತ್ತನ್ನು ಸಂದರ್ಭಾನುಸಾರ 55ನೇ ಪ್ರಕರಣ ಅಥವಾ 57ನೇ ಪ್ರಕರಣದ ಮೇರೆಗೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶವನ್ನು ಮಾಡಿರುವಾಗ ಮತ್ತು ಅಂಥ ಆದೇಶದ ಮೇಲೆ ಅಪೀಲಿಗಾಗಿ 59ನೇ ಪ್ರಕರಣದ ಮೂಲಕ ಪರಿಮಿತಿಗೊಳಿಸಲಾದ ಅವಧಿಯು ಮುಕ್ತಾಯಗೊಂಡಿರುವಾಗ ಮತ್ತು ಯಾವುದೇ ಅಂಥ ಅಪೀಲನ್ನು ಸಲ್ಲಿಸದೆ ಇರುವಾಗ ಅಥವಾ ಅಂಥ ಅಪೀಲನ್ನು ಸಲ್ಲಿಸಲಾಗಿದ್ದು, ಅಪೀಲು ನ್ಯಾಯಾಲಯವು ಅಂಥ ಆದೇಶವನ್ನು ಅಂಥ ಸ್ವತ್ತಿನ ಪೂರ್ಣ ಅಥವಾ ಒಂದು ಭಾಗಕ್ಕೆ ಸಂಬಂಧಿಸಿದಂತೆ ಸ್ಥಿರೀಕರಿಸಿರುವಾಗ ಸಂದರ್ಭಾನುಸಾರ ಅಂಥ ಸ್ವತ್ತು ಅಥವಾ ಅಂಥ ಭಾಗವು ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದ್ದು.

**61. ಅಭಿಗ್ರಹಿಸಲಾದ ಸ್ವತ್ತನ್ನು ಬಿಡುಗಡೆ ಮಾಡುವ ಅಧಿಕಾರದ ರಕ್ಷಣೆ.–** ಇದರಲ್ಲಿ ಈ ಹಿಂದೆ ಏನೇ ಇದ್ದರೂ, ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕಾರ ಪಡೆದ ಯಾರೇ ಅಧಿಕಾರಿಯು, 52ನೇ ಪ್ರಕರಣದ ಮೇರೆಗೆ ಅಭಿಗ್ರಹಿಸಿದ ಯಾವುದೇ ಸ್ವತ್ತನ್ನು, ಯಾವುದೇ ಕಾಲದಲ್ಲಿ ತ್ವರಿತವಾಗಿ ಬಿಡುಗಡೆ ಮಾಡಲು ನಿರ್ದೇಶಿಸದಂತೆ ಅವನನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ.

**62. ಅಕ್ರಮ ಅಭಿಗ್ರಹಣಕ್ಕಾಗಿ ದಂಡನೆ:–** ಈ ಅಧಿನಿಯಮದ ಮೇರೆಗೆ ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳಬೇಕಾದ ಸ್ವತ್ತನ್ನು ಅಭಿಗ್ರಹಿಸುವ ನೆಪದಲ್ಲಿ ಯಾವುದೇ ಸ್ವತ್ತನ್ನು ಕಿರುಕುಳ ಉಂಟು ಮಾಡುವ ರೀತಿಯಲ್ಲಿ ಅಥವಾ ಅನಾವಶ್ಯಕವಾಗಿ ಅಭಿಗ್ರಹಿಸುವ ಯಾರೇ ಅರಣ್ಯಾಧಿಕಾರಿಯು ಅಥವಾ ಪೊಲೀಸು ಅಧಿಕಾರಿಯು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**63. ಮರಗಳು ಮತ್ತು ಚೌಬೀನೆಯ ಮೇಲೆ ಖೋಟಾ ಗುರುತುಗಳನ್ನು ಮಾಡುವುದಕ್ಕಾಗಿ ಅಥವಾ ಗುರುತುಗಳನ್ನು ವಿರೂಪಗೊಳಿಸುವುದಕ್ಕಾಗಿ ಮತ್ತು ಗಡಿ ಗುರುತುಗಳನ್ನು ಬದಲಾಯಿಸುವುದಕ್ಕಾಗಿ ದಂಡ.–** ಯಾರೇ ಆಗಲಿ, ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ಹಾನಿ ಅಥವಾ ಕ್ಷತಿಯನ್ನುಂಟು ಮಾಡುವ ಅಥವಾ ಭಾರತ ದಂಡ ಸಂಹಿತೆ, 1860ರ 45 ರಲ್ಲಿ ಪರಿಭಾಷಿಸಿರುವಂತೆ ಅಕ್ರಮ ಲಾಭಗಳಿಸುವ ಉದ್ದೇಶದಿಂದ,–

(ಎ) ಯಾವುದೇ ಚೌಬೀನೆ ಅಥವಾ ಬೆಳೆದಿರುವ ಮರದ ಮೇಲೆ ಅಂಥ ಚೌಬೀನೆ ಅಥವಾ ಮರವು ಸರ್ಕಾರದ ಅಥವಾ ಯಾರೇ ವ್ಯಕ್ತಿಯ ಸ್ವತ್ತಾಗಿದೆ ಎಂದು ಅಥವಾ ಅದನ್ನು ನಿರ್ದಿಷ್ಟ ವ್ಯಕ್ತಿಯು ಕಾನೂನುಸಮ್ಮತವಾಗಿ ಕತ್ತರಿಸಬಹುದು ಅಥವಾ ಸ್ಥಳಾಂತರಿಸಬಹುದೆಂದು ಸೂಚಿಸುವುದಕ್ಕಾಗಿ ಅರಣ್ಯಾಧಿಕಾರಿಗಳು ಉಪಯೋಗಿಸುವಂಥ ಗುರುತನ್ನು ತಿಳಿದೂ ತಿಳಿದೂ ಅಂಥದ್ದೇ ಖೋಟಾ ಗುರುತು ಮಾಡಿದರೆ; ಅಥವಾ

(ಬಿ) ಒಬ್ಬ ಅರಣ್ಯಾಧಿಕಾರಿಯು ಅಥವಾ ಅವನ ಅಧಿಕಾರದ ಮೇರೆಗೆ ಬೇರೆ ಯಾರಾದರೂ ಮರದ ಮೇಲೆ ಅಥವಾ ಚೌಬೀನೆಯ ಮೇಲೆ ಹಾಕಿದ ಯಾವುದೇ ಅಂಥ ಗುರುತನ್ನು ಬದಲಾಯಿಸಿದರೆ, ವಿರೂಪಗೊಳಿಸಿದರೆ ಅಥವಾ ಅಳಿಸಿ ಹಾಕಿದರೆ; ಅಥವಾ

(ಸಿ) ಈ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಲಾಗುವಂಥ ಯಾವುದೇ ಅರಣ್ಯ ಅಥವಾ ಬಂಜರು ಭೂಮಿಯ ಯಾವುದೇ ಗಡಿ ಗುರುತನ್ನು ಬದಲಾಯಿಸಿದರೆ, ಸಾಗಿಸಿದರೆ, ನಾಶಪಡಿಸಿದರೆ ಅಥವಾ ವಿರೂಪಗೊಳಿಸಿದರೆ

– ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**64. ವಾರಂಟಿಲ್ಲದೆ ದಸ್ತಗಿರಿ ಮಾಡಲು ಅಧಿಕಾರ.–** (1) ಯಾರೇ ಅರಣ್ಯಾಧಿಕಾರಿಯು ಅಥವಾ ಪೊಲೀಸ್ ಅಧಿಕಾರಿಯು ಮ್ಯಾಜಿಸ್ಟ್ರೇಟನ ಆದೇಶಗಳಿಲ್ಲದೆ ಮತ್ತು ವಾರಂಟಿಲ್ಲದೆ ಒಂದು ತಿಂಗಳು ಅಥವಾ ಅದಕ್ಕಿಂತ ಹೆಚ್ಚು ಅವಧಿಯ ಕಾರಾವಾಸದಿಂದ ದಂಡನೀಯವಾದ ಯಾವುದೇ ಅರಣ್ಯ ಅಪರಾಧದಲ್ಲಿ ಸಂಬಂಧವುಳ್ಳವನಾಗಿದ್ದಾನೆ ಎಂಬ ಬಗ್ಗೆ ಯುಕ್ತ ಶಂಕೆ ಇರುವಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ದಸ್ತಗಿರಿ ಮಾಡುವ ಪ್ರತಿಯೊಬ್ಬ ಅಧಿಕಾರಿಯು, ಯಾವುದೇ ಅನಾವಶ್ಯಕ ವಿಳಂಬವಿಲ್ಲದೆ ಮತ್ತು ಬಂಧಪತ್ರದ ಮೇಲೆ ಬಿಡುಗಡೆ ಮಾಡುವ ಬಗೆಗಿನ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಆ ಪ್ರಕರಣದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಅತಿ ಹತ್ತಿರದ ಪೊಲೀಸು ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಬಳಿಗೆ ದಸ್ತಗಿರಿಯಾಗಿರುವ ಆ ವ್ಯಕ್ತಿಯನ್ನು ಒಯ್ಯತಕ್ಕದ್ದು ಅಥವಾ ಕಳುಹಿಸತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ, IVನೇ ಅಧ್ಯಾಯದ ಮೇರೆಗೆ ಅಪರಾಧವಾಗಿರುವಂಥ ಯಾವುದೇ ಕೃತ್ಯವನ್ನು 30ನೇ ಪ್ರಕರಣದ (ಸಿ) ಖಂಡದ ಮೇರೆಗೆ ನಿಷೇಧಿಸಲಾಗಿದ್ದ ಹೊರತು ಅಂಥ ಕೃತ್ಯಕ್ಕಾಗಿ ದಸ್ತಗಿರಿ ಮಾಡಲು ಅಧಿಕಾರ ನೀಡುತ್ತದೆಂದು ಭಾವಿಸತಕ್ಕದ್ದಲ್ಲ.

**65. ದಸ್ತಗಿರಿಯಾದ ವ್ಯಕ್ತಿಯನ್ನು ಬಂಧಪತ್ರದ ಮೇಲೆ ಬಿಡುಗಡೆ ಮಾಡಲು ಅಧಿಕಾರ.**- ರೇಂಜರ್ ದರ್ಜೆಗಿಂತ ಕಡಿಮೆ ದರ್ಜೆಯವನಲ್ಲದ ಯಾರೇ ಅರಣ್ಯಾಧಿಕಾರಿಯು ಅಥವಾ ಅವನ ಅಧೀನ ಅಧಿಕಾರಿಯು 64ನೇ ಪ್ರಕರಣದ ಉಪಬಂಧಗಳ ಮೇರೆಗೆ ಯಾವ ವ್ಯಕ್ತಿಯನ್ನು ದಸ್ತಗಿರಿ ಮಾಡಿರುವನೋ ಆ ವ್ಯಕ್ತಿಯು, ಆ ಪ್ರಕರಣದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಅತಿ ಹತ್ತಿರದ ಪೊಲೀಸು ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಮುಂದೆ ಹಾಜರಾಗಬೇಕೆಂದು ಅಗತ್ಯಪಡಿಸಿದರೆ ಮತ್ತು ಅಗತ್ಯಪಡಿಸಿದಾಗ ಹಾಗೆ ತಾನು ಹಾಜರಾಗುವೆನೆಂದು ಬಂಧಪತ್ರವನ್ನು ಅವನು ಬರೆದುಕೊಟ್ಟ ಮೇಲೆ ಅವನನ್ನು ಬಿಡುಗಡೆ ಮಾಡಬಹುದು.

**66. ಅಪರಾಧ ಮಾಡುವುದನ್ನು ಪ್ರತಿಬಂಧಿಸಲು ಅಧಿಕಾರ.**- ಪ್ರತಿಯೊಬ್ಬ ಅರಣ್ಯಾಧಿಕಾರಿಯು ಮತ್ತು ಪೊಲೀಸು ಅಧಿಕಾರಿಯು ಯಾವುದೇ ಅರಣ್ಯ ಅಪರಾಧ ಮಾಡುವುದನ್ನು ಪ್ರತಿಬಂಧಿಸತಕ್ಕದ್ದು ಮತ್ತು ಅದನ್ನು ಪ್ರತಿಬಂಧಿಸುವ ಬಗ್ಗೆ ಹಸ್ತಕ್ಷೇಪ ಮಾಡಬಹುದು.

**67. ಅಪರಾಧಗಳನ್ನು ಕ್ಷಿಪ್ರವಾಗಿ ಅಧಿವಿಚಾರಿಸಲು ಅಧಿಕಾರ.**- ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ವಿಶೇಷವಾಗಿ ಅಧಿಕಾರ ಕೊಟ್ಟಿರುವ ಯಾರೇ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟನು, ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ ಮೇರೆಗೆ ಆರು ತಿಂಗಳುಗಳಿಗೆ ಮೀರದ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾದ ಯಾವುದೇ ಅರಣ್ಯ ಅಪರಾಧವನ್ನು ಕ್ಷಿಪ್ರವಾಗಿ ಅಧಿವಿಚಾರಿಸಬಹುದು.

**68. ಅಪರಾಧಗಳನ್ನು ರಾಜಿ ಮಾಡಿಕೊಳ್ಳಲು ಅಧಿಕಾರ.**- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅರಣ್ಯಾಧಿಕಾರಿಗೆ,-

(ಎ) 62ನೇ ಪ್ರಕರಣ ಅಥವಾ 63ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಪರಾಧವನ್ನು ಹೊರತುಪಡಿಸಿ ಯಾವುದೇ ಇತರ ಅರಣ್ಯ ಅಪರಾಧವನ್ನು ಮಾಡಿದ್ದಾನೆ ಎಂದು ಯಾರ ವಿರುದ್ಧ ಯುಕ್ತ ಶಂಕೆ ಇರುವುದೋ ಆ ಯಾರೇ ವ್ಯಕ್ತಿಯು ಮಾಡಿರುವುದಾಗಿ ಶಂಕಿಸಲಾಗಿರುವಂಥ ಅಪರಾಧಕ್ಕಾಗಿ ಅವನಿಂದ ನಷ್ಟ ಪರಿಹಾರದ ರೂಪದಲ್ಲಿ ಒಂದು ಮೊತ್ತವನ್ನು ಅಂಗೀಕರಿಸಲು; ಮತ್ತು

(ಬಿ) ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳತಕ್ಕ ಸ್ವತ್ತು ಎಂದು ಯಾವುದೇ ಸ್ವತ್ತನ್ನು ಅಭಿಗ್ರಹಿಸಿರುವಾಗ ಅಂಥ ಅಧಿಕಾರಿಯು ಅದರ ಬಗ್ಗೆ ಅಂದಾಜು ಮಾಡಿರುವಂಥ ಮೌಲ್ಯವನ್ನು ಸಂದಾಯ ಮಾಡಿದ ಮೇಲೆ ಅದನ್ನು ಬಿಡುಗಡೆ ಮಾಡಲು

- ಅಧಿಕಾರ ಕೊಡಬಹುದು.

(2) ಸಂದರ್ಭಾನುಸಾರ ಅಂಥ ಹಣದ ಮೊತ್ತ ಅಥವಾ ಅಂಥ ಮೌಲ್ಯ ಅಥವಾ ಅವೆರಡನ್ನೂ ಅಂಥ ಅಧಿಕಾರಿಗೆ ಸಂದಾಯ ಮಾಡಿದ ಮೇಲೆ, ಶಂಕಿಸಲಾದ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ ಅವನನ್ನು ವಿಮೋಚನೆಗೊಳಿಸತಕ್ಕದ್ದು, ಅಭಿಗ್ರಹಿಸಿದ ಸ್ವತ್ತು ಯಾವುದಾದರೂ ಇದ್ದರೆ ಅದನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅಂಥ ವ್ಯಕ್ತಿ ಅಥವಾ ಸ್ವತ್ತಿನ ಬಗ್ಗೆ ಯಾವುದೇ ಹೆಚ್ಚಿನ ವ್ಯವಹರಣೆಯನ್ನು ಕೈಗೊಳ್ಳತಕ್ಕದ್ದಲ್ಲ.

(3) ಒಬ್ಬ ಅರಣ್ಯಾಧಿಕಾರಿಯು ರೇಂಜರ್‌ನ ದರ್ಜೆಗಿಂತ ಕೆಳದರ್ಜೆಯವನಲ್ಲದ ಅರಣ್ಯಾಧಿಕಾರಿಯಾಗಿದ್ದ ಹೊರತು ಮತ್ತು ಅವನು ಕನಿಷ್ಠ ಪಕ್ಷ ಒಂದು ನೂರು ರೂಪಾಯಿಗಳ ಮಾಸಿಕ ಸಂಬಳವನ್ನು ಪಡೆಯುತ್ತಿದ್ದ ಹೊರತು ಈ ಪ್ರಕರಣದ ಮೇರೆಗೆ ಅವನಿಗೆ ಅಧಿಕಾರ ಕೊಡತಕ್ಕದ್ದಲ್ಲ ಮತ್ತು (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ನಷ್ಟ ಪರಿಹಾರವಾಗಿ ಅಂಗೀಕರಿಸಿರುವ ಹಣದ ಮೊತ್ತವು ಯಾವುದೇ ಸಂದರ್ಭದಲ್ಲಿ ಐವತ್ತು ರೂಪಾಯಿಗಳನ್ನು ಮೀರತಕ್ಕದ್ದಲ್ಲ.

**69. ಅರಣ್ಯೋತ್ಪನ್ನವು ಸರ್ಕಾರಕ್ಕೆ ಸೇರಿರುತ್ತದೆ ಎಂಬ ಬಗ್ಗೆ ಪೂರ್ವ ಭಾವನೆ.–** ಈ ಅಧಿನಿಯಮದ ಮೇರೆಗೆ ಕೈಗೊಂಡ ಯಾವುದೇ ವ್ಯವಹರಣೆಗಳಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದ ಪರಿಣಾಮವಾಗಿ, ಯಾವುದೇ ಅರಣ್ಯೋತ್ಪನ್ನವು ಸರ್ಕಾರದ ಸ್ವತ್ತೇ – ಅಲ್ಲವೇ, ಎಂಬ ಬಗ್ಗೆ ಪ್ರಶ್ನೆ ಉದ್ಭವಿಸಿದರೆ, ತದ್ವಿರುದ್ಧವಾದುದನ್ನು ರುಜುವಾತುಪಡಿಸುವವರೆಗೆ ಅಂಥ ಅರಣ್ಯೋತ್ಪನ್ನವು ಸರ್ಕಾರದ ಸ್ವತ್ತಾಗಿರುವುದಾಗಿ ಪೂರ್ವಭಾವನೆ ಮಾಡತಕ್ಕದ್ದು.

## ಅಧ್ಯಾಯ –X

## ಜಾನುವಾರು ಅತಿಕ್ರಮಣ

**70. ಜಾನುವಾರು ಅತಿಕ್ರಮಣ ಅಧಿನಿಯಮ, 1871ರ ಅನ್ವಯ.–** ಮೀಸಲಿಟ್ಟ ಅರಣ್ಯದಲ್ಲಿ ಅಥವಾ ಮೇಯಿಸದಂತೆ ಕಾನೂನು ಸಮ್ಮತವಾಗಿ ಮುಚ್ಚಲಾಗಿರುವಂಥ ಸಂರಕ್ಷಿತ ಅರಣ್ಯದ ಯಾವುದೇ ಭಾಗದಲ್ಲಿ ಜಾನುವಾರು ಅತಿಕ್ರಮಣ ಮಾಡುವುದನ್ನು, ಜಾನುವಾರು ಅತಿಕ್ರಮಣ ಅಧಿನಿಯಮ, 1871ರ 11ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೆಡುತೋಪಿಗೆ ಜಾನುವಾರು ಹಾನಿಯನ್ನುಂಟು ಮಾಡುವುದೆಂದು ಭಾವಿಸತಕ್ಕದ್ದು ಮತ್ತು ಆ ಮೇರೆಗೆ ಯಾರೇ ಅರಣ್ಯಾಧಿಕಾರಿ ಅಥವಾ ಪೊಲೀಸು ಅಧಿಕಾರಿಯು ಆ ಜಾನುವಾರುಗಳನ್ನು ಅಭಿಗ್ರಹಿಸಬಹುದು ಮತ್ತು ಕೊಂಡವಾಡಕ್ಕೆ ಹಾಕಬಹುದು.

**71. ಆ ಅಧಿನಿಯಮದ ಮೇರೆಗೆ ನಿಗದಿಪಡಿಸಿದ ಜುಲ್ಮಾನೆಗಳನ್ನು ಬದಲಾಯಿಸಲು ಅಧಿಕಾರ.–** ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಜಾನುವಾರು ಅತಿಕ್ರಮಣ ಅಧಿನಿಯಮ, 1871 (1871ರ 1)ರ 12ನೇ ಪ್ರಕರಣದ ಮೇರೆಗೆ ನಿಗದಿಪಡಿಸಿರುವ ಜುಲ್ಮಾನೆಗಳಿಗೆ ಬದಲಾಗಿ, ಈ ಅಧಿನಿಯಮದ 70ನೇ ಪ್ರಕರಣದ ಮೇರೆಗೆ ಕೊಂಡವಾಡಕ್ಕೆ ಹಾಕಲಾದ ಪ್ರತಿಯೊಂದು ಜಾನುವಾರಿಗಾಗಿ ಅದು ಸೂಕ್ತವೆಂದು ಭಾವಿಸುವ, ಆದರೆ ಈ ಮುಂದೆ ಸೂಚಿಸಿರುವಷ್ಟು ಮೊಬಲಗನ್ನು ಮೀರದಂತೆ ಜುಲ್ಮಾನೆಗಳನ್ನು ವಿಧಿಸಬಹುದೆಂದು ನಿರ್ದೇಶಿಸತಕ್ಕದ್ದು, ಎಂದರೆ,–

| | | |
|---|---|---|
| ಪ್ರತಿಯೊಂದು ಆನೆಗೆ | – | ಹತ್ತು ರೂಪಾಯಿ |
| ಪ್ರತಿಯೊಂದು ಎಮ್ಮೆ ಅಥವಾ ಒಂಟೆಗೆ | – | ಎರಡು ರೂಪಾಯಿ |
| ಪ್ರತಿಯೊಂದು ಕುದುರೆ, ಹೆಣ್ಣು ಕುದುರೆ, ಹಿಡ ಮಾಡಿದ ಕುದುರೆ, ತಟ್ಟು, ಗಂಡು ಕುದುರೆ ಮರಿ, ಹೆಣ್ಣು ಕುದುರೆ ಮರಿ, ಹೇಸರಗತ್ತೆ, ಗೂಳಿ, ಎತ್ತು, ಹಸು, ಅಥವಾ ತಡಸಿಗೆ | – | ಒಂದು ರೂಪಾಯಿ |
| ಪ್ರತಿಯೊಂದು ಕರು, ಕತ್ತೆ, ಹಂದಿ, ಟಗರು, ಹೆಣ್ಣು ಕುರಿ, ಕುರಿ, ಕುರಿ ಮರಿ, ಮೇಕೆ ಅಥವಾ ಮೇಕೆ ಮರಿಗೆ | – | ಎಂಟು ಆಣೆಗಳು |

## ಅಧ್ಯಾಯ – XII

## ಅರಣ್ಯಾಧಿಕಾರಿಗಳ ಬಗ್ಗೆ

**72. ರಾಜ್ಯ ಸರ್ಕಾರವು ಅರಣ್ಯಾಧಿಕಾರಿಗಳಲ್ಲಿ ಕೆಲವು ಅಧಿಕಾರಗಳನ್ನು ನಿಹಿತಗೊಳಿಸುವುದು.–** (1) ರಾಜ್ಯ ಸರ್ಕಾರವು, ಯಾರೇ ಅರಣ್ಯಾಧಿಕಾರಿಯಲ್ಲಿ ಈ ಮುಂದಿನ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ನಿಹಿತಗೊಳಿಸಬಹುದು, ಎಂದರೆ,–

(ಎ) ಯಾವುದೇ ಭೂಮಿಯ ಮೇಲೆ ಪ್ರವೇಶಿಸಲು, ಮತ್ತು ಅದನ್ನು ಮೋಜಣಿ ಮಾಡಲು, ಗಡಿ ಗುರುತು ಮಾಡಲು ಮತ್ತು ಅದರ ನಕಾಶೆಯನ್ನು ತಯಾರಿಸಲು ಅಧಿಕಾರ;

(ಬಿ) ಸಾಕ್ಷಿದಾರರ ಹಾಜರಾತಿಯನ್ನು ಮತ್ತು ದಸ್ತಾವೇಜುಗಳು ಹಾಗೂ ಭೌತಿಕ ವಸ್ತುಗಳನ್ನು ಹಾಜರುಪಡಿಸುವಂತೆ ಒತ್ತಾಯಿಸುವ ಸಿವಿಲ್ ನ್ಯಾಯಾಲಯದ ಅಧಿಕಾರಗಳು;

(ಸಿ) ದಂಡ ಪ್ರಕ್ರಿಯಾ ಸಂಹಿತೆ, 1898ರ (1898ರ 5) ಮೇರೆಗೆ ಶೋಧನಾ ವಾರಂಟನ್ನು ಹೊರಡಿಸಲು ಅಧಿಕಾರ; ಮತ್ತು

(ಡಿ) ಅರಣ್ಯ ಅಪರಾಧಗಳ ಬಗ್ಗೆ ವಿಚಾರಣೆಯನ್ನು ನಡೆಸಲು ಮತ್ತು ಅಂಥ ವಿಚಾರಣೆಯ ಕ್ರಮದಲ್ಲಿ ಸಾಕ್ಷ್ಯಗಳನ್ನು ಸ್ವೀಕರಿಸಲು ಮತ್ತು ದಾಖಲು ಮಾಡುವ ಅಧಿಕಾರ.

(2) (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ದಾಖಲು ಮಾಡಿಕೊಂಡ ಯಾವುದೇ ಸಾಕ್ಷ್ಯವು ಮ್ಯಾಜಿಸ್ಟ್ರೇಟನ ಮುಂದೆ ಆ ತರುವಾಯದ ಯಾವುದೇ ವಿಚಾರಣೆಯಲ್ಲಿ ಅಂಗೀಕಾರಾರ್ಹವಾಗಿರತಕ್ಕದ್ದು; ಆದರೆ, ಅದನ್ನು ಆಪಾದಿತ ವ್ಯಕ್ತಿಯ ಸಮಕ್ಷಮದಲ್ಲಿ ತೆಗೆದುಕೊಂಡಿದ್ದಿರಬೇಕು.

**73. ಅರಣ್ಯಾಧಿಕಾರಿಗಳನ್ನು ಲೋಕ ನೌಕರರೆಂದು ಭಾವಿಸುವುದು.**- ಎಲ್ಲಾ ಅರಣ್ಯಾಧಿಕಾರಿಗಳನ್ನು ಭಾರತ ದಂಡ ಸಂಹಿತೆಯ (1860ರ 45) ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**74. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗೆ ರಕ್ಷಣೆ.**- ಈ ಅಧಿನಿಯಮದ ಮೇರೆಗೆ ಯಾರೇ ಲೋಕ ನೌಕರನು ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯಕ್ಕಾಗಿ ಅವನ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ.

**75. ಅರಣ್ಯಾಧಿಕಾರಿಯು ವ್ಯಾಪಾರ ಮಾಡದಿರುವುದು.**- ರಾಜ್ಯ ಸರ್ಕಾರದ ಲಿಖಿತ ಅನುಮತಿ ಪಡೆದಿದ್ದ ಹೊರತು ಯಾರೇ ಅರಣ್ಯಾಧಿಕಾರಿಯು ಯಜಮಾನ ಅಥವಾ ಏಜೆಂಟನೆಂದು, ಚೌಬೀನೆ ಅಥವಾ ಇತರ ಅರಣ್ಯೋತ್ಪನ್ನದ ವ್ಯಾಪಾರವನ್ನು ಮಾಡತಕ್ಕದ್ದಲ್ಲ ಅಥವಾ ಯಾವುದೇ ಅರಣ್ಯದ ಯಾವುದೇ ಗುತ್ತಿಗೆಯಲ್ಲಿ ಅಥವಾ ಈ ಅಧಿನಿಯಮವು ವ್ಯಾಪ್ತವಾಗುವಂಥ ರಾಜ್ಯ ಕ್ಷೇತ್ರಗಳ ಒಳಗೆ ಅಥವಾ ಹೊರಗೆ ಯಾವುದೇ ಅರಣ್ಯ ಕೆಲಸವನ್ನು ನಡೆಸುವುದಕ್ಕಾಗಿರುವ ಯಾವುದೇ ಕರಾರಿನಲ್ಲಿ ಹಿತಾಸಕ್ತನಾಗಿರತಕ್ಕದ್ದಲ್ಲ ಅಥವಾ ಹಿತಾಸಕ್ತನಾಗತಕ್ಕದ್ದಲ್ಲ.

## ಅಧ್ಯಾಯ - XII

### ಪೂರಕ ನಿಯಮಗಳು

**76. ನಿಯಮಗಳನ್ನು ರಚಿಸಲು ಹೆಚ್ಚಿನ ಅಧಿಕಾರಗಳು.**- ರಾಜ್ಯ ಸರ್ಕಾರವು,-

(ಎ) ಈ ಅಧಿನಿಯಮದ ಮೇರೆಗೆ ಯಾರೇ ಅರಣ್ಯಾಧಿಕಾರಿಯ ಅಧಿಕಾರಿಗಳು ಮತ್ತು ಕರ್ತವ್ಯಗಳನ್ನು ನಿಯಮಿಸಲು ಮತ್ತು ಪರಿಮಿತಿಗೊಳಿಸಲು;

(ಬಿ) ಈ ಅಧಿನಿಯಮದ ಮೇರೆಗಿನ ಜುಲ್ಮಾನೆಗಳು ಮತ್ತು ಮುಟ್ಟುಗೋಲುಗಳಿಂದ ಬರುವ ಹುಟ್ಟುವಳಿಗಳಿಂದ ಅಧಿಕಾರಿಗಳಿಗೆ ಮತ್ತು ಮಾಹಿತಿದಾರರಿಗೆ ಸಂದಾಯ ಮಾಡಬೇಕಾದ ಸಂಭಾವನೆಯ ಮೊತ್ತವನ್ನು ವಿನಿಯಮಗೊಳಿಸಲು;

(ಸಿ) ಖಾಸಗಿ ವ್ಯಕ್ತಿಗಳಿಗೆ ಸೇರಿದ ಅಥವಾ ಅವರ ಅಧಿಭೋಗದಲ್ಲಿರುವ ಭೂಮಿಗಳ ಮೇಲೆ ಬೆಳೆದಿರುವ, ಆದರೆ ಸರ್ಕಾರಕ್ಕೆ ಸೇರಿದ ಮರಗಳ ಮತ್ತು ಚೌಬೀನೆಗಳ ಪರಿರಕ್ಷಣೆ, ಪುನರುತ್ಪಾದನೆ ಮತ್ತು ವಿಲೆಗಾಗಿ; ಮತ್ತು

(ಡಿ) ಸಾಮಾನ್ಯವಾಗಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು

- ನಿಯಮಗಳನ್ನು ರಚಿಸಬಹುದು.

**77. ನಿಯಮಗಳ ಉಲ್ಲಂಘನೆಗಾಗಿ ದಂಡಗಳು.**- ಈ ಅಧಿನಿಯಮದ ಮೇರೆಗಿನ ಯಾವ ನಿಯಮದ ಉಲ್ಲಂಘನೆಗಾಗಿ ಯಾವುದೇ ವಿಶೇಷ ದಂಡವನ್ನು ಉಪಬಂಧಿಸಲಾಗಿಲ್ಲವೋ ಆ ನಿಯಮವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಒಂದು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**78. ನಿಯಮಗಳು ಯಾವಾಗ ಕಾನೂನಿನ ಬಲವನ್ನು ಹೊಂದಿರುವುದು.**- ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಎಲ್ಲಾ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಅವು ಈ ಅಧಿನಿಯಮಕ್ಕೆ ಸಂಗತವಾಗಿರುವಷ್ಟರ ಮಟ್ಟಿಗೆ, ಈ ಅಧಿನಿಯಮದಲ್ಲಿಯೇ ರಚಿತವಾಗಿದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

## ಅಧ್ಯಾಯ - XIII

### ಸಂಕೀರ್ಣ

**79. ಅರಣ್ಯಾಧಿಕಾರಿಗಳು ಮತ್ತು ಪೊಲೀಸು ಅಧಿಕಾರಿಗಳಿಗೆ ಸಹಾಯ ಮಾಡಲು ಸಾರ್ವಜನಿಕ ವ್ಯಕ್ತಿಗಳು ಬದ್ಧರಾಗಿರುವುದು.**- (1) ಮೀಸಲಿಟ್ಟ ಅಥವಾ ಸಂರಕ್ಷಿತ ಅರಣ್ಯದಲ್ಲಿ ಯಾವುದೇ ಹಕ್ಕನ್ನು ಚಲಾಯಿಸುವ ಅಥವಾ ಅಂಥ ಅರಣ್ಯದಿಂದ ಯಾವುದೇ ಅರಣ್ಯ ಉತ್ಪನ್ನವನ್ನು ತೆಗೆದುಕೊಂಡು ಹೋಗಲು ಅಥವಾ ಅದರಲ್ಲಿನ ಚೌಬೀನೆಯನ್ನು ಕತ್ತರಿಸಲು ಮತ್ತು ಸ್ಥಳಾಂತರಿಸಲು ಅಥವಾ ಅದರಲ್ಲಿ ಜಾನುವಾರುಗಳನ್ನು ಮೇಯಿಸಲು ಅನುಮತಿ ಪಡೆದಿರುವ ಪ್ರತಿಯೊಬ್ಬ ವ್ಯಕ್ತಿಯೂ ಮತ್ತು ಅಂಥ ಅರಣ್ಯದಲ್ಲಿ ಯಾರೇ ಅಂಥ ವ್ಯಕ್ತಿಯು ನಿಯೋಜಿಸಿರುವ ಪ್ರತಿಯೊಬ್ಬ ವ್ಯಕ್ತಿಯು; ಮತ್ತು

ಅಂಥ ಅರಣ್ಯಕ್ಕೆ ಹೊಂದಿಕೊಂಡಿರುವ ಯಾವುದೇ ಗ್ರಾಮದಲ್ಲಿ ರಾಜ್ಯ ಸರ್ಕಾರವು ನಿಯೋಜಿಸಿರುವ ಅಥವಾ ಜನಸಮುದಾಯಕ್ಕೆ ಸಲ್ಲಿಸಬೇಕಾದ ಸೇವೆಗಳಿಗಾಗಿ ಸರ್ಕಾರದಿಂದ ಉಪಲಬ್ಧಗಳನ್ನು ಸ್ವೀಕರಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ಅರಣ್ಯ ಅಪರಾಧವನ್ನು ಮಾಡಿರುವುದಕ್ಕೆ ಅಥವಾ ಮಾಡುವ ಉದ್ದೇಶಕ್ಕೆ ಸಂಬಂಧಿಸಿದಂತೆ ತನಗೆ ತಿಳಿದಿರುವ ಯಾವುದೇ ಮಾಹಿತಿಯನ್ನು ಅನಾವಶ್ಯಕ ವಿಳಂಬವಿಲ್ಲದೆ ಅತಿ ಹತ್ತಿರದ ಅರಣ್ಯಾಧಿಕಾರಿ ಅಥವಾ ಪೊಲೀಸ್ ಅಧಿಕಾರಿಗೆ ಒದಗಿಸಲು ಬದ್ಧನಾಗಿರತಕ್ಕದ್ದು, ಮತ್ತು ಯಾರೇ ಅರಣ್ಯಾಧಿಕಾರಿಯು ಅಥವಾ ಪೊಲೀಸು ಅಧಿಕಾರಿಯು ಹಾಗೆ ಅಗತ್ಯಪಡಿಸಿರಲಿ ಅಥವಾ ಇಲ್ಲದಿರಲಿ,-

(ಎ) ಅಂಥ ಅರಣ್ಯದಲ್ಲಿ ಯಾವುದೇ ಕಾಡ್ಗಿಚ್ಚು ಹೊತ್ತಿಕೊಂಡಿರುವ ಬಗ್ಗೆ ಅವನಿಗೆ ತಿಳಿದಿದ್ದರೆ ಅಥವಾ ಅದರ ಬಗ್ಗೆ ಅವನು ಮಾಹಿತಿಯನ್ನು ಪಡೆದಿದ್ದರೆ, ಅದನ್ನು ಆರಿಸಲು;

(ಬಿ) ಅಂಥ ಅರಣ್ಯದ ಆಸುಪಾಸಿನಲ್ಲಿ ಯಾವುದೇ ಬೆಂಕಿಯು ಹೊತ್ತಿರುವ ಬಗ್ಗೆ ಅವನಿಗೆ ತಿಳಿದಿದ್ದರೆ ಅಥವಾ ಮಾಹಿತಿಯನ್ನು ಪಡೆದಿದ್ದರೆ, ಅವನ ಅಧಿಕಾರದಲ್ಲಿನ ಯಾವುದೇ ಕಾನೂನುಸಮ್ಮತ ಸಾಧನಗಳ ಮೂಲಕ ಅಂಥ ಅರಣ್ಯಕ್ಕೆ ಬೆಂಕಿಯು ಹರಡದಂತೆ ತಡೆಗಟ್ಟಲು

- ತಕ್ಷಣ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಯಾರೇ ಅರಣ್ಯಾಧಿಕಾರಿಯು ಅಥವಾ ಪೊಲೀಸ್ ಅಧಿಕಾರಿಯು,-

(ಸಿ) ಅಂಥ ಅರಣ್ಯದಲ್ಲಿ ಯಾವುದೇ ಅರಣ್ಯ ಅಪರಾಧವನ್ನು ಮಾಡದಂತೆ ತಡೆಗಟ್ಟುವಲ್ಲಿ; ಮತ್ತು

(ಡಿ) ಅಂಥ ಯಾವುದೇ ಅಪರಾಧವನ್ನು ಅಂಥ ಅರಣ್ಯದಲ್ಲಿ ಮಾಡಲಾಗಿದೆ ಎಂದು ನಂಬಲು ಕಾರಣವಿರುವಾಗ ಆ ಅಪರಾಧಿಯನ್ನು ಕಂಡುಹಿಡಿಯುವಲ್ಲಿ ಮತ್ತು ದಸ್ತಗಿರಿ ಮಾಡುವಲ್ಲಿ

- ಸಹಾಯವನ್ನು ಕೇಳಿದಾಗ ಅವರಿಗೆ ಸಹಾಯವನ್ನು ಮಾಡತಕ್ಕದ್ದು.

(2) ಯಾರೇ ವ್ಯಕ್ತಿಯು ಹಾಗೆ ಮಾಡಲು ಬದ್ಧನಾಗಿದ್ದು, ಯಾವುದೇ ಕಾನೂನು ಸಮ್ಮತ ಕಾರಣವಿಲ್ಲದೇ (ಅದನ್ನು ರುಜುವಾತುಪಡಿಸುವ ಭಾರವು ಅಂಥ ವ್ಯಕ್ತಿಯ ಮೇಲೆ ಇರತಕ್ಕದ್ದು),-

(ಎ) (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದ ಯಾವುದೇ ಮಾಹಿತಿಯನ್ನು ಹತ್ತಿರದ ಅರಣ್ಯಾಧಿಕಾರಿ ಅಥವಾ ಪೊಲೀಸು ಅಧಿಕಾರಿಗೆ ಅನಾವಶ್ಯಕ ವಿಳಂಬವಿಲ್ಲದೆ ಒದಗಿಸಲು ತಪ್ಪಿದರೆ;

(ಬಿ) (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಮೀಸಲಿಟ್ಟ ಅಥವಾ ಸಂರಕ್ಷಿತ ಅರಣ್ಯದಲ್ಲಿನ ಯಾವುದೇ ಕಾಡ್ಗಿಚ್ಚನ್ನು ಆರಿಸುವುದಕ್ಕಾಗಿ ಕ್ರಮವನ್ನು ಕೈಗೊಳ್ಳಲು ತಪ್ಪಿದರೆ;

(ಸಿ) (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಅಂಥ ಅರಣ್ಯದ ಆಸುಪಾಸಿನಲ್ಲಿನ ಯಾವುದೇ ಬೆಂಕಿಯು ಅಂಥ ಅರಣ್ಯಕ್ಕೆ ಹರಡದಂತೆ ತಡೆಗಟ್ಟಲು ತಪ್ಪಿದರೆ; ಅಥವಾ

(ಡಿ) ಅಂಥ ಅರಣ್ಯದಲ್ಲಿ ಯಾವುದೇ ಅರಣ್ಯ ಅಪರಾಧವನ್ನು ಮಾಡುವುದನ್ನು ತಡೆಗಟ್ಟುವಲ್ಲಿ ಅಥವಾ ಅಂಥ ಅರಣ್ಯದಲ್ಲಿ ಯಾವುದೇ ಅಂಥ ಅಪರಾಧವನ್ನು ಮಾಡಲಾಗಿದೆ ಎಂದು ನಂಬಲು ಕಾರಣವಿರುವಾಗ ಆ ಅಪರಾಧಿಯನ್ನು ಕಂಡುಹಿಡಿಯುವಲ್ಲಿ ಮತ್ತು ದಸ್ತಗಿರಿ ಮಾಡುವಲ್ಲಿ ಅವನ ಸಹಾಯವನ್ನು ಕೇಳುವ ಯಾರೇ ಅರಣ್ಯಾಧಿಕಾರಿ ಅಥವಾ ಪೊಲೀಸು ಅಧಿಕಾರಿಗೆ ಸಹಾಯ ಮಾಡಲು ತಪ್ಪಿದರೆ

- ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಇನ್ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**80. ಸರ್ಕಾರ ಮತ್ತು ಇತರ ವ್ಯಕ್ತಿಗಳ ಜಂಟಿ ಸ್ವತ್ತಾದ ಅರಣ್ಯಗಳ ವ್ಯವಸ್ಥಾಪನೆ.-** (1) ಸರ್ಕಾರವು ಮತ್ತು ಯಾರೇ ವ್ಯಕ್ತಿಯು ಯಾವುದೇ ಅರಣ್ಯ ಅಥವಾ ಬಂಜರು ಭೂಮಿಯಲ್ಲಿ ಅಥವಾ ಅದರ ಒಟ್ಟು ಉತ್ಪನ್ನದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಜಂಟಿಯಾಗಿ ಹಿತಾಸಕ್ತಿಯನ್ನು ಹೊಂದಿದ್ದರೆ, ರಾಜ್ಯ ಸರ್ಕಾರವು,-

(ಎ) ಅಂಥ ವ್ಯಕ್ತಿಗೆ ಅಂಥ ಅರಣ್ಯ, ಬಂಜರು ಭೂಮಿ ಅಥವಾ ಉತ್ಪನ್ನದಲ್ಲಿನ ಅವನ ಹಿತಾಸಕ್ತಿಯ ಬಗ್ಗೆ ವಿವರಣೆ ನೀಡಿ ಅದರ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳಬಹುದು; ಅಥವಾ

(ಬಿ) ಅರಣ್ಯ, ಬಂಜರು ಭೂಮಿ ಅಥವಾ ಉತ್ಪನ್ನದ ವ್ಯವಸ್ಥಾಪನೆ ಮತ್ತು ಅದರಲ್ಲಿನ ಎಲ್ಲಾ ಪಕ್ಷಕಾರರ ಹಿತಾಸಕ್ತಿಗಳ ಬಗ್ಗೆ ಜಂಟಿಯಾಗಿ ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿಯು, ಅದರ ವ್ಯವಸ್ಥಾಪನೆಯನ್ನು ಮಾಡುವುದಕ್ಕಾಗಿ ತಾನು ಅವಶ್ಯವೆಂದು ಭಾವಿಸುವಂಥ ವಿನಿಯಮಗಳನ್ನು ಹೊರಡಿಸಬಹುದು.

(2) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಯಾವುದೇ ಅರಣ್ಯ, ಬಂಜರುಭೂಮಿ ಅಥವಾ ಉತ್ಪನ್ನದ ವ್ಯವಸ್ಥಾಪನೆಯನ್ನು ವಹಿಸಿಕೊಂಡಿರುವಾಗ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧ್ಯಾಯ II ಮತ್ತು ಅಧ್ಯಾಯ VI ರಲ್ಲಿ ಒಳಗೊಂಡಿರುವ ಯಾವುವೇ ಉಪಬಂಧವು ಅಂಥ ಅರಣ್ಯ, ಬಂಜರು ಭೂಮಿ ಅಥವಾ ಉತ್ಪನ್ನಕ್ಕೆ ಅನ್ವಯವಾಗತಕ್ಕದ್ದೆಂದು ಘೋಷಿಸಬಹುದು ಮತ್ತು ಆ ತರುವಾಯ ಅಂಥ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕದ್ದು.

**81. ಯಾವ ಸೇವೆಗಾಗಿ ಸರ್ಕಾರಿ ಅರಣ್ಯದ ಉತ್ಪನ್ನದಲ್ಲಿನ ಒಂದು ಭಾಗವನ್ನು ಉಪಯೋಗಿಸಲಾಗುತ್ತಿದೆಯೋ ಆ ಸೇವೆಯನ್ನು ನೆರವೇರಿಸಲು ತಪ್ಪುವುದು.-** ಅಂಥ ಅರಣ್ಯಕ್ಕೆ ಸಂಬಂಧಿಸಿದ ಯಾವುದೇ ಸೇವೆಯನ್ನು ಕ್ರಮಬದ್ಧವಾಗಿ ನೆರವೇರಿಸುವ ಷರತ್ತಿನ ಮೇಲೆ, ಸರ್ಕಾರದ ಸ್ವತ್ತಾಗಿರುವಂಥ ಅಥವಾ ಸರ್ಕಾರವು ಮಾಲೀಕತ್ವದ ಹಕ್ಕುಗಳನ್ನು ಹೊಂದಿರುವಂಥ, ಯಾವುದೇ ಅರಣ್ಯೋತ್ಪನ್ನದಲ್ಲಿನ ಒಂದು ಭಾಗಕ್ಕೆ, ಯಾರೇ ವ್ಯಕ್ತಿಯು ಹಕ್ಕನ್ನು ಹೊಂದಿದ್ದು, ಅವನು ಅಂಥ ಸೇವೆಯನ್ನು ಹಾಗೆ ನೆರವೇರಿಸುತ್ತಿಲ್ಲವೆಂಬ ಸಂಗತಿಯು ರಾಜ್ಯ ಸರ್ಕಾರಕ್ಕೆ ಮನದಟ್ಟಾದ ಸಂದರ್ಭದಲ್ಲಿ, ಅಂಥ ಭಾಗವನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅದು ಗುರಿಯಾಗತಕ್ಕದ್ದು:

ಪರಂತು, ಆ ಭಾಗಕ್ಕೆ ಹಕ್ಕುಳ್ಳವನಾದ ವ್ಯಕ್ತಿಯನ್ನು ಮತ್ತು ಅಂಥ ಸೇವೆಯನ್ನು ಕ್ರಮಬದ್ಧವಾಗಿ ನೆರವೇರಿಸಿರುವುದನ್ನು ರುಜುವಾತುಪಡಿಸಲು ಅವನು ಹಾಜರುಪಡಿಸಬಹುದಾದಂಥ ಸಾಕ್ಷ್ಯವು ಯಾವುದಾದರೂ ಇದ್ದರೆ ಆ ಸಾಕ್ಷ್ಯವನ್ನು, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಕ್ರಮಬದ್ಧವಾಗಿ, ನೇಮಕ ಮಾಡಿರುವ ಅಧಿಕಾರಿಯು ಸುನಾವಣೆ ಮಾಡುವವರೆಗೆ, ಅಂಥ ಯಾವುದೇ ಭಾಗವನ್ನು, ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದಲ್ಲ.

**82. ಸರ್ಕಾರಕ್ಕೆ ಬಾಕಿಯಾದ ಹಣದ ವಸೂಲಿ.-** ಈ ಅಧಿನಿಯಮದ ಮೇರೆಗೆ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಅಥವಾ ಯಾವುದೇ ಅರಣ್ಯೋತ್ಪನ್ನದ ಬೆಲೆಯು ಅಥವಾ ಅಂಥ ಉತ್ಪನ್ನಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮವನ್ನು ಜಾರಿಗೊಳಿಸುವಲ್ಲಿ ವಹಿಸಲಾದ ವೆಚ್ಚಗಳ ನಿಮಿತ್ತ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಎಲ್ಲಾ ಹಣವನ್ನು, ಬಾಕಿಯಾಗಿರುವಾಗ ಸಂದಾಯ ಮಾಡಿರದಿದ್ದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಅದನ್ನು ಭೂಕಂದಾಯದ ಬಾಕಿ ಎಂಬಂತೆ ವಸೂಲು ಮಾಡಬಹುದು.

**83. ಅಂಥ ಹಣಕ್ಕಾಗಿ ಅರಣ್ಯೋತ್ಪನ್ನದ ಮೇಲೆ ಧಾರಣಾಧಿಕಾರ.-** (1) ಯಾವುದೇ ಅಂಥ ಹಣವನ್ನು ಯಾವುದೇ ಅರಣ್ಯೋತ್ಪನ್ನಕ್ಕಾಗಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾಗಿರುವಾಗ ಅದರ ಮೊಬಲಗು ಅಂಥ ಉತ್ಪನ್ನದ ಮೇಲೆ ಮೊದಲ ಋಣಭಾರನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅಂಥ ಮೊಬಲಗನ್ನು ಸಂದಾಯ ಮಾಡುವವರೆಗೆ ಅರಣ್ಯಾಧಿಕಾರಿಯು ಅಂಥ ಉತ್ಪನ್ನವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು.

(2) ಅಂಥ ಮೊಬಲಗು ಬಾಕಿಯಾದಾಗ ಅದನ್ನು ಸಂದಾಯ ಮಾಡದಿದ್ದರೆ ಆ ಅರಣ್ಯಾಧಿಕಾರಿಯು ಅಂಥ ಉತ್ಪನ್ನವನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಬಹುದು ಮತ್ತು ಮಾರಾಟದ ಉತ್ಪನ್ನಗಳನ್ನು ಅಂಥ ಮೊಬಲಗನ್ನು ತೀರಿಸಲು ಮೊದಲು ವಿನಿಯೋಗಿಸತಕ್ಕದ್ದು.

(3) ಹೆಚ್ಚಳವು ಯಾವುದಾದರೂ ಇದ್ದರೆ, ಅದನ್ನು ಆ ಮಾರಾಟದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ಅದಕ್ಕೆ ಹಕ್ಕುಳ್ಳವನಾದ ವ್ಯಕ್ತಿಯು ಕ್ಲೇಮು ಮಾಡದಿದ್ದರೆ ಅದು ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದು.

**84. ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯು ಭೂ ಆರ್ಜನಾ ಅಧಿನಿಯಮ, 1894ರ ಮೇರೆಗೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯವಾಗಿರುವುದಾಗಿ ಭಾವಿಸುವುದು.-** ಈ ಅಧಿನಿಯಮದ ಯಾವುದೇ ಉದ್ದೇಶಕ್ಕಾಗಿ ಯಾವುದೇ ಭೂಮಿಯು ಅಗತ್ಯವಾಗಿದೆ ಎಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಾಗಲೆಲ್ಲಾ, ಅಂಥ ಭೂಮಿಯನ್ನು, ಭೂ ಆರ್ಜನಾ ಅಧಿನಿಯಮ, 1894 (1894ರ 1)ರ 4ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿರುವ ಭೂಮಿಯಾಗಿರುವುದಾಗಿ ಭಾವಿಸತಕ್ಕದ್ದು.

**85. ಬಂಧಪತ್ರದ ಮೇರೆಗೆ ಬಾಕಿಯಾದ ದಂಡಗಳ ವಸೂಲಿ.-** ಯಾರೇ ವ್ಯಕ್ತಿಯು ಈ ಅಧಿನಿಯಮದ ಯಾವುದೇ ಉಪಬಂಧಕ್ಕನುಸಾರವಾಗಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಪಾಲನೆಯಲ್ಲಿ ಯಾವುದೇ ಕರ್ತವ್ಯ ಅಥವಾ ಕಾರ್ಯವನ್ನು ನೆರವೇರಿಸಲು ಯಾವುದೇ ಬಂಧಪತ್ರ ಅಥವಾ ಲಿಖಿತದ ಮೂಲಕ ತನ್ನನ್ನು ಬದ್ಧಗೊಳಿಸಿಕೊಂಡಾಗ, ಅಥವಾ ಯಾವುದೇ ಬಂಧಪತ್ರದ ಅಥವಾ ಲಿಖಿತದ ಮೂಲಕ ಅವನು ಅಥವಾ ಅವನ ಸೇವಕರು ಹಾಗೂ ಏಜೆಂಟರುಗಳು ಯಾವುದೇ ಕಾರ್ಯವನ್ನು ಮಾಡುವುದಿಲ್ಲವೆಂದು ಒಡಂಬಡಿಕೆ ಮಾಡಿಕೊಂಡಾಗ, ಅಂಥ ಬಂಧಪತ್ರ ಅಥವಾ ಲಿಖಿತದ ಷರತ್ತುಗಳ ಉಲ್ಲಂಘನೆಯ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ಮೊಬಲಗೆಂದು ಅವುಗಳಲ್ಲಿ ನಮೂದು ಮಾಡಿರುವ ಇಡೀ ಮೊತ್ತವನ್ನು, ಭಾರತ ಕರಾರು ಅಧಿನಿಯಮ, 1872 (1872ರ 9)ರ 74ನೇ ಪ್ರಕರಣದಲ್ಲಿ ಏನೇ ಇದ್ದರೂ, ಅಂಥ ಉಲ್ಲಂಘನೆಯ ಸಂದರ್ಭದಲ್ಲಿ ಅದು ಭೂಕಂದಾಯದ ಬಾಕಿಯಾಗಿದ್ದಿದ್ದರೆ ಹೇಗೋ ಹಾಗೆ ಅವನಿಂದ ವಸೂಲು ಮಾಡಬಹುದು.

**85ಎ. ಕೇಂದ್ರ ಸರ್ಕಾರದ ಹಕ್ಕುಗಳ ಬಗ್ಗೆ ಉಳಿಸುವಿಕೆ.-** ಈ ಅಧಿನಿಯಮದಲ್ಲಿರುವುದು ಯಾವುದೂ, ಯಾವುದೇ ರಾಜ್ಯದಲ್ಲಿ ನಿಹಿತವಾಗಿಲ್ಲದ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಆದೇಶವನ್ನು ಹೊರಡಿಸಲು ಅಥವಾ ಯಾವುದೇ ಕಾರ್ಯವನ್ನು ಮಾಡಲು ಆ ರಾಜ್ಯದ ಸರ್ಕಾರವನ್ನು ಅಧಿಕೃತಗೊಳಿಸತಕ್ಕದ್ದಲ್ಲ ಅಥವಾ ಸಂಬಂಧಪಟ್ಟ ಸರ್ಕಾರದ ಸಮ್ಮತಿ ಇಲ್ಲದೆ ಕೇಂದ್ರ ಸರ್ಕಾರದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ಯಾವುವೇ ಹಕ್ಕುಗಳಿಗೆ ಅನ್ಯಥಾ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**86. ನಿರಸನಗಳು.-** ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 1958 (1958ರ 2)ರ 2ನೇ ಪ್ರಕರಣದ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

**ಅನುಸೂಚಿ.-** ನಿರಸನಗೊಳಿಸಿದ ಅಧಿನಿಯಮಿತಿಗಳು - ಅದರ 2ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

* * *